# ಅಧ್ಯಯನ 5 Study V

# ನೂತನ ಸೃಷ್ಟಿಯ ವ್ಯವಸ್ಥಾ ಕ್ರಮ

## THE ORGANIZATION OF THE NEW CREATION

**ಆತ್ಮೀಕ ಮಂದಿರಕ್ಕಾಗಿ ಜೀವವುಳ್ಳ ಕಲ್ಲುಗಳು – ಹೆಸರಿಗೆ ಮಾತ್ರದವರು vs. ನಿಜವಾದ ನೂತನ ಸೃಷ್ಟಿ – "ದೇವರ ರಹಸ್ಯ" ಮತ್ತು "ದುಷ್ಟತ್ವದ ರಹಸ್ಯ"– ಮಹಾ ಕ್ರಿಸ್ತವಿರೋಧಿಯ ವ್ಯವಸ್ಥೆ – ನಂಬಲರ್ಹವಾದ ವೇದೋಕ್ತಿಗಳು– ಪ್ರಪಂಚಕ್ಕೆ ಮತ್ತು ಚರ್ಚಿಯಾನಿಟಿಗೆ ನೀಡಲ್ಪಟ್ಟಿರುವ ಸ್ವಾತಂತ್ರ್ಯ– ಗೊಂದಲದ ಕಾರಣ ಕ್ರಮ – "ಸೂಕ್ತ ಸಮಯದಲ್ಲಿ" – " ಯುಗಗಳ ಅಂತ್ಯ" – ದೇವರು ನೆಟ್ಟ ದ್ರಾಕ್ಷೆಬಳ್ಳಿ –" ಕುರಿಮರಿಯ ಹನ್ನೆರಡು ಅಪೋಸ್ತಲರುಗಳು" – ಯೂದನ ಉತ್ತರಾಧಿಕಾರಿಯಾದ ಪೌಲನು – ಅಪೋಸ್ತಲರ ಸಂಖ್ಯೆ ಹನ್ನೆರಡಕ್ಕೆ ಸೀಮಿತಗೊಂಡದ್ದು – ಅಪೋಸ್ತಲರ ನಿಯೋಗ – ಅಪೋಸ್ತಲರ ಪ್ರಬಲವಾದ ಗುಣಲಕ್ಷಣಗಳು – ಅಪೋಸ್ತಲನಾದ ಪೌಲನು ಇತರ ಅಪೋಸ್ತಲರುಗಳಿಗಿಂತ ಒಂದು ಕಣವಾದರೂ ಕಡಿಮೆಯಾದವನಲ್ಲ – ಹನ್ನೆರಡು ಮಂದಿಯ ಸ್ಫೂರ್ತಿ – ಅಪೋಸ್ತಲರ ಬರಹಗಳ ದೈವಿಕ ಮೇಲ್ವಿಚಾರಣೆ – " ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು" – ಸುವಾರ್ತೆಗಳಲ್ಲಿನ ಸಾಮರಸ್ಯ – ಅಧಿಕಾರದ ಕೀಲಿಕೈಗಳು – ಅಪೋಸ್ತೋಲಿಕ ಖಾತರಿ – ಆಕ್ಷೇಪಗಳ ಪರ್ಯಾಲೋಚನೆ – " ನಿಮ್ಮ ಒಡೆಯನು ಒಬ್ಬನೇ" – ನಿಜವಾದ ಸಭೆಯು " ದೇವರ ಹಿಂಡು" – ಅಪೋಸ್ತಲರು, ಪ್ರವಾದಿಗಳು, ಸುವಾರ್ತಿಕರು, ಉಪದೇಶಕರು – ನೂತನ ಸೃಷ್ಟಿಯಲ್ಲಿ ಕರ್ತನ ವ್ಯವಸ್ಥೆಯು ನಿರ್ಬಂಧವಿಲ್ಲದೆ ಪೂರ್ಣಗೊಂಡಿದೆ – ಆತನು ಅದರ ಮೇಲ್ವಿಚಾರಕನೂ ಸಹಾ – ಆತ್ಮನ ವರಗಳು ಅದರ ಅಗತ್ಯತೆಯೊಂದಿಗೆ ಸ್ಥಗಿತಗೊಂಡಿವೆ – ಸಂತರುಗಳಿಗೆ ಒಮ್ಮೆ ನೀಡಲ್ಪಟ್ಟಿರುವ ನಂಬಿಕೆ – ಬಲವಂತಿಕೆಯ ಒಕ್ಕೂಟ, ಕ್ರಿಸ್ತ ವಿರೋಧಿ – ಬಿಷಪ್ಪರುಗಳು, ಸಭಾ ಹಿರಿಯರು, ಡೀಕನರುಗಳು – "ಪ್ರವಾದಿ"ಯ ನಿಜವಾದ ಮಹತ್ವ – ಹಿರಿಯತ್ವಕ್ಕೆ ನಮ್ರತೆ ಅಗತ್ಯ – ಇತರ ಅಗತ್ಯವಾದ ಅರ್ಹತೆಗಳು – ಡೀಕನರುಗಳು – ಪಾದ್ರಿಗಳು ಮತ್ತಿತರ ದೇವರ ಸೇವಕರುಗಳು – ಸಭೆಯಲ್ಲಿನ ಉಪದೇಶಕರುಗಳು – ಅನೇಕರು ಬೊಧಿಸಲು ಶಕ್ತರಾಗಬೇಕು "ಸಹೋದರರೇ, ನಿಮ್ಮಲ್ಲಿ ಹೆಚ್ಚಿನವರು ಬೋಧಕರುಗಳಾಗಬೇಕಿಲ್ಲ" –ಯಾರೊಬ್ಬರೂ ನಿಮಗೆ ಬೋಧಿಸುವ ಅವಶ್ಯಕತೆ ಇಲ್ಲ – ಯಾರಿಗೆ ಬೋಧಿಸಲ್ಪಟ್ಟಿದೆಯೋ ಮತ್ತು ಯಾರಿಗೆ ಉಪದೇಶಿಸಲ್ಪಟ್ಟಿದೆಯೊ–ಸಭೆಯಲ್ಲಿ ಸ್ತ್ರೀಯರ ಕಾರ್ಯಕ್ಷೇತ್ರ – ಸ್ತ್ರಿಯರು ಜೊತೆ ಸೇವಕರುಗಳಾಗಿ – "ಆಕೆಯು ಮುಸುಕು ಹಾಕಿಕೊಳ್ಳಲಿ".**

ಪ್ರಥಮ ಪುನರುತ್ಥಾನವಾಗುವವರೆಗೆ ನೂತನ ಸೃಷ್ಟಿಯು ತನ್ನ ಪರಿಪೂರ್ಣತೆಯನ್ನು ತಲುಪುವುದಿಲ್ಲ, ಹೀಗೆ ಅದರ ವ್ಯವಸ್ಥೆಯು ಆಗ ಮುಕ್ತಾಯಗೊಳ್ಳುವುದು. ಮಂದಿರದ ಚಿತ್ರವು ಇದನ್ನು ಪ್ರತಿಪಾದಿಸುತ್ತದೆ: ಅಪೋಸ್ತಲನು ವಿವರಿಸುವಂತೆ (1 ಪೇತ್ರ 2:5 ನೋಡಿರಿ) ಜೀವವುಳ್ಳ ಕಲ್ಲುಗಳೆಂದು ನಾವೀಗ ಕರೆಯಲ್ಪಟ್ಟಿದ್ದು, ಅಥವಾ ವೈಭವಯುತ ದೇವಾಲಯದ ವಿವಿಧ ಭಾಗಗಳಿಗೆ ಆಮಂತ್ರಿಸಲ್ಪಟ್ಟಿದ್ದು, ಕ್ರಿಸ್ತನ ಬಳಿಗೆ ಬಂದಿದ್ದೇವೆ. ಆತನು ತಂದೆಯ ಪ್ರತಿನಿಧಿಯಾಗಿ ನಮ್ಮನ್ನು ದೇವರು ಮತ್ತು ಭೂಲೋಕವು ಸಂಧಿಸಲಿರುವ ಭವಿಷ್ಯದ ವೈಭವಯುತ ಆಲಯದ ವಿವಿಧ ಭಾಗಗಳಿಗೆ ರೂಪಿಸುತ್ತಾನೆ, ಕೆತ್ತುತ್ತಾನೆ, ಸರಿಹೊಂದಿಸುತ್ತಾನೆ ಮತ್ತು ಹೊಳಪಿಸುತ್ತಾನೆ. ಸೊಲೊಮೋನನು ಕಟ್ಟಿದ ಸಾಂಕೇತಿಕ ಮಂದಿರದಲ್ಲಿ ಪ್ರತಿಯೊಂದು ಕಲ್ಲೂ ಕಲ್ಲುಗಣಿಯಲ್ಲಿಯೇ ಆ ಕಟ್ಟಡದ ಸೂಕ್ತ ಸ್ಥಳಕ್ಕೆ ಹೊಂದಿಕೆಯಾಗುವಂತೆ ತಯಾರಿಸಲ್ಪಟ್ಟ ಹಾಗೆಯೇ ನಮ್ಮಲ್ಲಿಯೂ ಸಹ ಎಲ್ಲಾ ಹೊಂದಿಕೆಯ ಕಾರ್ಯಗಳೂ ಪ್ರಸ್ತುತ ಜೀವನದಲ್ಲಿಯೇ ಜರಗುತ್ತವೆ. ಅದೇ ಮಾದರಿಯಲ್ಲಿ ಎಲ್ಲಾ ರೂಪಗೊಂಡ ಕಲ್ಲುಗಳು ಸುತ್ತಿಗೆಯ ಸದ್ದಿಲ್ಲದೆ ಅದರದರ ಸ್ಥಳವನ್ನು ಸೇರಿಕೊಂಡಂತೆ ಪ್ರತಿಸಂಕೇತವಾದ ಜೀವವುಳ್ಳ ಕಲ್ಲುಗಳೂ ಸಹ ಸೇರಿಕೊಳ್ಳುತ್ತವೆ. ಅವು ಈಗ ಕರ್ತನ ಸಿದ್ಧತೆಗೆ ಸಂತೋಷದಿಂದ ತಮ್ಮನ್ನು ಒಪ್ಪಿಸಿಕೊಟ್ಟಿವೆ ಮತ್ತು ಮೂಲೆ ಕಲ್ಲಾಗಿ ತೆರೆಯ ಆಚೆಯಲ್ಲಿ ಆತನೊಂದಿಗೆ ಯಾವುದೇ ಗೊಂದಲಗಳಿಲ್ಲದೆ, ಮತ್ತು ಪೂರ್ವ ತಯಾರಿಮಾಡುವ ಅಥವಾ ಸಿದ್ದಪಡಿಸುವ ಕಾರ್ಯಗಳಿಲ್ಲದೆ ಸಂಪೂರ್ಣವಾಗಿ ರಚಿಸಲ್ಪಟ್ಟಿದೆ.

ಹೇಗೂ ದೇವರ ವಾಕ್ಯವು ಈ ಜೀವವುಳ್ಳ ಕಲ್ಲುಗಳ ಸಿದ್ಧತಾ ಅವಧಿಯಲ್ಲಿ ಅವುಗಳ ಏಕತೆಯನ್ನು ಅಥವಾ ಸಂಬಂಧಗಳನ್ನು ಗುರುತಿಸುತ್ತವೆ. ನಿಜವಾಗಿಯೂ ಅವು ಸಿದ್ಧತೆಯ ಒಂದು ಹೆಜ್ಜೆ ಮುಂದಕ್ಕೆ ಹೋಗುತ್ತವೆ ಮತ್ತು ತಾತ್ಕಾಲಿಕ ವ್ಯವಸ್ಥಾಕ್ರಮನ್ನು ಗುರುತಿಸುತ್ತದೆ. ಇದು ಮುಂಬರುವ ರಾಜ್ಯದ ಪ್ರತಿಯೊಬ್ಬ ಸದಸ್ಯನೂ ಪವಿತ್ರ ವಿಶ್ವಾಸದಲ್ಲಿ ಒಬ್ಬರನೊಬ್ಬರು ಬೆಳಸುವ ಘನಕಾರ್ಯದಲ್ಲಿ ಮಹಾ ಬೋಧಕನ ಪಾಲುದಾರ ರಾಗುವಂತೆಯೂ ನಮ್ಮ ಕರ್ತನಾದ ಕ್ರಿಸ್ತನ ಮಾದರಿಯಂತೆ ಗುಣನಡತೆಗಳನ್ನು ರೂಪಿಸಲು ಒಬ್ಬರಿಗೊಬ್ಬರು ಸಹಾಯ ಮಾಡುವಂತೆಯೂ ಮಾಡುತ್ತದೆ. ನಾವು ಪ್ರಸ್ತುತ ಸಮಯದ ದೈವಿಕ ಸಿದ್ಧತೆಯನ್ನು ಕ್ಷಣಕಾಲ ಪರೀಕ್ಷಿಸಲು ಮುಂದುವರಿಯುವಾಗ ಕರ್ತನು ನೂತನ ಸೃಷ್ಟಿಯ ಪ್ರತಿಯೊಬ್ಬ ವ್ಯಕ್ತಿಗೂ ಎಷ್ಟರ ಮಟ್ಟಿನ ಸ್ವಾತಂತ್ರ್ಯ ನೀಡಿದ್ದಾನೆಂದು ಕಂಡುಕೊಳ್ಳುವಲ್ಲಿ ನಮಗೆ ಆಶ್ಚರ್ಯವಾಗುತ್ತದೆ. ಆದರೆ ಆತನು ದೇವರ ಪ್ರೀತಿ ಮತ್ತು ನೀತಿಯು ತತ್ವಗಳಿಂದ ಚುರುಕುಗೊಂಡಿರುವ ಮತ್ತು ತಮ್ಮ ಜೀವವನ್ನೇ ಸಹೋದರರಿಗೆ, ತಮ್ಮ ಜೊತೆ ಸೇವಕರ ಪರವಾಗಿ ಅರ್ಪಿಸಲು ಸಿದ್ಧವಾದ ಇಚ್ಛೆಯುಳ್ಳ ಆರಾಧಕರನ್ನೇ, ಇಚ್ಛೆಯುಳ್ಳ ತ್ಯಾಗಿಗಳನ್ನೇ ಹುಡುಕುತ್ತಾನೆಂದು ನಾವು ಗ್ರಹಿಸುವಾಗ ದೇವರು ನಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟ ಈ ಯೋಜನೆಯು ಒಂದು ಉತ್ತಮ ಯೋಜನೆಯಾಗಿದೆಯೆಂದು ನಮಗೆ ವೇದ್ಯವಾಗುತ್ತದೆ. ಇದು ಖಚಿತವಾಗಿ ಹೃದಯದ ನಿಷ್ಠೆಯನ್ನು ಪರೀಕ್ಷಿಸುತ್ತದೆ, ಗುಣನಡತೆಯನ್ನು ಹೆಚ್ಚಾಗಿ ಅಭಿವೃದ್ಧಿ ಗೊಳಿಸುತ್ತದೆ, ಪ್ರತಿಯೊಬ್ಬರೂ ಇತರರ ಸಂಗಡ ಪ್ರೀತಿಯ ನಿಯಮವನ್ನು ಪಾಲಿಸುವ ಇಚ್ಛೆಯನ್ನು ರುಜುವಾತುಪಡಿಸುತ್ತದೆ

ಮತ್ತು ಇತರರು ತಮಗೆ ಮಾಡಬೇಕೆಂದು ತಾವು ಬಯಸುವುದನ್ನು ಸಹಾ ನಾವು ಅವರಿಗೆ ಮಾಡುವಂತೆ ಮಾಡುತ್ತದೆ.

ಅಂತಹ ಅನಿರ್ಬಂಧತೆ ಅಥವಾ ತುಲನಾತ್ಮಕವಾದ ಸ್ವಾತಂತ್ರ್ಯವು ಪ್ರಸ್ತುತ ಕಾಲದಲ್ಲಿ ಚಿಕ್ಕಹಿಂಡನ್ನು ಆರಿಸಿಕೊಳ್ಳುವುದು ಮತ್ತು ಅದನ್ನು ಭವಿಷ್ಯದಲ್ಲಿನ ರಾಜ ಯಾಜಕತ್ವದ ಗುಣಲಕ್ಷಣಗಳಿಗೆ ಸಿದ್ಧಪಡಿಸುವುದು ಇವೇ ಮುಂತಾದ ದೇವರ ಉದ್ದೇಶಗಳಿಗೆ ಉತ್ತಮವಾಗಿ ಹೊಂದಿಕೊಳ್ಳುತ್ತದೆ. ಆದರೆ ಇದನ್ನು ಆತನು ಸಾಮಾನ್ಯವಾಗಿ ಮಾಡುವನೆಂದು ಊಹಿಸಬಹುದಾದ ಲೋಕವನ್ನು ಮಾರ್ಪಡಿಸುವ ಕಾರ್ಯದ ದಿಕ್ಕಿನಲ್ಲಿ ಸಾಗದೆ ಬೇರೆಯೇ ಆಗಿದೆ. ದೇವರು ಪ್ರಸ್ತುತ ಕಾಲದಲ್ಲಿ ತನ್ನ ಸಭೆಯು ಈ ಲೋಕವನ್ನು ಗೆಲ್ಲುವುದಕ್ಕೋಸ್ಕರ ಮತ್ತು ಎಲ್ಲಾ ಸಂಗತಿಗಳೂ ತನಗೆ ವಶಪಡಿಸುವುದಕ್ಕೋಸ್ಕರ ಆಯೋಜಿಸಿದ್ದಾನೆಂಬ ತಪ್ಪು ಸಿದ್ಧಾಂತದ ಕಾರಣ ಉತ್ತಮ ನಿರ್ಣಯ ಹೊಂದಿದ ಅನೇಕರು ಸಭೆಯು ಕರ್ತನಿಂದ ಮತ್ತು ಅಪೋಸ್ತಲರಿಂದ ಸರಳವಾಗಿ ಕ್ರಮಗೊಂಡಿರುವ ಬಗ್ಗೆ ಆಶ್ಚರ್ಯಪಡುತ್ತಾರೆ. ಲೋಕವನ್ನು ಮಾರ್ಪಡಿಸಲು ಈ ವ್ಯವಸ್ಥೆಯು ಎಷ್ಟರಮಟ್ಟಿಗೆ ಅಪೂರ್ಣವಾಗಿದೆಯೆಂದು ನೋಡಿ ಕೆಲವರು ಈ ರಚನಾಕ್ರಮವನ್ನು ವಿಸ್ತಾರಗೊಳಿಸತೊಡಗಿದ್ದಾರೆ. ಇದನ್ನು ನಾವು ವಿವಿಧ ಕ್ರೈಸ್ತ ಪ್ರಪಂಚದ ವಿವಿಧ ಧರ್ಮೋಪದೇಶಕ ಸಭೆಗಳಲ್ಲಿ ಕಾಣಬಹುದು. ಇವುಗಳಲ್ಲಿ ಪೋಪರ ಅಧೀನದಲ್ಲಿರುವ ಸಭೆಗಳು ಬಹಳ ಮಾರ್ಮಿಕವೂ ಮತ್ತು ಊಹಿಸಲಾಗದಷ್ಟು ಶಕ್ತಿಯುತವೂ ಆದ ಸಂಸ್ಥೆಗಳಾಗಿವೆ. ಅದರಂತೆ ಮೆಥೋಡಿಸ್ಟ್ ಬಿಷೋಪಾಧೀನ ವ್ಯವಸ್ಥೆಯು ಸಹಾ ಶ್ರೇಷ್ಠವಾಗಿದೆ, ಆದರೆ ಮೇಲ್ನೋಟ್ಟದ ಸಮಕ್ಷೇತ್ರದಲ್ಲಿ ಇವು ವಿವಿಧ ವರ್ಗಗಳನ್ನು ನಿಯಂತ್ರಿಸುತ್ತವೆ. ಈ ಎರಡು ಪದ್ಧತಿಗಳ ರಚನೆಯ ಮೂಲಕ ಅವುಗಳಿಗೆ ಕ್ರೈಸ್ತ ಪ್ರಪಂಚದಲ್ಲಿ ಅಧಿಕಾರ ಮತ್ತು ಯಶಸ್ಸುಗಳು ಲಭಿಸಿವೆ. ನಾವು ಮುಂದುವರೆದಂತೆ ಇವು ಮತ್ತು ಇತರ ಮಾನವ ಸಭೆಗಳು ತಮ್ಮ ಕ್ರಮಗಳಲ್ಲಿ ಕರ್ತನು ಸ್ಥಾಪಿಸಿದ ಸಭೆಗಿಂತ ಬಹಳಷ್ಟು ಭಿನ್ನವಾಗಿದೆಯೆಂದು ನಾವು ನೋಡಬಹುದು. ಅವುಗಳ ಮಾರ್ಗಗಳು ಕರ್ತನ ಮಾರ್ಗಗಳಲ್ಲ, ಅವುಗಳ ಯೋಜನೆಗಳು ಕರ್ತನ ಯೋಜನೆಗಳಲ್ಲ; ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಅವುಗಳ ಮಾರ್ಗಗಳಿಗಿಂತ ಕರ್ತನ ಮಾರ್ಗಗಳೂ, ಅವುಗಳ ಅಲೋಚನೆಗಳಿಗಿಂತ ಕರ್ತನ ಆಲೋಚನೆಗಳು ಅಷ್ಟು ಉನ್ನತವಾಗಿವೆ (ಯೆಶಾಯ 55 : 8,9). ಮೊದಲಿನಿಂದಲೂ ಸತ್ಯಹೃದಯಿಗಳು ತಾವು ಕ್ರಿಸ್ತನ ಸರಳತೆಯನ್ನು ಬಿಟ್ಟು, ದೇವರ ಕಾರ್ಯಗಳನ್ನು ಮಾಡುವಲ್ಲಿ ದೇವರಿಗಿಂತಲೂ ನಾವು ಬುದ್ಧಿವಂತರೆಂದೆಣಿಸುವುದರ ಮೂಲಕ ನಾವು ಬಹಳ ತಪ್ಪುಮಾಡಿದ್ದೇವೆಂದು ಕಂಡುಕೊಂಡಿದ್ದಾರೆ. ಇದರ ಫಲಿತಾಂಶಗಳು ದೇವರ ಮಹಿಮೆಯನ್ನೂ, ಮಾನವರ ಅವಿವೇಕತನವನ್ನೂ ತೋರಿಸುತ್ತವೆ.

## ಹೆಸರಿಗೆ ಮಾತ್ರ (ನಾಮಾಂಕಿತ) vs ನಿಜವಾದ ನೂತನ ಸೃಷ್ಟಿ

## The Nominal vs. the Real New Creation

ಸಾಂಕೇತ ಜನರಾದ ಎಲ್ಲಾ ಇಸ್ರಾಯೇಲ್ಯರು ಒಂದು ರೀತಿಯಲ್ಲಿ ನಾಮಾಂಕಿತ ಇಸ್ರಾಯೇಲ್ಯರು. ಆದರೆ, ತುಲನಾತ್ಮಕವಾಗಿ ಕೆಲವರು ಮಾತ್ರವೇ ನಿಜವಾಗಿ ಇಸ್ರಾಯೇಲ್ಯರು. ಆದುದರಿಂದ ಪ್ರತಿಸಂಕೇತದಲ್ಲಿ ನಾವು ನಾಮಾಂಕಿತ ಸಭೆ ಮತ್ತು ನಿಜವಾದ ಸಭೆ ಅಂದರೆ ಕೇವಲ ಹೆಸರಿಗೆ ಮಾತ್ರ ನೂತನ ಸೃಷ್ಟಿ ಮತ್ತು ನಿಜವಾದ ನೂತನ ಸೃಷ್ಟಿ ಇವುಗಳನ್ನು ನೋಡುವಾಗ ಆಶ್ಚರ್ಯಪಡಬೇಕಾದಿಲ್ಲ. ಕ್ರೈಸ್ತ ಧರ್ಮವು ಸ್ವಲ್ಪಮಟ್ಟಿಗೆ ಜನಪ್ರಿಯವಾದಾಗಿನಿಂದಲೂ "ಹಣಜಿ", "ನಕಲಿ ಗೋಧಿ" ಇವುಗಳು ಗೋಧಿ ಹೊಲದಲ್ಲಿ ತುಂಬಿ ಹೋಗಿ ಅಸಲಿ ಗೋಧಿಯೋ ಎಂಬಂತೆ ಪರಿಣಾಮವನ್ನುಂಟು ಮಾಡುತ್ತಿವೆ. ಹೃದಯವನ್ನು ಓದಲು ಬಾರದ, ಅಸಲಿಯನ್ನು ನಕಲಿಯನ್ನು, ಗೋಧಿಯಿಂದ ಹಣಜಿಯನ್ನು ಗುರುತಿಸಲಾಗದ ಮಾನವನಿಗೆ ಎಷ್ಟೇ ಕಷ್ಟವಾದರೂ ಕರ್ತನು ತಾನು ಹೃದಯವನ್ನು ಬಲ್ಲಾತನಾಗಿದ್ದು "ಕರ್ತನು ಅತನವರು ಯಾರೆಂದು ತಿಳಿದಿದ್ದಾನೆ" ಎಂಬ ಭರವಸೆಯನ್ನು ನೀಡುತ್ತಾನೆ. ಆತನು ನಿಜವಾಗಿಯೂ ನಾವು ನಿಜವಾದ ಕುರಿ ಮತ್ತು ಕುರಿವೇಷದ ತೋಳಗಳು, ನಿಜವಾದ ದ್ರಾಕ್ಷೆ ಫಲವನ್ನು ನೀಡಬಲ್ಲ ದ್ರಾಕ್ಷೆ ಬಳ್ಳಿ ಮತ್ತು ಈ ಬಳ್ಳಿಯೊಳಕ್ಕೆ ತೂರಿಬರುವ ಮುಳ್ಳಿನ ಬಳ್ಳಿ ಯಾವುವೆಂಬ ವ್ಯತ್ಯಾಸವನ್ನು ಗ್ರಹಿಸಬೇಕೆಂದು ಅಪೇಕ್ಷಿಸುತ್ತಾನೆ ಮತ್ತು ಈ ಬಗ್ಗೆ ನಮಗೆ ಹೇಳುವವನಾಗಿದ್ದಾನೆ. ಆದರೆ ಸಾಮಾನ್ಯವಾದ ಹೊರಗಣ ಗುಣ ನಡತೆಯನ್ನು ಪರೀಕ್ಷಿಸಲು ತನ್ನ ಜನರಿಗೆ ಅನುಮತಿಸುವುದಿಲ್ಲ. "ಸಮಯಕ್ಕೆ ಮುನ್ನ ಯಾವುದೇ ತೀರ್ಮಾನವನ್ನು ಮಾಡಬಾರದು" ಯಾವುದನ್ನು ದ್ರಾಕ್ಷಾಲತೆಯ ನ್ಯಾಯಸಮ್ಮತವಾದ ಕೊಂಬೆಯೆಂದು ನೀವು ಭಾವಿಸುತ್ತೀರೋ ಅವುಗಳು ಒಳ್ಳೆಯ ಫಲವನ್ನು ಬಿಡಲು ಎಷ್ಟು ಸಮಯ ಬೇಕೆಂಬ ಅವಧಿಯನ್ನು ನೀವು ನಿರ್ಧರಿಸಕೂಡದು ಎಂದು ಹೇಳುತ್ತಾನೆ. ನಾವು ಇದನ್ನು ತೋಟಗಾರನಾದ ತಂದೆಗೆ ಬಿಟ್ಟು ಬಿಡಬೇಕು. ಆತನೇ ಬಳ್ಳಿಯನ್ನು ಕತ್ತರಿಸಿ "ಫಲಕೊಡದ" ಕೊಂಬೆಗಳನ್ನು ಕಡಿದು ಬಿಸಾಡುವನು. ಆದುದರಿಂದ ನಾವು ಬಳ್ಳಿ ಕತ್ತರಿಸುವುದನ್ನು– ಕ್ರಿಸ್ತನ ಸಭೆಯ ಪ್ರತಿಯೊಬ್ಬ ದೀಕ್ಷೆಹೊಂದಿದ ವ್ಯಕ್ತಿಯನ್ನು ಸರಿಪಡಿಸುವ ಕಾರ್ಯವನ್ನು – ತೋಟಗಾರನಾದ ತಂದೆಗೇ ಬಿಟ್ಟು ಬಿಡಬೇಕು. ಆತನೇ ಅವರನ್ನು ಬಹಿಷ್ಕರಿಸಲಿ, ಅವರು ಅದನ್ನು ನೆಟ್ಟವನು ನೀರುಣಿಸಿದಾತನು, ಪ್ರತಿ ಕೊಂಬೆಯೂ ನಿಜವಾದ ಬಳ್ಳಿಯಲ್ಲಿ ಚಿಗುರುವಂತೆ ಮಾಡಿದಾತನು ಆತನೇ ಎಂದು ಗ್ರಹಿಸುವಂತಾಗಲಿ. ಪ್ರತಿ ಕೊಂಬೆಯಲ್ಲಿ ಅಥವಾ ಸದಸ್ಯನಲ್ಲಿರುವ ಸ್ಫೂರ್ತಿಯನ್ನು ಸ್ವಲ್ಪ ಮಟ್ಟಿಗಾದರೂ ಗ್ರಹಿಸಬೇಕು ಮತ್ತು ಪ್ರತಿಯೊಬ್ಬರಿಗೂ ಬೆಳೆಯಲು ಪ್ರೋತ್ಸಾಹಿಸಬೇಕು ಮತ್ತು ಸಹಾಯ ಮಾಡಬೇಕು. ಈ ಎಲ್ಲಾ ಕೊಂಬೆಗಳಲ್ಲಿ ಪ್ರೀತಿಯೇ ನಿಯಮವಾಗಿರಬೇಕು. ದೇವರ ಮಾತು ಕೇಳ ಬಂದಾಗ ಅದಕ್ಕಿಂತ ಕಿಂಚಿತ್ತಾದರೂ ಹೆಚ್ಚಾಗಿ ಟೀಕಿಸುವುದಕ್ಕಾಗಲೀ, ಗದರಿಸುವುದಕ್ಕಾಗಲೀ, ತರಿದು ಹಾಕುವುದಕ್ಕಾಗಲೀ ಅಥವಾ ಬೇರೊಂದು ಕೊಂಬೆಯ

ವಿರುದ್ಧ ಏನಾದರೂ ಮಾಡಲು ಯಾರಿಗೂ ಅಧಿಕಾರವಿರದು. ಇದಕ್ಕೆ ವ್ಯತಿರಿಕ್ತವಾಗಿ ಪ್ರೀತಿಯ ಸ್ಪೂರ್ತಿಯು ಕರುಣೆಗೆ, ಕೃಪೆಗೆ, ದೀರ್ಘ ಸಹನೆಗೆ ಮತ್ತು ತಾಳ್ಮೆಗೆ ತೋಟಗಾರನು ನೀಡುವ ಮಿತಿಯ ವರೆಗೆ ಚುರುಕಾಗಿರತಕ್ಕದ್ದು. ಆತನು ನೀಡುವ ಮಿತಿಯು ನಾವೀಗಾಗಲೇ ಸೂಚಿಸಿರುವಂತೆ ಉದಾರವಾದುದು ಮತ್ತು ಪ್ರತಿ ಕೊಂಬೆಯಲ್ಲೂ ಗುಣಲಕ್ಷಣವನ್ನು ಬೆಳೆಸುವಂತೆ ವಿನ್ಯಾಸಗೊಂಡಿದೆ.

ಇವುಗಳೆಲ್ಲವೂ ಮಾನವ ಸಂಸ್ಥೆಗಳಲ್ಲಿನ ಪ್ರಮಾಣದಲ್ಲಿ ವ್ಯತ್ಯಾಸಗೊಂಡಿವೆ. ಕಾರಣವೇನೆಂದರೆ, ಅವರುಗಳು ದೈವಿಕ ವ್ಯವಸ್ಥೆಯ ಸರಳತೆಯನ್ನು ನಿರ್ಲಕ್ಷಿಸಿದ್ದಾರೆ ಇಲ್ಲವೆ ತೊರೆದುಬಿಟ್ಟಿದ್ದಾರೆ. ಅವರು ಸದಸ್ಯರಾಗಿ ಅಥವಾ ದ್ರಾಕ್ಷೆ ಬಳ್ಳಿಯ ಕೊಂಬೆಗಳು ಎಂದು ಒಪ್ಪಿಕೊಳ್ಳಬಹುದಾದವರ ಬಗ್ಗೆ ಅವರು ಸಂಪೂರ್ಣವಾದ ಸಾಂಗತ್ಯಕ್ಕೆ ಸೇರದ ರೀತಿಯಲ್ಲಿ ತಮ್ಮ ಇಚ್ಛಾನುಸಾರವಾದ ನಿಯಮಗಳನ್ನು ಮಾಡಿಕೊಂಡಿದ್ದಾರೆ. ಅವರು ದೇವರ ವಾಕ್ಯದಲ್ಲಿಲ್ಲದ ಹಣ ಸುಲಿಯುವಿಕೆ ಮತ್ತು ಇನ್ನಿತರ ವಿವಿಧ ನಿಯಮ ಮತ್ತು ಷರತ್ತುಗಳನ್ನು ಮಾಡಿದ್ದಲ್ಲದೆ ದೇವರ ವಾಕ್ಯದಲ್ಲಿಲ್ಲದ ಅನೇಕವಿಧವಾದ ಸಂಸ್ಕಾರಗಳನ್ನೂ, ತಪ್ಪೊಪ್ಪಿಗೆಗಳನ್ನೂ, ಇವುಗಳನ್ನು ಉಲ್ಲಂಘಿಸಿದವರಿಗೆ ದಂಡನೆಯನ್ನೂ ವಿಧಿಸಿದ್ದಾರೆ. ಸಾಂಗತ್ಯವನ್ನು ರದ್ದುಪಡಿಸುವ ಬಹಿಷ್ಕಾರ ಮಾಡಬಹುದಾದ ಕಾನೂನುಗಳನ್ನೂ ಮಾಡಿಕೊಂಡಿದ್ದಾರೆ. ಇದು ನಿಜವಾದ ಸಭೆಗೆ ಅಂದರೆ ಕ್ರಿಸ್ತನ ದೇಹಕ್ಕೆ, ನಿಜವಾದ ದ್ರಾಕ್ಷೆ ಬಳ್ಳಿಗೆ, ನೂತನ ಸೃಷ್ಟಿಗೆ ನೀಡಲ್ಪಟ್ಟ ಯಾವುದೇ ಅಧಿಕಾರಕ್ಕೂ ವಿರೋಧವಾಗಿದೆ.

ಕ್ರಿಸ್ತನ ಸಭೆಯನ್ನು ದೇವರ ಮರ್ಮ* (Mystery of God) ಎಂದು ದೇವರ ವಾಕ್ಯದಲ್ಲಿ ಕರೆಯಲಾಗಿದೆ ಎಂಬ ಸತ್ಯದ ಬಗ್ಗೆ ನಾವೀಗಾಗಲೇ ನಿಮ್ಮ ಗಮನವನ್ನು ಸೆಳೆದಿದ್ದೇವೆ. ಯಾಕೆಂದರೆ ನಿರೀಕ್ಷೆಗೆ ವಿರೋಧವಾಗಿ, ಕ್ರೈಸ್ತ ಸಭೆಯು ಮೆಸ್ಸೀಯನ ದೇಹವಾಗಿದ್ದು ಅಭಿಷಕ್ತನಾದ ಯೇಸುಕ್ರಿಸ್ತನ ಅಧೀನದಲ್ಲಿ ಇಡೀ ಪ್ರಪಂಚವನ್ನು ಆಶೀರ್ವದಿಸಿ ಆಳಬೇಕಾಗಿದೆ. ಈಗ ಸಂತರಿಗೆ ಬಯಲಾಗಿರುವ ಈ ಮರ್ಮವನ್ನು ಯುಗಾಂತರಗಳಿಂದ ಗುಪ್ತವಾಗಿಡಲಾಗಿತ್ತು. (ಎಫೆಸ 3:3–6) ದೇವರ ಈ ಮರ್ಮವು ಸಧ್ಯದಲ್ಲೇ ನೂತನ ಸೃಷ್ಟಿಯ ನೆರವೇರಿಕೆಯಲ್ಲಿ ಈ ಸುವಾರ್ತಾ ಯುಗದ ಅಂತ್ಯದಲ್ಲಿ ಮುಕ್ತಾಯಗೊಳ್ಳಲಿದೆ. ದೇವರ ವಾಕ್ಯವು ಬಾಬೇಲನ್ನು ಕಪಟವಾದ ಪದ್ಧತಿಯೆಂದು ಸೂಚಿಸಿರುವುದನ್ನು ನಾವೀಗಾಗಲೇ ನಿಮ್ಮ ಗಮನಕ್ಕೆ ತಂದಿದ್ದೇವೆ. ( ತಾಯಿ ಮತ್ತು ಹೆಣ್ಣು ಮಕ್ಕಳು – ಕೆಲವರು ಸ್ವಲ್ಪ ಹೆಚ್ಚು, ಕೆಲವರು ಸ್ವಲ್ಪ ಕಡಿಮೆಯಾಗಿ ಭ್ರಷ್ಟರಾಗಿದ್ದಾರೆ, ಕೆಲವರು ಉತ್ತಮವಾಗಿ, ಕೆಲವರು ಸಾಕಷ್ಟಿಲ್ಲದಂತೆ ಕಪಟಿಗಳಾಗಿದ್ದಾರೆ) ಅವರು"Mystery of Iniquity" ಗೊತ್ತುಮಾಡಲ್ಪಟ್ಟಿದ್ದಾರೆ. ಈ ಕಪಟ ಪದ್ಧತಿಯನ್ನು ಕಂಡುಹಿಡಿದವರು ಉದ್ದೇಶಪೂರ್ವಕವಾಗಿ ದೇವಜನರನ್ನು ತಪ್ಪು ಹಾದಿಗೆ ಕೊಂಡೊಯ್ಯುವಂತೆ ಮಾಡಿದ್ದಾನೆಂದು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ನಿಜವಾಗಿ ಹೇಳುವುದಾದರೆ, ಈ ಸಂಬಂಧದಲ್ಲಿ ಇಡೀ ಲೋಕವನ್ನು ಮೋಸಗೊಳಿಸಿ ಒಳ್ಳೆಯದಕ್ಕೆ ಬದಲಾಗಿ ಕೆಟ್ಟದ್ದನ್ನೂ, ಕೆಟ್ಟದ್ದಕ್ಕೆ ಬದಲಾಗಿ ಒಳ್ಳೆಯದನ್ನೂ, ಕತ್ತಲೆಗೆ ಬದಲಾಗಿ ಬೆಳಕನ್ನೂ, ಬೆಳಕಿಗೆ ಬದಲಾಗಿ ಕತ್ತಲೆಯನ್ನೂ ಉಂಟುಮಾಡುತ್ತಿರುವವನು ಸೈತಾನನೇ ಎಂದು ದೇವರ ವಾಕ್ಯಗಳು ನಮಗೆ ತಿಳಿಸುತ್ತವೆ (ಯೆಶಾಯ 5:20 ನೋಡಿರಿ). ಆತನು ಅವಿಧೇಯ ಮಕ್ಕಳಲ್ಲಿ ತನ್ನ ಕಾರ್ಯವನ್ನು ಎಸಗುತ್ತಾನೆ (ಎಫೆಸ 2:2 ನೋಡಿರಿ). ಆತನು ಈ ದೆಸೆಯಲ್ಲಿ ನಮ್ಮ ಕರ್ತನಾದ ಯೇಸುವಿಗೂ ತನ್ನ ಸಹಕಾರವನ್ನು ನೀಡಲು ಮುಂದಾದನು. ತನ್ನ ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯುತ್ತಿರುವ ಕ್ರಿಸ್ತನ ಅನುಯಾಯಿಗಳನ್ನು ತಪ್ಪು ದಾರಿಗೆ ಎಳೆಯುವ ಸಲುವಾಗಿ ಆತನು ತನ್ನ ಸಹಕಾರ ನೀಡುವಲ್ಲಿ ಸಂತೋಷಿಸುತ್ತಾನೆ. ಆತನು ತಂದೆಯ ಮಾರ್ಗಕ್ಕಿಂತ ಕಡಿಮೆಯಾದ ವೈಯುಕ್ತಿಕ ತ್ಯಾಗವುಳ್ಳ ಮಾರ್ಗಗಳುಂಟೆಂದೂ, ಅವುಗಳನ್ನು ಅನುಸರಿಸುವುದರ ಮೂಲಕ ಲೋಕದ ಎಲ್ಲಾ ಕುಟುಂಬಗಳಿಗೆ ಆಶೀರ್ವಾದ ವನ್ನುಂಟುಮಾಡಬಹುದೆಂದು ಕರ್ತನನ್ನು ಮನವೊಲಿಸಲು ಪ್ರಯತ್ನಿಸಿದಂತೆ, ಆತನು ಈ ಸುವಾರ್ತಾ ಯುಗದಲ್ಲಿ ಸಹಾ ತನ್ನ ಯೋಜನೆಗಳನ್ನು ಪಾಲಿಸುವ ಅಂದರೆ ದೇವರ ಯೋಜನೆ ಮತ್ತು ನಿಯಮಗಳಿಗೆ ಎಚ್ಚರಿಕೆಯ ಲಕ್ಷ್ಯ ಕೊಡದಂತೆ ಮಾಡುವ ಉದ್ದೇಶದಿಂದ ಕರ್ತನ ನಿಜವಾದ ಪ್ರತಿಷ್ಠಿತ ಸಹೋದರರ ಮನವೊಲಿಸಲು ಪ್ರಯತ್ನಿಸುತ್ತಿದ್ದಾನೆ. ದೇವರ ವಾಕ್ಯದಲ್ಲಿ ಸೂಚಿಸಿರುವುದಕ್ಕಿಂತ ಬೇರೊಂದು ರೀತಿಯಲ್ಲಿ ದೇವರ ಸೇವೆ ಮಾಡಬಹುದೆಂಬ ಅತಿ ಬುದ್ದಿವಂತಿಕೆಯನ್ನು ಅವರಲ್ಲಿ ಉಂಟುಮಾಡುತ್ತಾನೆ. ಅವರ ಮಾನವ ಪದ್ಧತಿಯಲ್ಲಿ, ಅವರು ಮಾಡುವ ಕಾರ್ಯಗಳಲ್ಲಿ, ಅವರ ಸಂಸ್ಥೆಗಳಲ್ಲಿ ಹೆಚ್ಚು ಚೈತನ್ಯ ಮತ್ತು ಹೆಮ್ಮೆಯುಂಟಾಗುವಂತೆ ಅವರನ್ನು ಆತನು ಉಬ್ಬಿಸುತ್ತಾನೆ. ಒಡೆಯನೊಂದಿಗೆ ಕೆಡುಕನಿಗೆ ಜಯವುಂಟಾಗಲಿಲ್ಲ, ಆತನ ಉತ್ತರವು ಏಕ ಪ್ರಕಾರವಾಗಿ "ದೇವರ ವಾಕ್ಯದಲ್ಲಿ ಹೀಗೆ ಬರೆದಿದೆ" ಎಂಬುದಾಗಿತ್ತು. ಆದರೆ ಆತನ ಅನುಯಾಯಿಗಳಲ್ಲಿ ಆ ರೀತಿ ಇಲ್ಲ. ಅನೇಕರು ಏನು ಬರೆದಿದೆ ಎಂಬುದನ್ನು, ಅಪೋಸ್ತಲರ ಮಾತುಗಳನ್ನು ಮತ್ತು ಉದಾಹರಣೆಗಳನ್ನು ನಿರ್ಲಕ್ಷಿಸುತ್ತಾರೆ. ದೇವರು ಒಪ್ಪಿಕೊಳ್ಳುತ್ತಾನೆಂದು ನೆನಸಿ ತಮ್ಮದೇ ಆದ ಕೆಲವೊಂದು ಯೋಜನೆಯನ್ನು ಮಾಡಲು ಉದ್ದೇಶಿಸುತ್ತಾರೆ. ಇವುಗಳು ದೇವರ ಮೆಚ್ಚಿಗೆಗೆ ಪಾತ್ರವಾದೀತೆಂದು ಅವರು ನಂಬುತ್ತಾರೆ.

(*ಸಂಪುಟ I, ಅಧ್ಯಾಯ V)

ದೇವರು ಮೂಲದಲ್ಲಿ ಯೋಜಿಸಿದಂತೆ ತನ್ನ ರಾಜ್ಯವನ್ನು ಸ್ಥಾಪಿಸಲು ತನ್ನದೇ ಆದ ರೀತಿಯಲ್ಲಿ ಕಾರ್ಯವೆಸಗಿರುವದನ್ನು ಅವರು ನಂತರದಲ್ಲಿ ಕಂಡುಕೊಂಡಾಗ ತಾವು ಎಂಥಹ ತಪ್ಪುಮಾಡಿದ್ದೇವೆಂಬದಕ್ಕೆ ಆಶ್ಚರ್ಯಪಡುತ್ತಾರೆ! ದೇವರ ಅಲೋಚನೆಗಳಿಗೆ ಬದ್ಧರಾಗಿರುವುದು – ಈ ಮಾನವ ಯೋಜನೆಗಳ ನೆರವೇರಿಕೆಗಳಿಗಿಂತ ದೇವರ ಯೋಜನೆಯಂತೆ ಕಾರ್ಯವೆಸಗುವುದು, ದೇವರು ಮೆಚ್ಚದ ರೀತಿಯಲ್ಲಿ ತನ್ನ ಕಾರ್ಯಗಳನ್ನು ಮಾಡುವುದಕ್ಕಿಂತ, ಕರ್ತನಿಗೇ ಕಲಿಸುವ ಪ್ರಯತ್ನಕ್ಕಿಂತ ಎಷ್ಟೋ ಉತ್ತಮವೆಂದು ಅವರು ನಂತರದಲ್ಲಿ ಕಂಡುಕೊಳ್ಳುತ್ತಾರೆ. ಪೋಪರ ಅಧೀನದಲ್ಲಿರುವ, ಮೆಥೋಡಿಸ್ಟರಲ್ಲಿರುವ, ಪ್ರಮಾಣ ಬದ್ಧವಾಗಿ ಇತರ ಸಭೆಗಳಲ್ಲಿರುವ ಈ ಮಾನವ ಯೋಜನೆಗಳ ಯಶಸ್ಸು ಈ ಪದ್ಧತಿಗಳು "ಬಲವಾದ ಭ್ರಾಂತಿ'ಯನ್ನಾಗಿ ಮಾಡುವಲ್ಲಿ ಸಹಾಯಮಾಡುತ್ತವೆ.

ಗೋಧಿಯ ಹೊಲದಲ್ಲಿ ಈ ಹಣಜಿಗಳು ಬೆಳೆಯುವಲ್ಲಿ, ಅದನ್ನು ತಡೆಹಿಡಿಯುವುದರಲ್ಲಿ ಕರ್ತನು ಈ ಸುವಾರ್ತಾ ಯುಗದಲ್ಲಿ ಮಧ್ಯೆಪ್ರವೇಶ ಮಾಡಿರುವುದಿಲ್ಲ. ಬದಲಾಗಿ ಆತನು ತನ್ನ ಜನರಿಗೆ ಇವುಗಳೆರಡೂ ಸುಗ್ಗಿ ಕಾಲದವರೆಗೂ ಒಟ್ಟಾಗಿ ಬೆಳೆಯಲು ಅವಕಾಶ ಮಾಡಿಕೊಡಬೇಕೆಂಬ ಸೂಚನೆಯನ್ನು ನೀಡಿದ್ದಾನೆ. ಆ ಕಾಲದಲ್ಲಿ ಆತನು ಖುದ್ದಾಗಿ ಉಪಸ್ಥಿತನಿದ್ದು ಬೇರ್ಪಡಿಸುವ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಾನೆ ಮತ್ತು ತನ್ನ ಗೋಧಿಯನ್ನು ಮಹಿಮಾ ಸ್ಥಿತಿಯಲ್ಲಿ ತನ್ನ ಕಣಜದಲ್ಲಿ ತುಂಬಿಸಿ ಕೊಳ್ಳುತ್ತಾನೆ ಮತ್ತು ಹಣಜಿಯ ಸೂಡುಗಳನ್ನು ಹೊರೆಕಟ್ಟಿ ಯುಗಾಂತ್ಯದ ಮಹಾ ಸಂಕಟದ ಕಾಲದಲ್ಲಿ ಅವುಗಳನ್ನು ।(ಹಣಜಿಗಳು) "ನಕಲಿ ನೂತನ ಸೃಷ್ಟಿಗಳು" ಎಂಬಂತೆ ನಾಶಮಾಡುತ್ತಾನೆಯೇ ಹೊರೆತು ಮಾನವರನ್ನಲ್ಲ. ನಿಜವಾಗಿಯೂ ಬಹಳಷ್ಟು ಹಣಜಿಗಳು ಗೌರವಾನ್ವಿತ ವಾದವುಗಳು, ನೀತಿವಂತಿಕೆ ಉಳ್ಳವುಗಳು ಮತ್ತು ಪ್ರಪಂಚವು "ಒಳ್ಳೆಯ ಜನರು" ಎಂಬ ಪದವನ್ನು ಇದಕ್ಕೆ ಉಪಯೋಗಿಸುತ್ತದೆ. ಯಾಕೆಂದರೆ, ಎಲ್ಲಾ ಅನ್ಯರಲ್ಲಿಯೂ ಒಳ್ಳೆಯ ಅಂಶಗಳಿರುತ್ತವೆ. ಒಂದು ವೇಳೆ "ಹಣಜಿ'ಗಳಿಗಿಂತ ಕಡಿಮೆ ಇದ್ದಿರಬಹುದು. ಯಾಕೆಂದರೆ ಈ ಹಣಜಿಗಳು "ನಿಜವಾದಗೋದಿ'ಯೊಂದಿಗೆ ನಿಕಟವಾಗಿರುವುದರಿಂದ ಮತ್ತು ಕರ್ತನ ಆತ್ಮನ ಭಾಗಶಃ ವಿವೇಚನೆಯ ಕಾರಣ ಹೆಚ್ಚಿನ ಆಶೀರ್ವಾದ ಮತ್ತು ಸವಲತ್ತುಗಳನ್ನು ಹೊಂದಿಕೊಳ್ಳುವ ಅವಕಾಶಗಳನ್ನು ಪಡೆದಿರುತ್ತವೆ.

ಈ "ಬಾಬೇಲ್", ಗೊಂದಲಮಯ ಕ್ರೈಸ್ತ ಪ್ರಪಂಚದ ಅಧರ್ಮ ಸ್ವರೂಪ– ಕ್ರೈಸ್ತವಿರೋಧಿಯ ಮರ್ಮವು ಕರ್ತನ ಜನರಲ್ಲಿ ಆ ಕಾಲದಲ್ಲೇ ಕಾರ್ಯವೆಸಗಲು ಪ್ರಾರಂಭಿಸಿತ್ತೆಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ. ಈ ಕಾರ್ಯವು ಸ್ಪಷ್ಟವಾಗಿ ಅಲ್ಪರೀತಿಯಲ್ಲಿ ಪೌಲ ಮತ್ತು ಇನ್ನಿತರ ಅಪೋಸ್ತಲರ ಮರಣದ ನಂತರ ಕಂಡುಬರುತ್ತದೆ. ಅಪೋಸ್ತಲರು ಸಭೆಯಲ್ಲಿರುವಾಗ ವಿರೋಧಿಯು ಖಾಸಗಿಯಾಗಿ, ಗುಪ್ತರೀತಿಯಲ್ಲಿ ಕೆಲವು ಸುಳ್ಳು ಬೋಧಕರುಗಳ ಮೂಲಕ ಪ್ರವೇಶಿಸಿ ವಿಶ್ವಾಸವನ್ನು ಧಿಕ್ಕರಿಸುವಂತ ರೀತಿಯ ನಾಸ್ತಿಕತೆಯನ್ನುಂಟುಮಾಡಿ ವಿಶ್ವಾಸಿಗಳು ಸುವಾರ್ತೆಯಲ್ಲಿನ ನಿರೀಕ್ಷೆ, ವಾಗ್ದಾನ ಮತ್ತು ಸರಳತೆಗಳಿಂದ ದೂರ ಮಾಡುತ್ತಿರುವುದನ್ನು ತೋರಿಸಲು ಶಕ್ತರಾಗಿದ್ದರು (2 ಪೇತ್ರ 2:1). ಅಪೋಸ್ತಲನಾದ ಪೌಲನು ಸಹಾ ಇವುಗಳಲ್ಲಿ ಕೆಲವನ್ನು ಸಾಮಾನ್ಯ ರೀತಿಯಲ್ಲಿ ಪ್ರಸ್ತಾಪಿಸುತ್ತಾ ಇದು ಅನ್ಯಾಯ ಕಾರ್ಯಗಳ (ಅಧರ್ಮದ) ಆರಂಭ ಎನ್ನುತ್ತಾನೆ; ಆದರೆ ಆತನು ಇದರಲ್ಲಿ ಕೆಲವನ್ನು ವ್ಯಕ್ತಿಗತವಾಗಿ ಹುಮೆನಾಯನು ಮತ್ತು ಫಿಲೇತನು ಎಂದು ಹೆಸರಿಸುತ್ತಾನೆ (2 ತಿಮೋಥೆ 2:17). ಇವರುಗಳು ಸತ್ಯಭ್ರಷ್ಟರಾಗಿ ಕೆಲವರ ನಂಬಿಕೆಯನ್ನು ಕೆಡಿಸುವವರಾಗಿದ್ದರು. ಈ ಸುಳ್ಳು ಬೋಧಕರ ಮತ್ತು ಅವರುಗಳ ತಪ್ಪುಗಳ ಬಗ್ಗೆ ಆತನು ಸಭೆಯನ್ನು ಎಫೆಸದ ಹಿರಿಯರ ಮೂಲಕವಾಗಿ ಎಚ್ಚರಿಸುತ್ತಾನೆ ಮತ್ತು ತಾನು ತೀರಿಕೊಂಡ ಮೇಲೆ ಕ್ರೂರವಾದ ತೋಳಗಳು ಬರುವುವು, ಅವು ಹಿಂಡನ್ನು ಕನಿಕರಿಸುವುದಿಲ್ಲ ಎಂದಿದ್ದಾನೆ (ಅ.ಕೃ 20: 29). ಕಡೆಯದು ಕರ್ತನು ಹೇಳಿದ ಸಾಮ್ಯವೊಂದರಲ್ಲಿ ಗಮನಾರ್ಹವಾಗಿ ಮುಂತಿಳಿಸಲ್ಪಟ್ಟಿದೆ (ಮತ್ತಾಯ 13: 25, 39). ಇಲ್ಲಿ ನಮ್ಮ ಕರ್ತನು ಈ ಸುಳ್ಳು ಬೋಧಕರುಗಳು ಮತ್ತು ಅವರ ಸುಳ್ಳುಬೋಧನೆಗಳು ವಿರೋಧಿಯಾದ ಸೈತಾನನ ಕಾರ್ಯಗಳು ಮತ್ತು ಇವುಗಳ ಮೂಲಕ ಅಪೋಸ್ತಲರು ನೆಟ್ಟ ಗೋಧಿಯ ನಡುವೆ ಹಣಜಿಯು ಬಿತ್ತಲ್ಪಟ್ಟಿದೆ ಎಂದು ಸ್ಪಷ್ಟವಾಗಿ ತೋರಿಸಿಕೊಡುತ್ತಾನೆ. "ಜನರು (ವಿಶೇಷಸೇವಕರು, ಅಪೋಸ್ತಲರು) ನಿದ್ರೆಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋಧಿಯ ನಡುವೆ ಹಣಜಿ ಬಿತ್ತಿ ಹೋದನು" (ಮತ್ತಾಯ13:25) ಎಂದು ಆತನು ಹೇಳಿದ್ದಾನೆ.

ದುರಾತ್ಮನು ವಿರೋಧಿಯ ಮಾರ್ಗದರ್ಶನದಲ್ಲಿ ಹಂತ ಹಂತವಾಗಿ ಕ್ರಿಸ್ತವಿರೋಧಿ ಪದ್ಧತಿಯುಳ್ಳ ಸಂಸ್ಥೆಯೊಂದು ಅಂತಿಮವಾಗಿ ಅಸ್ತಿತ್ವಕ್ಕೆ ಬಂದದು ಅಪೋಸ್ತಲರು ನಿದ್ರಿಸಿದ ಬಹಳ ಸಮಯದ ನಂತರವಲ್ಲವೆಂದು ನಾವು ಖಚಿತವಾಗಿ ತಿಳಿಯಬಹುದು. ಅದುವೇ ಪೋಪಾಧೀನ ಸಭೆ. ಈ ಸಂಘಟನೆಯು ನಾವೀಗಾಗಲೇ ಕಂಡುಕೊಂಡಂತೆ* ಕ್ಷಣಮಾತ್ರದಲ್ಲಿ ಉಂಟಾದುದಲ್ಲ, ಆದರೆ ಕ್ರಮೇಣವಾಗಿ ನಾಲ್ಕನೆಯ ಶತಮಾನದಲ್ಲಿ ತನ್ನ ಅಧಿಕಾರವನ್ನು ವಹಿಸಿಕೊಳ್ಳಲು ಪ್ರಾರಂಬಿಸಿತು. ಈ ಮಹಾ ಕ್ರಿಸ್ತ ವಿರೋಧಿಯು ಕೆಲವು ಸಮಯದವರೆಗೆ ಎಷ್ಟರ ಮಟ್ಟಿಗೆ ಪ್ರವರ್ಧಮಾನಕ್ಕೆ ಬಂದನೆಂದರೆ, ಚರಿತ್ರೆಕಾರರು ಆ ಕಾಲದಿಂದ ಸುಧಾರಣಾ ಕಾಲದವರೆಗೆ ಬರೆದ ಚರಿತ್ರೆಯಲ್ಲಿ ಈ ಕ್ರಿಸ್ತವಿರೋಧಿ ಪದ್ದತಿಯನ್ನು ಬೆಂಬಲಿಸದ ಪ್ರತಿಯೊಬ್ಬ ವ್ಯಕ್ತಿ ಅಥವಾ ವರ್ಗವನ್ನು ಕ್ರೈಸ್ತರೆಂದು ಕರೆಯಲು ಅಥವಾ ಅವರು ಸಂಪ್ರದಾಯಿಗಳು ಮತ್ತು ವಿಶ್ವಾಸಿಗಳು ಎಂದು ಗುರುತಿಸಲು ಸಹಾ ನಿರ್ಲಕ್ಷಿಸಿದ್ದಾರೆ. ಇತರರು ನಿಷೇದಿಸಲ್ಪಟ್ಟು ಖಾಸಗಿಯಾಗಿಯಲ್ಲದೆ ಬೇರೆ ರೀತಿಯಲ್ಲಿ ಇರಲು ಸಹಾ ಅನುಮತಿ ಇದ್ದಿಲ್ಲ. ಅವರ ಬಗ್ಗೆ ಯಾವುದೇ ಚರಿತ್ರೆಗಳಿದ್ದಲ್ಲಿ ಅದನ್ನು ಸಹಜವಾಗಿ ನಾಶಪಡಿಸಲಾಗುತ್ತಿತ್ತು. ಆದರೆ ಸಂಭವನೀಯವಾಗಿ, ಪ್ರಸ್ತುತ ಸತ್ಯದ ಬೆಳಕಿನಲ್ಲಿ ಇಂದು ನಡೆಯುವವರಂತೆ, ಆಗಿನ ವಿಶ್ವಾಸಿಗಳು ಪ್ರಮಾಣದಲ್ಲಿ, ಸಂಖ್ಯೆಯಲ್ಲಿ ಮತ್ತು ಪ್ರಭಾವದಲ್ಲಿ ಕ್ಷುಲ್ಲಕರಾಗಿದ್ದು ಅವರು ವಿರೋಧಿಸಿದ ಈ ಮಹಾ ಯಶಸ್ವಿ ಪದ್ಧತಿಯೊಂದಿಗೆ ಅವರನ್ನು ತುಲನೆ ಮಾಡುವುದು ಯೋಗ್ಯವೆಂದು ಯಾರೂ

"ಸುಧಾರಣೆ'ಯ ಮೊದಲ್ಗೊಂಡು ವಿರೋಧಿಯು ನೂತನ ನಿರ್ಗಮನಗಳನ್ನು (ಸತ್ಯವನ್ನು ತಲುಪಲು ನೂತನ ಮಾರ್ಗಗಳನ್ನು) ವ್ಯವಸ್ಥೆ ಮಾಡುವುದರ ಮೂಲಕ ಸಂಘಟನೆಯಲ್ಲಿ ತನ್ನ ಮೋಸವನ್ನು ಪುನಃ ತೋರಿಸಿ ಮತ್ತೊಬ್ಬ ಕ್ರಿಸ್ತ ವಿರೋಧಿಗೆ ಎಡೆಮಾಡಿಕೊಟ್ಟಿದ್ದಾನೆ. ಈ ಕಾರಣ ನಮ್ಮಲ್ಲಿ ಈಗ ಮೂಲದ ವೇಶ್ಯಾ ಮಾತೆ ಮಾತ್ರವಲ್ಲ ಇನ್ನೂ ಆಕೆಯ ಅನೇಕ ಹೆಣ್ಣು ಮಕ್ಕಳುಗಳು ಇದ್ದಾರೆ*. ಈ ಸತ್ಯದ ದೃಷ್ಟಿಕೋನದಲ್ಲಿ ನಾವು ನೂತನ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಮತ್ತು ಪವಿತ್ರತೆಯಿಂದ ಕೂಡಿದ ಅಂದರೆ ಮೂಲ ಗ್ರಂಥದಲ್ಲಿ ಇಲ್ಲದ ಮಾತುಗಳನ್ನು ಸೇರಿಸದ ರೀತಿಯಲ್ಲಿ ಕಾಪಾಡಲ್ಪಟ್ಟಿರುವುದನ್ನು (ಯೋಹಾನ 21:25 ಮತ್ತು 1 ಯೋಹಾನ 5:7 ನೋಡಿರಿ) ಹೊರತು ಪಡಿಸಿ ಬೇರೆ ನಿಜವಾದ ಸಭೆಯ ಚರಿತ್ರೆಯನ್ನು ಬಯಸುವುದಿಲ್ಲ. ಹೀಗಿದ್ದಾಗ್ಯೂ, ನಾವು ಕೆಲವೊಂದು ಸತ್ಯ ಸಂಗತಿಗಳ ಬಗ್ಗೆ ನಿಮ್ಮ ಗಮನವನ್ನು ಸಂಕ್ಷಿಪ್ತವಾಗಿ ಸೆಳೆಯ ಬಯಸುತ್ತೇವೆ. ಇದು ನಮಗೆ ದೇವರ ವಾಕ್ಯಗಳು ತುಲನಾತ್ಮಕವಾದ ಪರಿಶುದ್ಧತೆಯೊಂದಿಗೆ ಕಾಪಾಡಲ್ಪಟ್ಟಿವೆ ಎಂಬುದನ್ನು ಮಾತ್ರವಲ್ಲ, ಕರ್ತನು ಮತ್ತು ಅಪೋಸ್ತಲರುಗಳು ಸಂಘಟಿಸಿದ ಅನೇಕ ಪದ್ಧತಿಗಳು ಇವರುಗಳು ವ್ಯವಸ್ಥೆಗೊಳಿಸಿರುವ ಪದ್ಧತಿಗಿಂತ ವಿಭಿನ್ನವಾಗಿವೆ ಎಂದು ಸಾಬೀತುಪಡಿಸುತ್ತದೆ.
ಇದರ ವಿವರಗಳು ನಮಗೆ ಹೊಸ ಒಡಂಬಡಿಕೆಯಲ್ಲಿ ದೊರಕುತ್ತವೆ :–

–* ಸಂಪುಟ II ಅಧ್ಯಾಯ V ನೋಡಿರಿ

ಪರಿಗಣಿಸಲಿಲ್ಲ. ಯಾಕೆಂದರೆ ಈ ಪದ್ಧತಿಯು ತ್ವರಿತವಾಗಿ ಐಹಿಕ ಮತ್ತು ಆತ್ಮಿಕ ಸಂಗತಿಗಳ ಪ್ರಭಾವೀ ಮಟ್ಟಕ್ಕೆ ಏರಿತ್ತು.

"ಸುದಾರಣಾ" (Reformation) ಸಮಯದಿಂದ ವಿರೋಧಿಯು ಪ್ರತಿ ಹೊಸ ಸತ್ಯದ ನಿರ್ಗಮನದಲ್ಲೂ, (ಪ್ರತಿ ಹೊಸ ಸತ್ಯವನ್ನು ಸ್ಥಾಪಿಸುವ) ಮತ್ತೆ ತನ್ನ ಕುಯುಕ್ತಿಯಿಂದ ಮತ್ತೊಂದು ಕ್ರಿಸ್ತವಿರೋಧಿಯನ್ನು ಸಂಘಟಿಸುತ್ತಾ ಇರುವುದನ್ನು ನೋಡುತ್ತೇವೆ. ಆದುದರಿಂದ, ಇಂದು ಮೊದಲಿದ್ದ "ಜಾರ ಸ್ತ್ರೀಯರಿಗೂ ತಾಯಿ" (mother of harlots) ಅಲ್ಲದೆ ಅವಳಿಗೆ ಅನೇಕ ಹೆಣ್ಣುಮಕ್ಕಳು (daughters) ಇರುವುದನ್ನು ಕಾಣುತ್ತೇವೆ. (ಪ್ರಕಟನೆ 17:5) ಈ ವಿಷಯವಾಗಿ ನಾವು ಸತ್ಯಸಭೆಯ ಚರಿತ್ರೆಯನ್ನು ಬೇರೆಲ್ಲೂ ಹುಡುಕದೆ ಹೊಸ ಒಡಂಬಡಿಕೆಯಲ್ಲಿ ಹುಡುಕುತ್ತೇವೆ ಯಾಕೆಂದರೆ ಅದನ್ನು ಮಹಾಪವಿತ್ರತೆಯಿಂದಲೂ, ದೋಷವಿಲ್ಲದಂತೆಯೂ ನಮಗೆ ಸಾಕ್ಷಾಧಾರವಾಗಿ ಸಂರಕ್ಷಿಸಲ್ಪಟ್ಟಿದೆ. ಹಲವು ಕಡೆ ನಡುವೆ ಸೇರಿಸಿದ ವಾಕ್ಯಗಳನ್ನು ಬಿಟ್ಟರೆ– ಉದಾಹರಣೆಗೆ ಯೋಹಾನ 21:25, 1ಯೋಹಾನ 5:7 ಇತ್ಯಾದಿ.

ವೇದಗ್ರಂಥವು ನಿರ್ದೋಷವಾಗಿ ಸಂರಕ್ಷಿಸಲ್ಪಟ್ಟಿತು ಎಂದು ರುಜುವಾತು ಪಡಿಸಲು ನಾವು ಹೇಗೂ ಕೆಲವು ಸತ್ಯ ಸಂಗತಿಗಳ ಕಡೆ ಗಮನಿಸುವಂತೆ ಕೇಳುತ್ತೇವೆ. ಇದೇ ಸಮಯದಲ್ಲಿ ಅನೇಕ ಸಂಸ್ಥೆಗಳು ಕರ್ತನು ಮತ್ತು ಅಪೋಸ್ತಲರಿಂದ ಆಯೋಜಿತವಾಯಿತೆಂದು ಸಾಧಿಸುತ್ತಾರೆ. ಆದರೆ, ಅವರು ಆಯೋಜಿಸಿದ್ದಕ್ಕಿಂತ ಸಂಪೂರ್ಣವಾಗಿ ಅವು ಬಿನ್ನವಾಗಿವೆ ಎಂದು ಹೊಸ ಒಡಂಬಡಿಕೆಯು ಪ್ರಮಾಣೀಕರಿಸುತ್ತದೆ.

1) ಆದಿ ಸಭೆಗಳು ಇಂದಿನ ಪೋಪ್ ಮತ್ತಿತರ ಅಧೀನ ಸಭೆಗಳಂತೆ ಸಂಘಟನೆಗೊಂಡಿದ್ದರೆ, ದಾಖಲೆಗಳು ಈಗಿರುವುದಕ್ಕಿಂತ ಭಿನ್ನವಾಗಿರುತ್ತಿದ್ದವು. ನಮ್ಮ ಕರ್ತನು ಅಪೋಸ್ತಲರನ್ನು ವಿಜೃಂಭಣೆಯ ಸಮಾರಂಭದೊಡನೆ ಪ್ರತಿಷ್ಠಾಪಿಸಿದ ಬಗ್ಗೆ, ತಾನೇ ಒಂದೆಡೆ ಪೋಪನಂತೆ ಕುಳಿತಿದ್ದು, ಕೇಸರಿ ಬಣ್ಣದ ನಿಲುವಂಗಿ ಧರಿಸಿದ ಅಪೋಸ್ತಲರುಗಳನ್ನು ಕಾರ್ಡಿನಲ್‌ಗಳಾಗಿ ಅಂಗೀಕರಿಸಿದ ಬಗ್ಗೆ , ಶುಕ್ರವಾರವನ್ನು ಗೌರವಿಸುವ ಬಗ್ಗೆ, ಆ ದಿನ ಮಾಂಸಾಹಾರವನ್ನು ನಿಷೇಧಿಸುವ ಬಗ್ಗೆ, ಅಪೋಸ್ತಲರ ಅಥವಾ ಸಮೂಹದವರ ಮೇಲೆ ಚಿಮುಕಿಸುವ ಪವಿತ್ರನೀರಿನ ಬಗ್ಗೆ, ಶಿಲುಬೆಯ ಚಿನ್ಹೆಯ ಬಗ್ಗೆ ಕೆಲವೊಂದು ವಿವರಗಳು ನಮಗೆ ದೊರೆಯುತ್ತಿದ್ದವು. ಕರ್ತನ ತಾಯಿಯಾದ ಮರಿಯಳನ್ನು ಮರೆಯುತ್ತಿದ್ದಿಲ್ಲ. ಆಕೆಯ ಅದ್ಭುತವಾದ ಗರ್ಭಧಾರಣೆಯ ಬಗ್ಗೆ ವಿವರಗಳಿದ್ದು ಆಕೆಯನ್ನು "ದೇವರ ತಾಯಿ"ಎಂದೇ ಸಂಬೋಧಿಸಲಾಗುತ್ತಿತ್ತು. ಕ್ರಿಸ್ತನು ತಾನೇ ಆಕೆಗೆ ಕೆಲವು ವಿಶೇಷ ಗೌರವಾರ್ಪಣೆಮಾಡುವುದನ್ನು ಮತ್ತು ಅಪೋಸ್ತಲರಿಗೆ ಆಕೆಯ ಮೂಲಕವಾಗಿ ತನ್ನನ್ನು ಸಂಪರ್ಕಿಸುವಂತೆ ಉಲ್ಲೇಖಗಳಿರುತ್ತಿದ್ದವು. "ಪವಿತ್ರ ಮೊಂಬತ್ತಿ" ಗಳ ಬಗ್ಗೆ ಅವುಗಳನ್ನು ಯಾವಾಗ ಮತ್ತು ಯಾವ ರೀತಿಯಲ್ಲಿ ಉಪಯೋಗಿಸಬೇಕು ಎಂಬುದರ ಬಗ್ಗೆ ಕೆಲವೊಂದು ಪ್ರತಿಬಂಧಕಾಜ್ಞೆಗಳು, ಸಂತರ ಅವಾಹನೆಯ ಬಗ್ಗೆ ಮಾಸ್ ಬಗ್ಗೆ ಕೆಲವು ಸೂಚನೆಗಳು ಇರುತ್ತಿದ್ದವು. ಯಾವ ರೀತಿಯಲ್ಲಿ ಪೇತ್ರನು ಇತರ ಶಿಷ್ಯರನ್ನು ಸಂಧಿಸಿದನು ಮತ್ತು ಹೇಗೆ ಪೋಪನಾಗಿ ನೇಮಕಗೊಂಡನು, ಅವರುಗಳು ಹೇಗೆ ಆತನ ಮುಂದೆ ಸಾಷ್ಟಾಂಗ ಎರಗಿದರು ಎಂಬುದರ ಬಗ್ಗೆ, ಆತನು ಹೇಗೆ ಅವರಿಗೆ "ಮಾಸ್' ನೆರವೇರಿಸಿ ಕ್ರಿಸ್ತನನ್ನು ರೊಟ್ಟಿಯಲ್ಲಿ ಪುನಃಸೃಷ್ಟಿಸುವ ಮತ್ತು ಆತನನ್ನು ವೈಯುಕ್ತಿಕ ಪಾಪಕ್ಕಾಗಿ ಹೊಸದಾಗಿ ಸಮರ್ಪಣೆಮಾಡುವ ಶಕ್ತಿ ತನ್ನಲ್ಲಿದೆಯೆಂದು ಹೇಳಿದ ಬಗ್ಗೆ ವಿವರಗಳಿರುತ್ತಿದ್ದವು. ಸ್ತೆಫನನನ್ನು ಸಮಾಧಿ ಮಾಡಿದ ಬಗ್ಗೆ, ಯಾವ ರೀತಿಯಲ್ಲಿ ಪೇತ್ರ ಮತ್ತಿತರರು ಆತನು ಪ್ರತಿಷ್ಠಿತ ಭೂಮಿಯಲ್ಲಿ ಮಲಗುವಂತೆ ಆತನಿಗಾಗಿ ಒಂದು ಸಮಾಧಿಯನ್ನು ಪ್ರತಿಷ್ಠೆಗೊಳಿಸಿದರು ಮತ್ತು ಆತನ ಕೈಯಲ್ಲಿ ಒಂದು "ಪವಿತ್ರ ಮೊಂಬತ್ತಿ"ಯನ್ನಿತ್ತು ಪ್ರಾರ್ಥಿಸಿದರು ಎಂಬ ಬಗ್ಗೆ ವಿವರಗಳು ದೊರೆಯುತ್ತಿದ್ದವು. ಪುರೋಹಿತ ವರ್ಗದ ವಿವಿಧ ಕ್ರಮಾಗತಿಯ ಬಗ್ಗೆ ಮತ್ತು ಯಾವ ರೀತಿಯಲ್ಲಿ ಸಾಮಾನ್ಯರು ಅವರೊಂದಿಗೆ "ಸಹೋದರ"ರಲ್ಲ, ಆದರೆ ಅವರ ಅಧೀನದಾಸರು ಎಂಬುದರ ಬಗ್ಗೆ ಕಾನೂನು ಮತ್ತು ನಿಯಮಗಳು ನಮಗೆ ದೊರಕುತ್ತಿದ್ದವು. ಯಾಜಕವರ್ಗದಲ್ಲಿ ಮೇಲ್ಮಟ್ಟ ಮತ್ತು ಕೆಳಮಟ್ಟದ ಪಧಾಧಿಕಾರಿಗಳಿದ್ದು ಅವರಿಗೆ ರೆವೆರೆಂಡ್, ರೈಟ್ ರೆವೆರೆಂಡ್, ಮೋಸ್ಟ್ ರೆವೆರೆಂಡ್; ಬಿಷೋಪ್, ಆರ್ಚ್ ಬಿಷೊಪ್, ಕಾರ್ಡಿನಲ್ ಮತ್ತು ಪೋಪ್ ಎಂಬ ವಿವಿಧ ಸ್ಥಾನಗಳಿದ್ದು ಯಾವ ರೀತಿಯಲ್ಲಿ ಒಬ್ಬರು ಮತ್ತೊಬ್ಬರಿಗೆ ಗೌರವ ಸೂಚಿಸಬೇಕು, ಯಾವುದು ಅತ್ಯುನ್ನತ ಸ್ಥಾನ ಎಂಬುದು ತಿಳಿದು ಬರುತ್ತಿತ್ತು.

ಅಪೋಸ್ತಲರು ಇಂಗಿತಪಡಿಸಿರುವಂತೆ ಈ ಸಂಗತಿಗಳಿಗೆ ದೇವರ ವಾಕ್ಯದಲ್ಲಿ ಯಾವುದೇ ಅರ್ಥವಿಲ್ಲ ಎಂಬ ಸತ್ಯವು ಮೇಲ್ನೋಟಕ್ಕೆ ತೋರುವ ಪುರಾವೆಯಾಗಿದ್ದು ಈ ಪದ್ಧತಿಯು ಸಂಪೂರ್ಣವಾಗಿ ಇಲ್ಲವೆ ಭಾಗಶಃ ಸಭೆಯ ಆ ರೀತಿಯ ವಿಭಜನೆಯನ್ನು, ಅಂಥಹ ಅಧಿಕಾರಿಗಳನ್ನು ಅಥವಾ ಹುದ್ದೆ ಮುಂತಾದುವುಗಳು ಅಪೋಸ್ತಲರುಗಳಿಂದ ಅಥವಾ ಅವರ ಮಾರ್ಗದರ್ಶನದಲ್ಲಿಯಾಗಲೀ ಅಥವಾ ಅವರನ್ನು ನೇಮಿಸಿ ಅವರ ಕಾರ್ಯವನ್ನು ಮಾನ್ಯ ಮಾಡಿದ ಕರ್ತನಿಂದಾಗಲೀ ವ್ಯವಸ್ಥಿತಗೊಂಡವುಗಳಲ್ಲ. (ಯೋಹಾನ 15:16, ಅ.ಕೃ.1:2, ಪ್ರಕ. 21:14 )

(2) ಅಧಿಕವಾಗಿ ಇದು ಈ ಬುದ್ಧಿವಂತ ಸಂಘಟಿಕರು ಸತ್ಯವೇದವನ್ನು ಬೆರಕೆ ಮಾಡಲಿಲ್ಲವೆಂದು ರುಜುವಾತುಪಡಿಸುತ್ತದೆ; ಅವರು ಆ ರೀತಿಯಾಗಿ ಕೃತಿಮ ಸೃಷ್ಟಿ ಮಾಡಿದ್ದಲ್ಲಿ ನಾವು ಸಲಹೆ ಮಾಡಿದಂತೆ ಅವರು ಉಲ್ಲೇಖಗಳೊಡನೆ ಇದನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿತರಣೆ ಮಾಡುತ್ತಿದ್ದರು. (*ಸಂಪುಟ III pp 42, 154, 155).

3) ಈ ಅಧಿಕಾರ ಮತ್ತು ನಿದರ್ಶನಗಳಿರುವಾಗ ಈ ಕಾಲದ "ತಾಯಿ" ಮತ್ತು ಅನೇಕ "ಹೆಣ್ಣುಮಕ್ಕಳ" ಪದ್ಧತಿಯು ಕರ್ತನಿಂದಾಗಲೀ, ಅಪೋಸ್ತಲರಿಂದಾಗಲೀ ನೇಮಕವಾದುದಲ್ಲ ಆದರೆ ಅವರ ಸರಳ ಬೋಧನೆಗಳನ್ನು ವಿರೂಪಗೊಳಿಸಿರುವುದರ ಫಲ, ಆದುದರಿಂದ ಇದು ಕೇವಲ ಮಾನವ ನಿರ್ಮಿತವಾದುವು – ದೈವಿಕ ಕಾರ್ಯಗಳಲ್ಲಿ ಕರ್ತನಿಗಿಂತ ಹೆಚ್ಚು ಬುದ್ಧಿವಂತರಾಗುವ ಪ್ರಯತ್ನವೆಂದು ಕಂಡುಬರುತ್ತದೆ. ನಾವು ದೇವರ ವಾಕ್ಯದಲ್ಲಿ ಹೆಚ್ಚು .ಭರವಸೆಯಿಡೋಣ, ಈ ವಿಷಯದಲ್ಲಿಯಾಗಲೀ, ಬೇರೆ ಯಾವುದೇ ಸಂಗತಿಗಳ ಬಗ್ಗೆಯಾಗಲೀ ಅದು ನಮ್ಮ ಮುಂದೆ ಇಡುವ ಒಂದು ಸಣ್ಣ ವಿವರಣೆ ಬಗ್ಗೆಯೂ ನಾವು ನಿಷ್ಠಾವಂತ ಲಕ್ಷಕೊಡಬೇಕು.

ಈ ಲೋಕ ಚರಿತ್ರೆಯ 6000 ವರ್ಷಗಳಿಂದ ಇಂದಿನವರೆಗೆ ದೇವರು ಮಾನವ ಜಾತಿಗೆ ಜೀವನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ತಮ್ಮಲ್ಲಿನ ಉತ್ತಮವಾದುದನ್ನು ಮಾಡಲು ಅನುಮತಿಸಿದ್ದಾನೆ. ಪ್ರಾಕೃತ ಮನುಷ್ಯನಿಗೆ ದೇವರ ಕಡೆಗೆ ವಾಲಿ ಆತನನ್ನು ಗೌರವಿಸುವ ಮತ್ತು ಆರಾಧಿಸುವ ಮಾನಸಿಕ ಗುಣಗಳು ಇರುತ್ತದೆ. ಈ ಮಾನಸಿಕ ಗುಣಗಳು ಪತನದ ಕಾರಣ ಪೂರ್ಣವಾಗಿ ಮಾಸಿಹೋಗಿಲ್ಲ, ಜನಾಂಗವು ಸಾಮಾನ್ಯವಾಗಿ ಪೂರ್ಣಭ್ರಷ್ಟತೆಯಿಂದ ಕೂಡಿದೆ ಎಂಬುದು ಸತ್ಯವಲ್ಲ. ದೇವರು ಮಾನವರಿಗೆ ಇತರ ಗುಣಗಳನ್ನು ತಮ್ಮ ಇಷ್ಟಾನುಸಾರ ಅನುಷ್ಟಾನಗೊಳಿಸಲು ಅವಕಾಶಕೊಟ್ಟಿದ್ದು ಅವರು ಅದನ್ನು ತಮ್ಮ ನೈತಿಕ ಮತ್ತು ಧಾರ್ಮಿಕ ಲಕ್ಷಣಗಳ ಒಲವಿಗೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಾರೆ. ಸ್ವಾಭಾವಿಕ ಇಸ್ರಾಯೇಲ್ಯರು ಮತ್ತು ಆತ್ಮೀಕ ಇಸ್ರಾಯೇಲ್ಯರಿಂದ ಲೋಕಕ್ಕೆ ಉಂಟಾದ ಪ್ರಭಾವಗಳು ಒಂದು ಕಡೆ ಇದ್ದು, ಮತ್ತೊಂದು ಕಡೆ, ದೇವರು ಲೋಕವನ್ನು ಅದು ತನ್ನ ಸ್ವಂತ ಅಭಿವೃದ್ಧಿ ಮುಂತಾದವುಗಳ ಬಗ್ಗೆ ತನಗೆ ಉತ್ತಮವಾಗಿ ಕಂಡದ್ದನ್ನು ಮಾಡಿಕೊಳ್ಳುವಂತೆ ಒಂಟಿಯಾಗಿ ಬಿಟ್ಟುಬಿಟ್ಟಿದ್ದಾನೆಂದು ನಾವು ನೋಡಬಹುದು. ಮಾನವನು ತನ್ನ ಅಜ್ಞಾನ ಮತ್ತು ಕುರುಡುತನದ ದೆಸೆಯಿಂದ ತಮ್ಮ ವಿವಿಧ ಮೂಢಭಕ್ತಿಯಿಂದ, ಸುಳ್ಳು ಧರ್ಮ, ಮಂತ್ರ ಮುಂತಾದವುಗಳಿಂದ ಜನ ಸಮೂಹವನ್ನು ದೇವರ ಕಡೆಯಿಂದ ತಿರುಗಿಸುತ್ತಿರುವ ಸೈತಾನನ ಮತ್ತು ಬಿದ್ದು ಹೋದ ದೇವದೂತರುಗಳ ಬಲೆಗೆ ಹೆಚ್ಚಾಗಿಬಿದ್ದಿದ್ದಾರೆ. ಅಪೋಸ್ತಲನು ಈ ಪರಿಸ್ಥಿತಿಯನ್ನು ವಿವರಿಸುವವನಾಗಿ ಮಾನವರು ದೇವರನ್ನು ತಿಳುಕೊಂಡಿದ್ದರೂ ಅವರು ಆತನನ್ನು ದೇವರೆಂದು ಮಹಿಮೆಪಡಿಸಲಿಲ್ಲ, ಆತನಿಗೆ ಕೃತಜ್ಞತೆ ಸಹಾ ಸಲ್ಲಿಸಲಿಲ್ಲ,ಆದರೆ ಅವರು ತಮ್ಮ ಊಹೆಯಲ್ಲಿ ವಿಫಲರಾದರು ಮತ್ತು ಅವರ ಮೂರ್ಖ ಹೃದಯವು ಕತ್ತಲಾಯಿತು. ದೇವರು ಅವರು ಬೇಕಾದುದನ್ನು ಮಾಡಿ ಕೆಲವು ಪಾಠಗಳನ್ನು ತಮ್ಮ ದುಷ್ಟತನದ ಮೂಲಕವೇ ಕಲಿತುಕೊಳ್ಳುವಂತೆ ಮತ್ತು ಅವರು ಅತಿಯಾದ ಪಾಪದಲ್ಲಿ ಬಿದ್ದು ತಮ್ಮ ಸೃಷ್ಟಿಕರ್ತನ ಹೊರತಾಗಿ ಅವಿವೇಕತೆಯಿಂದ ಇತರರ ಅಭಿಪ್ರಾಯವನ್ನು ಕೇಳುವಾಗ ಅವುಗಳು ಸ್ಪಷ್ಟವಾಗಿ ಅವರಿಗೆ ಪ್ರಕಟವಾಗುವಂತೆ ಅವರನ್ನು ಬಿಟ್ಟುಬಿಟ್ಟನು

ನಾವೀಗಾಗಲೇ ಕಂಡುಕೊಂಡಂತೆ, ಮಾನವರನ್ನು ಅವರ ಬಲಹೀನ ಮತ್ತು ಬಿದ್ದುಹೋದ ಸ್ಥಿತಿಯಲ್ಲಿ ಬಿಟ್ಟುಬಿಡುವುದು ದೇವರ ಉದ್ದೇಶವಲ್ಲ. ಆದರೆ, ನೂತನ ಸೃಷ್ಟಿಯ ಮೂಲಕವಾಗಿ, ಆತನು ತನ್ನದೇ ಆದ ಸೂಕ್ತ ಸಮಯದಲ್ಲಿ ದೇವರ ಜ್ಞಾನವನ್ನು ಪ್ರತಿಯೊಂದು ಮಾನವ ಕುಟುಂಬಗಳು ಪಡೆಯುವಂತೆ ಸತ್ಯದ ಜ್ಞಾನಕ್ಕೆ ಬರುವ ಸಂಪೂರ್ಣ ಅವಕಾಶ ಎಲ್ಲರಿಗೂ ದೊರೆಯುತ್ತದೆ. ವಿಮೋಚನೆಯ ಮೂಲಕ ಎಲ್ಲಾ ಆಶೀರ್ವಾದಗಳೂ ಲಭಿಸುತ್ತವೆ. ಆದರೆ ನಾವು ಇಲ್ಲಿ ಸ್ಪಷ್ಟವಾಗಿ ನಿರೂಪಿಸ ಬಯಸುವ ಅಂಶವೆಂದರೆ ದೇವರು ಅನ್ಯಜನಾಂಗಗಳನ್ನು ತಮ್ಮಷ್ಟಕ್ಕೇ ಬಿಟ್ಟುಬಿಟ್ಟಿರುವಂತೆ ಆತನು "ಕ್ರೈಸ್ತ ರಾಜ್ಯಗಳನ್ನು" ಸಹಾ ತನ್ನಷ್ಟಕ್ಕೇ ಬಿಟ್ಟಿದ್ದಾನೆ. ದೈವಿಕ ಪ್ರಕಟನೆಯ ಸ್ವಲ್ಪ ಬೆಳಕನ್ನಾದರೂ ಹೊಂದಿದವರಿಗೆ ಅದನ್ನು ತಮ್ಮ ಇಷ್ಟಬಂದಂತೆ ಅಂದರೆ ದೈವಿಕ ಯೋಜನೆಯನ್ನು ಉತ್ತಮಪಡಿಸುವಲ್ಲಿ ಹಾಗೂ ಮಾನವ ಪದ್ಧತಿಗಳನ್ನು ವ್ಯವಸ್ಥೆಗೊಳಿಸುವಂತೆ ಬಿಟ್ಟುಬಿಟ್ಟಿದ್ದಾನೆ. ಇವೆಲ್ಲವೂ ಆತನಿಗೆ ಮಧ್ಯೆ ಪ್ರವೇಶಿಸುವ ಶಕ್ತಿ ಇಲ್ಲವೆಂದಲ್ಲ ಅಥವಾ ಆತನು ಈ ಹೆಚ್ಚುಕಡಿಮೆ ಘರ್ಷಣೆ ಉಂಟುಮಾಡುವ, ಹಾನಿಕಾರಕ ಯೋಚನೆಗಳನ್ನು, ಮಾನವ ಸಂಸ್ಥೆಗಳನ್ನು, ಸಭೆಗಳನ್ನು ಆತನು ಒಪ್ಪುತ್ತಾನೆಂಬುದೂ ಅಲ್ಲ. ಈ ಅನುಭವಗಳು ಮತ್ತೊಂದು ಪಾಠವನ್ನು ಕಲಿಸುತ್ತವೆ ದೇವರು ಹೇಗೆ ಸ್ಥಿರನಾಗಿದ್ದು ತನ್ನ ಮೂಲ ಉದ್ದೇಶಗಳನ್ನು ಬಹುಮಟ್ಟಿಗೆ ಮನುಷ್ಯರ ವ್ಯವಸ್ಥೆ ಮತ್ತು ಸಾಧನಗಳನ್ನು ಕಾರ್ಯರೂಪಕ್ಕೆ ತಂದು ಫಲಿತಾಂಶಗಳನ್ನು ಅವರು ಗಣನೆಗೆ ತಂದುಕೊಂಡು ಕೆಲವೊಮ್ಮೆ ಅವುಗಳ ಮೂಲಕ ಭಾಗಶಃ ಮತ್ತು ಕೆಲವೊಮ್ಮೆ ಪೂರ್ಣವಾಗಿ ಅವರಿಗೆ ವಿರೋಧವಾಗಿ ನೆರವೇರಲ್ಪಡುತ್ತವೆ. ಹಾಗೆಯೇ ಯೆಹೂದ್ಯ ಯುಗದ ಅಂತ್ಯದಲ್ಲಿ ದೇವರು ಆ ಜನಾಂಗದ ಕೆಲವರು ಕರ್ತನನ್ನು ಮತ್ತು ಆತನ ಅಪೋಸ್ತಲರನ್ನು ಶಿಲುಬೆಗೆ ಹಾಕುವುದರ ಮೂಲಕ, ತನ್ನ ಯೋಜನೆಯನ್ನು ನೆರವೇರಿಸುವಂತೆ ಆತನು ಮಾಡಿದನು. ಅವರಲ್ಲಿ ಕೆಲವರು "ನಿಜವಾದ ಇಸ್ರಾಯೇಲ್ಯ"ರಾಗಿದ್ದರು. ನಂತರದಲ್ಲಿ ಅವರನ್ನು ಆಶೀರ್ವದಿಸಿ ಅವರನ್ನು ಮೇಲೆತ್ತಿ ಕ್ರಿಸ್ತನ ಶ್ರಮೆಗಳಲ್ಲಿಯೂ ಅದರಂತೆ ಆಗಾಗ ಆತನ ಮಹಿಮೆಯಲ್ಲಿಯೂ ಭಾಗೀಧಾರರಾಗುವಂತೆ ಮಾಡಿದನು. ಆದುದರಿಂದ ಇಂದು ಆತ್ಮೀಕರಾದ "ನಿಜವಾದ ಇಸ್ರಾಯೇಲ್ಯ"ರು ಇದ್ದು ಅವರು ಪೌಲನಂತೆ ಕೆಡುಕನ ಬಲೆಯಿಂದ ಪಾರಾಗುವರು.

ಗಮನಿಸಲರ್ಹವಾದ ಮತ್ತೊಂದು ಅಂಶವೇನೆಂದರೆ, ಕರ್ತನಿಗೆ ತನ್ನ ರಾಜ್ಯವನ್ನು ಆರಂಭಿಸಲು ವಿಶೇಷ ಸಮಯವುಂಟು, ಈ ವಿಶೇಷ ಸಮಯದಲ್ಲಿ ಆತನು ಆಯ್ದುಕೊಂಡ ನೂತನ ಸೃಷ್ಟಿಗಳು ಅಭಿವೃದ್ಧಿಗೊಳ್ಳುತ್ತಾರೆ ಮತ್ತು ಆತನ ಸೇವೆಗೆ ಸಿದ್ಧರಾಗುತ್ತಾರೆ. ಸಹಜವಾಗಿ, ವಿಶೇಷವಾದ ಬೆಳಕು ಪ್ರಾರಂಭದಲ್ಲಿಯೂ ಮತ್ತು ಅಂತ್ಯದಲ್ಲಿಯೂ ಬೆಳಗಬೇಕೆಂಬುದು ಆತನ ಯೋಜನೆಯ ಒಂದು ಭಾಗ. ಅಪೋಸ್ತಲನು ಇದನ್ನು "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿದೆ ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದಿವೆ" (1 ಕೊರಿ.10:11) ಎಂದು ಬರೆಯುತ್ತಾನೆ. ಯೆಹೂದ್ಯ ಮತ್ತು ಸುವಾರ್ತಾ ಯುಗದ ಮಡಿಲಲ್ಲಿ (Lapping) ಮಾರ್ಗ, ಸತ್ಯ ಮತ್ತು ಜೀವವು ಮೊದಲಿಗೆ ಪ್ರಕಟವಾಯಿತು. "ಕತ್ತಲೆಯ ಯುಗವು' ಮಧ್ಯೆ ಪ್ರವೇಶಿಸಿತು. ಈಗ ಸುವಾರ್ತಾ ಮತ್ತು ಧರ್ಮಯುಗ ಸಂಧಿಸುವ ಕಾಲದಲ್ಲಿ ಮೊದಲೆಂದೂ ಇಲ್ಲದಂತೆ ಹಳೆಯ ಮತ್ತು ಹೊಸ ಸಂಗತಿಗಳ ಮೇಲೆ ಬೆಳಕು ಪ್ರಕಾಶಿಸುತ್ತಿದೆ. ಕರ್ತನೊಂದಿಗೆ ಮೊದಲಿನಿಂದಲೂ ಇದ್ದವರೊಡನೆ ವಿಶೇಷವಾದ ಬೆಳಕು ಪ್ರಕಾಶಿಸಿರಬೇಕೆಂದು ನಾವು ಊಹಿಸುವಾಗ, ಈಗ ಅಂಥವರಿಗೆ ಈ ಯುಗಾಂತ್ಯ ಕಾಲದಲ್ಲಿ ಇಂದಿನ ಸತ್ಯದ ಬೆಳಕು ದಯಪಾಲಿಸಲಾಗುವುದು. ಇದರಿಂದ ಅವರು ಶುದ್ಧರಾಗುವರು. ಇದೇ ಪ್ರಮಾಣದ ಬೆಳಕು ಈ ಮಧ್ಯದ ಶತಮಾನಗಳಲ್ಲಿ ಶುದ್ಧತೆಗೆ ಅಗತ್ಯವಿತ್ತೆಂದು ನಾವು ಯೋಚಿಸಲಾಗದು. ಇದರಲ್ಲಿ ಕೆಲವು ಕಾಲವನ್ನು "ಅಂಧಕಾರದ ಯುಗ"ವೆಂದು ತಿಳಿಯಲಾಗಿತ್ತು. ಕರ್ತನು ತನ್ನನ್ನು ಎಂದೂ ಸಾಕ್ಷಿಯಿಲ್ಲದೆ ಬಿಟ್ಟಿದ್ದನೆಂದು ನಾವು ಭಾವಿಸಲಾಗದು. ಹೇಗೂ ಇದನ್ನು ಚರಿತ್ರೆಯ ಪುಟಗಳಲ್ಲಿ ನಿರ್ಲಕ್ಷಿಸಿದ್ದಿರಬಹುದು. ಆದರೆ

ಈ ನಿರ್ಲಕ್ಷತೆಗೆ ಅವರ ತುಲನಾತ್ಮಕ ಅಸ್ಪಷ್ಟತೆ ಮತ್ತು ಮಹಾ ಕ್ರಿಸ್ತವಿರೋಧಿ ಪದ್ಧತಿಯ ಬಗ್ಗೆ (ಅವರಲ್ಲಿ ಕೆಲವರು ಈ ಪದ್ಧತಿಯಲ್ಲಿ ಇದ್ದಿರ ಬಹುದಾದರೂ) ಅವರ ಸಂಬಂಧವಾಗಲೀ ಅನುಕಂಪವಾಗಲೀ ಇಲ್ಲದಿರುವುದೇ ಕಾರಣ. ಆದುದರಿಂದ ಈಗ ಅನ್ವಯವಾಗುವ ಕರ್ತನ ಕರೆಯು ಸ್ಪಷ್ಟವಾಗಿ ನಾವು ಬಹಳಷ್ಟು ಕರ್ತನ ಜನರು ಒಳಗಿರುವರೆಂದು ನಿರೀಕ್ಷಿಸುತ್ತೇವೆ, ಆದರೆ ಅವರು ಬಹು ಭಿನ್ನಮತದಿಂದಾಗಿ ಗೊಂದಲಕ್ಕೊಳಗಾಗಿದ್ದಾರೆ ಎಂಬುದು ನಮ್ಮನ್ನು, ದಿಗ್ಭ್ರಮೆಗೊಳಿಸುತ್ತದೆ. ಬಾಬೇಲಿನಲ್ಲಿ "ಮಹಾ ಬಾಬೇಲ್ ಬೀಳುತ್ತಿದೆ", – "ಬಿದ್ದಳು, ಬಿದ್ದಳು, ಬಾಬೇಲೆಂಬ ಮಹಾ ನಗರಿಯು ಬಿದ್ದಳು ಅವಳನ್ನು ಬಿಟ್ಟು ಬನ್ನಿರಿ, ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು, ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು" (ಪ್ರಕಟನೆ 18 : 2,4) ಎಂಬ ಕರ್ತನ ಕರೆ ಇದೆ.

ಹೀಗೆ ಸಭೆಯ ಅಲಕ್ಷ್ಯದ ದೃಷ್ಟಿಕೋನವನ್ನು ಮತ್ತು ಅದರ ಮಿತವಾದ ಚರಿತ್ರೆಯನ್ನು ತೆಗೆದುಕೊಂಡು ನಾವು ನಿರ್ದಿಷ್ಟವಾಗಿ ಮೂಲದಲ್ಲಿ ಕರ್ತನಿಂದ ಸ್ಥಾಪಿತವಾದ ಸಭೆಯ ಪರೀಕ್ಷೆ ಮಾಡೋಣ. ದೇವರ ಒಂದೇ ಆತ್ಮ ಇರುವಲ್ಲಿ, ಅದನ್ನು ಆತನವರೆಲ್ಲರೂ ಹೊಂದಿರಬೇಕು. ಅದುದರಿಂದ ಸಭೆಗೆ ನಮ್ಮ ಕರ್ತನಾದ ಯೇಸುವೆಂಬ ಒಂದೇ ಶಿರಸ್ಸು ಮತ್ತು ಕೇಂದ್ರವುಂಟು. ಹೀಗಿದ್ದಾಗ್ಯೂ, ಆತನ ಎಲ್ಲಾ ಕಾರ್ಯಗಳಲ್ಲಿ ತಂದೆಯು ಮುಕ್ತವಾಗಿ ಅಂಗೀಕರಿಸಿದ್ದಾನೆ ಮತ್ತು ಆತನೇ ಹೇಳುವಂತೆ ಎಲ್ಲಾ ಕಾರ್ಯಗಳನ್ನೂ ಆತನು ತಂದೆಯ ಅಧಿಕಾರದ ಮೇರೆಗೆ ಆತನ ಹೆಸರಿನಲ್ಲಿಯೇ ಮಾಡಿದ್ದಾನೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು – "ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡುವವು" (ಮತ್ತಾಯ 15:13). ನೂತನ ಸೃಷ್ಟಿಯಾದ ನಿಜವಾದ ಸಭೆಯು ತಂದೆಯು ನೆಟ್ಟದ್ದಾಗಿದೆ. ನಮ್ಮ ಕರ್ತನು "ನಾನೇ ನಿಜವಾದ ದ್ರಾಕ್ಷೆಬಳ್ಳಿ, ನೀವು ಕೊಂಬೆಗಳು ಮತ್ತು ನನ್ನ ತಂದೆಯು ತೋಟಗಾರನಾಗಿದ್ದಾನೆ" (ಯೋಹಾನ 15:1, 5) ಎಂದು ಹೇಳಿದ್ದಾನೆ. ನಂತರದಲ್ಲಿ ಆತನು " ಈ ಲೋಕದ ದ್ರಾಕ್ಷೆಬಳ್ಳಿ ಒಂದುಂಟು" ಅದು ನಾಮಾಂಕಿತಸಭೆ, ಸುಳ್ಳಾದಸಭೆ, ಅದು ತಂದೆಯಿಂದ ನೆಡಲ್ಪಟ್ಟದ್ದಲ್ಲ, ಅದು ಕಿತ್ತುಹಾಕಲ್ಪಡುವುದು. ಒಳ್ಳೆಯ ದ್ರಾಕ್ಷೆಬಳ್ಳಿಯ ಫಲವು ಪ್ರೀತಿ ಮತ್ತು ಇದು ತಂದೆಗೆ ಅಮೂಲ್ಯವಾಗಿದೆ. ಆದರೆ ಈ ಲೋಕದ ದ್ರಾಕ್ಷೆ ಬಳ್ಳಿಯ ಫಲವು ವಿವಿಧ ಬಗೆಯ ಸ್ವಾರ್ಥವು. ಅಂತಿಮವಾಗಿ ಇದು ಸಂಕಟ ಕಾಲದಲ್ಲಿ ರೌದ್ರವೆಂಬ ದೊಡ್ಡ ತೊಟ್ಟಿಯಲ್ಲಿ ಕೂಡಿಸಲ್ಪಡುವುದು. ಆಗ ಅಂತ್ಯವು ಬರುವುದು (ಪ್ರಕಟನೆ 14:19).

ನಮ್ಮ ಕರ್ತನಾಗಲೀ, ಅಪೊಸ್ತಲರಾಗಲೀ ಸಭೆಯಲ್ಲಿ ಯಾವುದೇ ವಿಭಜನೆಯನ್ನು ಮಾನ್ಯಮಾಡಲಿಲ್ಲ ಮತ್ತು ಅಂಥವುಗಳು ವಾಸ್ತವದಲ್ಲಿಯೂ, ಹೆಸರಿನಲ್ಲಿಯೂ ಒಡಕು ಅಥವಾ ಬೇಧವೆಂದು ಕಡೆಗಣಿಸಿದರು ಎಂದು ಪ್ರತಿಯೊಬ್ಬ ಸತ್ಯವೇದ ವಿದ್ಯಾರ್ಥಿಯು ಬಲ್ಲವನಾಗಿದ್ದಾನೆ. ಅವರಿಗೆ ಸಭೆಯು ಅದರ ಒಂದೇ ವಿಶ್ವಾಸ, ಒಬ್ಬನೇ ಕರ್ತ ಮತ್ತು ಒಂದೇ ದೀಕ್ಷಾಸ್ನಾನ ಇವುಗಳ ಅನ್ವಯ ಏಕವೂ ಮತ್ತು ಅವಿಭಕ್ತವೂ ಆಗಿತ್ತು. ಈ ದೃಷ್ಟಿಕೋನದ ಮೂಲಕ ಇದನ್ನು ಸಭೆ, ದೇವರ ಸಭೆ, ಜೀವವುಳ್ಳ ದೇವರ ಸಭೆ, ಕ್ರಿಸ್ತನ ಸಭೆ, ಚೊಚ್ಚಲ ಮಕ್ಕಳ ಸಭೆ ಎಂದೂ, ಅದರ ಪ್ರತಿಯೊಬ್ಬ ವ್ಯಕ್ತಿಯನ್ನೂ "ಸಹೋದರ', "ಶಿಷ್ಯರು', ಅಥವಾ "ಕ್ರೈಸ್ತರು" ಎಂದು ಕರೆಯಲಾಯಿತು. ಈ ಎಲ್ಲಾ ಹೆಸರುಗಳನ್ನು ಬೇಧಭಾವವಿಲ್ಲದೆ ಇಡೀ ಸಭೆಗೂ ಮತ್ತು ಇಬ್ಬರಾಗಲೀ, ಮೂವರಾಗಲೀ ಇರುವ ಸಣ್ಣ ಕೂಟಗಳಿಗೂ, ಯೆರೂಸಲೇಮ್, ಅಂತಿಯೋಕ್ಯ ಮತ್ತಿತರ ಅನೇಕ ಕಡೆಗಳಲ್ಲಿದ್ದ ಪ್ರತಿಯೊಬ್ಬ ವಿಶ್ವಾಸಿ ವ್ಯಕ್ತಿಗಳಿಗೂ ಉಪಯೋಗಿಸಲಾಯಿತು. ವಿಧವಿಧವಾದ ಈ ಹೆಸರುಗಳು ಮತ್ತು ಅವುಗಳ ಸಾಮಾನ್ಯ ಉಪಯೋಗವು ಅವುಗಳಲ್ಲಿ ಯಾವುದೂ ಸಮಂಜಸವಾದ ಹೆಸರಾಗಿರಲಿಲ್ಲ ಎಂಬ ಅಭಿಪ್ರಾಯವನ್ನು ಉಂಟುಮಾಡುತ್ತದೆ. ಇವೆಲ್ಲವುಗಳೂ ನಮ್ಮ ಕರ್ತನು ಮತ್ತು ಆತನ ಅಪೊಸ್ತಲರುಗಳು ನಿರಂತರವಾಗಿ ಮುಂದಿಟ್ಟ ಮಹಾ ಸತ್ಯದ ಉದಾಹರಣೆಗಳಾಗಿದ್ದವು. ಅಂದರೆ, ಇವುಗಳೆಲ್ಲವೂ ಕರ್ತನ ಅನುಯಾಯಿಗಳ ಸಭೆಯಾಗಿದ್ದು (ಎಕ್ಲೀಷಿಯಾ, ದೇಹ, ಸಮೂಹ) ಆತನಿಂದ ಆಯ್ಕೆಗೊಂಡವರು. ಆತನ ಶಿಲುಬೆಯ ಪಾಲುದಾರರಾಗಿದ್ದು ಅವಶ್ಯವಾದ ಪಾಠವನ್ನು ಕಲಿತು, ಆತನ ಮಹಿಮೆಯಲ್ಲಿಯೂ ಸಂಗಡಿಗರಾಗಿರುವರು.

ಈ ಸಂಪ್ರದಾಯವು ಮುಂದುವರೆಯಬೇಕಿತ್ತು, ಆದರೆ ಅಂಧಕಾರದ ಯುಗದಲ್ಲಿ ಬದಲಾಯಿತು. ತಪ್ಪುಗಳು ಅಭಿವೃದ್ಧಿ ಹೊಂದಿದಂತೆಲ್ಲಾ ಭಿನ್ನವರ್ಗದ ಉತ್ಸಾಹ ಅದರೊಂದಿಗೆ ಬಂದು ವಿಚಿತ್ರವಾದ ಹೆಸರುಗಳು ಹಿಂಬಾಲಿಸಿದವು – ಚರ್ಚ್ ಆಫ್ ರೋಮ್, ಬ್ಯಾಪ್ಟಿಸ್ಟ್ ಚರ್ಚ್, ಲೂಥರನ್ ಚರ್ಚ್, ಚರ್ಚ್ ಆಫ್ ಇಂಗ್ಲೆಂಡ್, ಹೋಲಿ ಕೆಥೋಲಿಕ್ ಚರ್ಚ್, ವೆಸ್ಲಿಯನ್ ಚರ್ಚ್, ಕ್ರಿಶ್ಚಿಯನ್ ಚರ್ಚ್, ಪ್ರೆಸ್ಬಿಟೇರಿಯನ್ ಚರ್ಚ್ ಮುಂತಾದುವು. ಇವುಗಳು ಲೌಕೀಕ ಗುರುತುಗಳೆಂದು ಅಪೊಸ್ತಲನು ಸೂಚಿಸಿದ್ದಾನೆ (1 ಕೊರಿ. 3:3,4) ಮತ್ತು ಇದುವರೆಗೆ ಪ್ರಪಂಚವನ್ನು ಕವಿದುಕೊಂಡಿದ್ದ ದಟ್ಟವಾದ ಅಂಧಕಾರದಿಂದ ನೂತನ ಸೃಷ್ಟಿಯು ಹೊರ ಹೊಮ್ಮಿದಂತೆಲ್ಲಾ ಈ ಅಂಶದ ಮೇಲೆ ಬೆಳಕನ್ನು ಸಹಾ ಚೆಲ್ಲುತ್ತದೆ, ಕೆಡುಕಿನ ತಪ್ಪು ಮತ್ತು ಗೋಚರಿಸುವಿಕೆಗಳು ಭಿನ್ನವರ್ಗದಿಂದ ಹೊರಬರುವುದು ಮಾತ್ರವಲ್ಲ, ಈ ಸತ್ಯವೇದದಲ್ಲದ ಹೆಸರುಗಳಿಂದ ಕರಿಸಿಕೊಳ್ಳಲು ತಿರಸ್ಕರಿಸಿದರೂ ಯಾವುದೇ ಸತ್ಯವೇದ ಸಂಬಂಧಿತವಾದುವುಗಳಿಗೆ ಉತ್ತರಿಸಲು ಇಚ್ಛಿಸುತ್ತದೆ. ನಾವೀಗ ನಮ್ಮ ಕರ್ತನು ಸ್ಥಾಪಿಸಿದ 'ಏಕ ಸಭೆಯ' ಅಸ್ಥಿವಾರದ ಬಗ್ಗೆ ಪರೀಕ್ಷಿಸೋಣ ;–

## ಯಜ್ಞದ ಕುರಿಯಾದಾತನ ಹನ್ನೆರಡು ಅಪೊಸ್ತಲರುಗಳು

### The Twelve Apostles of the Lamb

"ಹಾಕಿರುವ ಅಸ್ಥಿವಾರವು ಯೇಸು ಕ್ರಿಸ್ತನೇ; ಆ ಅಸ್ಥಿವಾರವಲ್ಲದೆ ಮತ್ತೊಂದು ಅಸ್ಥಿವಾರವನ್ನು ಯಾರೂ ಹಾಕಲಾರರಷ್ಟೆ" (1 ಕೊರಿ. 3:11) ಎಂದು ಅಪೊಸ್ತಲನು ಸಾರಿ ತಿಳಿಸುತ್ತಾನೆ. ಈ ಅಸ್ಥಿವಾರದ ಮೇಲೆ ದೇವರ ಪ್ರತಿನಿಧಿಯಾದ ನಮ್ಮ ಕರ್ತನು ತನ್ನ ಸಭೆಯನ್ನು ಕಟ್ಟಲು ಪ್ರಾರಂಭಿಸಿದನು. ಹಾಗೆ ಮಾಡುವಲ್ಲಿ ಆತನು ಹನ್ನೆರಡು ಮಂದಿ ಅಪೊಸ್ತಲರನ್ನು

ಕರೆದನು; ಅಕಸ್ಮಿಕವಾಗಿಯಲ್ಲ, ಪೂರ್ವ ಸಂಕಲ್ಪದಿಂದಲೇ. ಯಾವ ರೀತಿಯಲ್ಲಿ ಇಸ್ರಾಯೇಲ್ಯರ ಹನ್ನೆರಡು ಕುಲಗಳು ಆಕಸ್ಮಿಕವಲ್ಲವಾಗಿರದೆ ದೇವರ ಯೋಜನೆಯ ಧೃಡಪಡಿಸುವಿಕೆ ಯಾಗಿರುವಂತೆ ಇದೂ ಸಹಾ ಆಕಸ್ಮಿಕವಲ್ಲ, ಆದರೆ ವಿನ್ಯಾಸಕ್ಕನುಸಾರವಾದುದು. ಯೂದನು ಆ ಹನ್ನೆರಡು ಮಂದಿಯಲ್ಲಿರಲು ಅಯೋಗ್ಯನಾಗಿ ಕಂಡು ಬಂದುದರಿಂದ ಪೌಲನು ಆ ಸ್ಥಾನಕ್ಕೆ ಉತ್ತರಾಧಿಕಾರಿಯಾದುದನ್ನು ಹೊರತುಪಡಿಸಿ ಅಂದಿನಿಂದ ನಮ್ಮ ಕರ್ತನು ಆ ಸ್ಥಾನಕ್ಕೆ ಹನ್ನೆರಡಕ್ಕಿಂತ ಹೆಚ್ಚಾಗಿ ಆರಿಸಿಕೊಳ್ಳದಿರುವುದು ಮಾತ್ರವಲ್ಲ ಇನ್ನು ಹೆಚ್ಚಿನವರನ್ನು ಆರಿಸಲು ಅಧಿಕಾರಕೊಡಲಿಲ್ಲ.

ಅಪೊಸ್ತಲರನ್ನು ಕರ್ತನು ಎಷ್ಟೊಂದು ಜೋಪಾನವಾಗಿ ನೋಡಿಕೊಂಡನೆಂದು ನಾವು ಗಮನಿಸುತ್ತೇವೆ – ಆತನು ಪೇತ್ರನ ಬಗ್ಗೆ ಗಮನವಿಟ್ಟಿದ್ದು, ಆತನ ಶೋಧನೆಯ ಕಾಲದಲ್ಲಿ ಆತನಿಗಾಗಿ ಪ್ರಾರ್ಥಿಸಿದ್ದು ಮತ್ತು ನಂತರದಲ್ಲಿ ಆತನಿಗೆ ತನ್ನ ಕುರಿಗಳನ್ನು ಮತ್ತು ಕುರಿಮರಿಗಳನ್ನು ಮೇಯಿಸುವಂತೆ ಕೋರಿಕೊಂಡದ್ದು ಇತ್ಯಾದಿ. ಅನುಮಾನಪಟ್ಟ ತೋಮನ ಬಗ್ಗೆ ಕರ್ತನು ಕಳಕಳಿಯುಳ್ಳವನಾಗಿ ತನ್ನ ಪುನರುತ್ಥಾನದ ಖಚಿತತೆಯನ್ನು ಆತನಿಗೆ ಸಾದ್ಯಂತವಾಗಿ ನಿರೂಪಿಸಿದ್ದನ್ನು ಸಹಾ ನಾವು ನೋಡಬಹುದು. ಹನ್ನೆರಡು ಮಂದಿಯಲ್ಲಿ ನಾಶಕ್ಕೆ ಅಧೀನನಾದವನ ಹೊರತಾಗಿ ಬೇರೆ ಯಾರನ್ನೂ ಕಳಕೊಳ್ಳಲಿಲ್ಲ. ಆತನು ದಾರಿತಪ್ಪುವುದು ಕರ್ತನಿಗೆ ಮುಂಚೆಯೇ ತಿಳಿದಿತ್ತು ಮತ್ತು ದೇವರ ವಾಕ್ಯಗಳಲ್ಲಿಯೂ ಮುಂತಿಳಿಸಲ್ಪಟ್ಟಿತ್ತು. ಅಪೊಸ್ತಲರ ಕೃತ್ಯಗಳಲ್ಲಿ ದಾಖಲಿಸಿರುವ ಮತ್ತೀಯನ ಆಯ್ಕೆಯನ್ನು ನಾವು ಮಾನ್ಯಮಾಡುವಂತಿಲ್ಲ. ಯಾಕೆಂದರೆ ಇದು ಕರ್ತನ ಮಾತಿನಂತೆ ಯಾವುದೇ ಅರ್ಥದಲ್ಲಿ ಕಂಡುಬರುವುದಿಲ್ಲ. ಆತನು ನಿಸ್ಸಂಶಯವಾಗಿ ಒಳ್ಳೆಯ ಮನುಷ್ಯ, ಆದರೆ ಆ ಹನ್ನೊಂದು ಮಂದಿ ಆತನನ್ನು ಯಾವುದೇ ಅಧಿಕಾರವಿಲ್ಲದೆ ಆರಿಸಿದರು. ಅವರಿಗೆ ಯೆರೂಸಲೇಮಿನಲ್ಲಿ ಕಾದುಕೊಂಡಿದ್ದು ಪಂಚಾಶತ್ತಮ ದಿನದಂದು ಮೇಲಿನಿಂದ ಪವಿತ್ರಾತ್ಮನ ಮೂಲಕ ವರ ಪಡಕೊಳ್ಳಲು ಸೂಚಿಸಲಾಗಿತ್ತು. ಈ ಕಾಯುವ ಸಮಯದಲ್ಲಿ ಅವರು ಆತ್ಮನಶಕ್ತಿ ಪಡಕೊಳ್ಳುವ ಮುಂಚೆಯೇ ಅವರು ಚೀಟು ಹಾಕಿ ತಪ್ಪಾದ ರೀತಿಯಲ್ಲಿ ಮತ್ತೀಯನನ್ನು ಯೂದನ ಸ್ಥಾನದಲ್ಲಿ ಆಯ್ಕೆಮಾಡಿದರು. ಕರ್ತನು ತನ್ನ ವ್ಯವಸ್ಥೆಯಲ್ಲಿ ಅನಗತ್ಯವಾಗಿ ಅವರು ಕೈಹಾಕಿದ್ದನ್ನು ಆಕ್ಷೇಪಿಸಲಿಲ್ಲವಾದರೂ ಅವರ ಆಯ್ಕೆಯನ್ನು ಉಪೇಕ್ಷೆಮಾಡಿದನು ಮತ್ತು ತನ್ನ ಸ್ವಂತ ಸಮಯದಲ್ಲಿ ಪೌಲನನ್ನು ಅಪೋಸ್ತಲನನ್ನಾಗಿ ಮುಂದೆ ತಂದು "ಈತನು ನಾನು ಆಯ್ದುಕೊಂಡ ಪಾತ್ರೆ" ಎಂದು ಘೋಷಿಸಿದನು. ಈ ಅಪೋಸ್ತಲನು "ತಾನು ತಾಯಿಯ ಗರ್ಭದಲ್ಲಿದ್ದಾಗಲೇ ತನ್ನನು ಪ್ರತ್ಯೇಕಿಸಿ ದೇವರು ತನ್ನನ್ನು ಕರೆದನು" (ಗಲಾತ್ಯ 1 :15 ನೋಡಿರಿ) ಎಂತಲೂ, "ಅತಿ ಶ್ರೇಷ್ಟರಾದ ಅಪೊಸ್ತಲರು ಅನ್ನಿಸಿಕೊಳ್ಳುವವರಿಗಿಂತ ತಾನು ಒಂದರಲ್ಲಾದರೂ ಕಡಿಮೆಯಾದವನಲ್ಲ " (2 ಕೊರಿ. 11:5) ಎಂದು ಹೇಳಿದ್ದಾನೆ.

ಇದರಿಂದ ನಾವು ಪೋಪ್ ಅಧೀನ ಕೆಥೊಲಿಕ್, ಬಿಷೋಪ್ ಅಧೀನ ಪ್ರೊಟೆಸ್ಟಂಟ್, ಕೆಥೋಲಿಕ್ ಅಪೊಸ್ತೋಲಿಕ್ ಮುಂತಾದ ಸಭೆಗಳು ಅಥವಾ ಮಾರ್ಮನ್‌ರವರು ಹೇಳುವಂತೆ ಅಪೋಸ್ತಲರ ಸಂಖ್ಯೆ ಹನ್ನೆರಡಕ್ಕೆ ಸೀಮಿತವಾಗಿರದೆ ಆ ಕಾಲದಿಂದಲೂ ಅದೇ ಅಧಿಕಾರದೊಡನೆ ಮಾತನಾಡಿದ ಮತ್ತು ಬರೆದ ಅವರ ಉತ್ತರಾಧಿಕಾರಿಗಳಿದ್ದಾರೆ ಎಂಬ ವಾದವನ್ನು ಸಮಗ್ರವಾಗಿ ಒಪ್ಪಿಕೊಳ್ಳುವುದಿಲ್ಲ. ನಾವು ಇದನ್ನು ಅಲ್ಲಗಳೆಯುತ್ತೇವೆ. ಕರ್ತನು ಹನ್ನೆರಡರ ಸಂಖ್ಯೆಯ ಪ್ರಾಮುಖ್ಯತೆಯನ್ನು ನೆನಪಿಸಿಕೊಂಡು ಯಾವ ರೀತಿ ಪವಿತ್ರವಾದ ಅಯ್ಕೆಯಾಗಿ ನಿರ್ದಿಷ್ಟವಾಗಿ ಆ ಹನ್ನೆರಡು ಮಂದಿಯನ್ನು ಆರಿಸಿಕೊಂಡನು ಎಂಬುದು ಇದಕ್ಕೆ ಸಾಕ್ಷಿಯಾಗಿದೆ. ಮಹಿಮೆಯುಳ್ಳ ಪ್ರಕಟನೆ 21 ರಲ್ಲಿ ಕೊಟ್ಟಿರುವ ಸಭೆಯ ಸಾಂಕೇತಿಕ ಚಿತ್ರಣವನ್ನು ಇದರ ಪರಮಾವಧಿ ಎಂದು ನಾವು ಭಾವಿಸುತ್ತೇವೆ. ಅಲ್ಲಿ ಸಹಸ್ರವರ್ಷ ಯುಗದ (ಮಿಲಿನಿಯಂ) ಸಂಕೇತವಾಗಿರುವ ನೂತನ ಯೆರೂಸಲೇಮ್ ಎಂಬ ಸಭೆಯಾದ ವಧುವು ತನ್ನ ಮದಲಿಂಗನಾದ ಕರ್ತನೊಂದಿಗೆ ಒಂದಾಗುವುದನ್ನು ಸ್ಪಷ್ಟವಾಗಿ ವರ್ಣಿಸಲಾಗಿದೆ. ಈ ಹೇಳಿಕೆಯಲ್ಲಿ ನಗರದ ಹನ್ನೆರಡು ಅಸ್ತಿವಾರಗಳು ಅಮೂಲ್ಯವಾದವುಗಳು ಮತ್ತು ಈ ಹನ್ನೆರಡು ಅಸ್ತಿವಾರಗಳಲ್ಲಿ ಯಜ್ಞದ ಕುರಿಯಾದಾತನ ಹನ್ನೆರಡು ಅಪೋಸ್ತಲರ ಹೆಸರುಗಳು ಕೆತ್ತಲ್ಪಟ್ಟಿವೆ (ವಚನ 14) ಎಂದು ಬರೆದದೆ. ಇದಕ್ಕಿಂತ ಹೆಚ್ಚೂ ಇಲ್ಲ ಕಡಿಮೆಯೂ ಇಲ್ಲ. ಕುರಿಮರಿಯ ಈ ಅಪೋಸ್ತಲರು ಹನ್ನೆರಡು ಮಂದಿಗಿಂತ ಹೆಚ್ಚಾಗಿ ಇರಲಿಲ್ಲವೆಂಬುದಕ್ಕೆ ಇದಕ್ಕಿಂತ ಉತ್ತಮ ರುಜುವಾತು ಬೇಕೆ? ಅಪೋಸ್ತಲನಾದ ಪೌಲನು ಹೇಳುವಂತೆ ಇದಕ್ಕಿಂತ ಹೆಚ್ಚಿನವರು ಸುಳ್ಳು ಅಪೋಸ್ತಲರಾಗಿದ್ದಾರೆ. (2 ಕೊರಿ. 11:13)

ಇದಕ್ಕಿಂತ ಹೆಚ್ಚಿನ ಅಪೋಸ್ತಲರ ಅಗತ್ಯತೆಯನ್ನೂ ನಾವು ಊಹಿಸಿಕೊಳ್ಳುವಂತಿಲ್ಲ; ಆ ಹನ್ನೆರಡು ಮಂದಿಯೂ ಅವರ ಸಾಕ್ಷಿ ಮತ್ತು ಅವರ ದುಡಿಮೆಯ ಫಲದ ರೂಪದಲ್ಲಿ, ಅವರ ಸೇವಾ ಸಮಯದಲ್ಲಿ ಅವರೊಡನೆ ಇದ್ದವರಿಗಿಂತ ಹೆಚ್ಚಿನ ಅನುಕೂಲ ಸ್ಥಿತಿಯಲ್ಲಿ ನಮ್ಮೊಡನೆ ಇನ್ನೂ ಇದ್ದಾರೆ. ಅವರ ಸೇವೆಯ ದಾಖಲೆಗಳೂ, ಅವರು ದಾಖಲಿಸಿದ ಕರ್ತನ ಮಾತುಗಳೂ, ಅದ್ಭುತ ಕೃತ್ಯಗಳೂ ಇಂದಿಗೂ ನಮ್ಮೊಂದಿಗಿವೆ. ಕ್ರೈಸ್ತ ಸಿದ್ಧಾಂತಗಳ ಬಗ್ಗೆ ಪತ್ರಿಕೆಗಳಲ್ಲಿರುವ ಅವರ ವ್ಯಾಖ್ಯಾನಗಳು ತೃಪ್ತಿಕರವಾದ ರೀತಿಯಲ್ಲಿ ಇಂದು ನಮ್ಮ ಕೈಗಳಲ್ಲಿವೆ. ಅಪೋಸ್ತಲನು ವಿವರಿಸುವಂತೆ "ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವನ್ನೆಲ್ಲಾ ನಿಮಗೆ ತಿಳಿಸಿದೆನು. ಇದಕ್ಕಿಂತ ಇನ್ನೇನು ಬೇಕು. (2 ತಿಮೋಥೆ 3:17 ಮತ್ತು ಅ.ಕೃ 20 :27).

ತನ್ನ ನಾಲ್ವತ್ತು ದಿನಗಳ ಉಪವಾಸ ಧ್ಯಾನ ಮತ್ತು ಅಡವಿಯಲ್ಲಿ ಸೈತಾನನಿಂದ ಶೋಧನೆಗಳಿಗೊಳಗಾದ ತಕ್ಷಣವೇ ನಮ್ಮ ಕರ್ತನು ತನ್ನ ಯೋಗ್ಯವಾದ ಮಾರ್ಗವನ್ನು ನಿರ್ಧರಿಸಿದ ಕೂಡಲೇ, ಬರಲಿರುವ ದೇವರ ರಾಜ್ಯದ ಕುರಿತಾದ ಸುವಾರ್ತೆಯನ್ನು ಸಾರುತ್ತಾ ತನ್ನ ಹಿಂಬಾಲಕರನ್ನು ಆಹ್ವಾನಿಸಿದನು ಮತ್ತು ಅವರನ್ನು ಶಿಷ್ಯರೆಂದು ಕರೆಯಲಾಯಿತು. ಈ ಶಿಷ್ಯರುಗಳಲ್ಲಿ ಆತನು ಹನ್ನೆರಡು ಮಂದಿಯನ್ನು ಅಪೋಸ್ತಲರನ್ನಾಗಿ ಅಂತಿಮವಾಗಿ ಆಯ್ಕೆಮಾಡಿ ಕೊಂಡನು (ಲೂಕ6:13–16).ಅವರೆಲ್ಲರೂ ದೀನರೆಂದು ಕರೆಯಬಹುದಾದ ಹಿನ್ನಲೆಯಿಂದ ಬಂದವರು, ಹೆಚ್ಚಿನವರು ಬೆಸ್ತರು. ಅವರುಗಳು

ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ಅಧಿಕಾರಿಗಳೇ ಹೇಳಿದ್ದಾರೆ (ಅ.ಕೃ.4:13). ಸಹಜವಾಗಿ ಕರ್ತನ ಉದ್ದೇಶಗಳನ್ನು ಪರಿಗ್ರಹಿಸಿ ತಮ್ಮ ದಿನನಿತ್ಯದ ವೃತ್ತಿಯನ್ನು ಬಿಟ್ಟುಬಿಡದೆ ಆತನನ್ನು ಒಪ್ಪಿಕೊಂಡ ಸಾಮಾನ್ಯ ಶಿಷ್ಯರುಗಳೆಂದು ಕರೆಯಲ್ಪಟ್ಟ ಈ ಹನ್ನೆರಡು ಮಂದಿಯನ್ನು ಕರ್ತನ ಸುವಾರ್ತಾ ಸೇವೆಯಲ್ಲಿ ಆತನ ಸಹವರ್ತಿಗಳಾಗುವಂತೆ ಆಮಂತ್ರಿಸಲಾಯಿತು ಮತ್ತು ದಾಖಲೆಗಳ ಪ್ರಕಾರ ಅವರು ಎಲ್ಲವನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದರು.(ಮತ್ತಾಯ 4:18–22, ಮಾರ್ಕ 1;16–20, 3:13–19 ಮತ್ತು ಲೂಕ 5:9–11). ನಂತರದಲ್ಲಿ ನಿಯೋಜಿಸಲ್ಪಟ್ಟ ಎಪ್ಪತ್ತು ಮಂದಿಯನ್ನು ಅಪೋಸ್ತಲರೆಂದು ಮಾನ್ಯಮಾಡಲಿಲ್ಲ. ಲೂಕನು ಹನ್ನೆರಡು ಮಂದಿಯನ್ನು ಆಯ್ಕೆಮಾಡಿದ ಬಗ್ಗೆ ನಿರ್ಧಿಷ್ಟವಾದ ವಿವರಗಳನ್ನು ನೀಡುತ್ತಾ (6:12–16) ಈ ಘಟನೆಗೆ ಮುನ್ನ ಕರ್ತನು ಪ್ರಾರ್ಥನೆಮಾಡುವುದಕ್ಕಾಗಿ ಬೆಟ್ಟಕ್ಕೆ ಹೋಗಿ ರಾತ್ರಿಯೆಲ್ಲಾ ಪ್ರಾರ್ಥನೆಯಲ್ಲಿ ಕಳೆದನು (6:12) ಎಂದು ತಿಳಿಸುವವನಾಗಿದ್ದಾನೆ. ಇದು ಆತನು ತಂದೆಯೊಡನೆ ತನ್ನ ಮತ್ತು ತನ್ನ ಸಹ ಕೆಲಸಗಾರರ ಕೆಲಸದ ಬಗ್ಗೆ ಮಾಡಿದ ಸಮಾಲೋಚನೆಯಾಗಿತ್ತು. ಆತನು ತನ್ನ ಶಿಷ್ಯರನ್ನು ಕರೆದ ದಿನದ ಹಿಂದಿನ ರಾತ್ರಿಯನ್ನೆಲ್ಲಾ ಆತನು ಪ್ರಾರ್ಥನೆಯಲ್ಲಿ ಕಳೆದನು. ಬೆಳಗಾದಾಗ ಆತನು ತನ್ನ ಶಿಷ್ಯರನ್ನು (ಗ್ರೀಕ್ ಬಾಷೆಯಲ್ಲಿ– Mathetes ಕಲಿಯುವವರು, ವಿದ್ಯಾರ್ಥಿಗಳು) ಕರೆದನು. ಅವರಲ್ಲಿ ಹನ್ನೆರಡು ಮಂದಿಯನ್ನು ಅಪೋಸ್ತಲರನ್ನಾಗಿ (ಅಪೋಸ್ತಲರು=Apostolos, ಕಳುಹಿಸಲ್ಪಟ್ಟವರು) ಆಯ್ಕೆಮಾಡಿದನು. ಈ ರೀತಿಯಲ್ಲಿ ಈ ಹನ್ನೆರಡು ಮಂದಿ ಉಳಿದ ಶಿಷ್ಯರುಗಳಿಗಿಂತ ವಿಭಿನ್ನವಾದವರು. (ಲೂಕ 6:12, 13, 17 ನೋಡಿರಿ).

ಅಪೋಸ್ತಲತನಕ್ಕೆ ಆಯ್ಕೆಯಾಗದೆ ಉಳಿದ ಶಿಷ್ಯರುಗಳು ಸಹಾ ಕರ್ತನಿಗೆ ಅಷ್ಟೇ ಪ್ರಿಯರಾಗಿದ್ದರು ಮತ್ತು ಅವರು ಈ ಹನ್ನೆರಡು ಮಂದಿಯನ್ನು ಅಪೋಸ್ತಲರನ್ನಾಗಿ ಆಯ್ಕೆಮಾಡಿದ ಬಗ್ಗೆ ನಿಸ್ಸಂದೇಹವಾಗಿ ಸಂಪೂರ್ಣವಾದ ಹೃದಯವಂತಿಕೆ ಯುಳ್ಳವರಾಗಿದ್ದು ಇದು ಕಾರ್ಯದ ಸಾಮಾನ್ಯವಾದ ಹಿತದೃಷ್ಟಿಯಲ್ಲಿ ಅಗತ್ಯವೆಂದು ಗ್ರಹಿಸಿದ್ದರು. ಯಾವ ನೆಲೆಯ ಮೇಲೆ ಕರ್ತನು ಈ ಆಯ್ಕೆಯನ್ನು ಮಾಡಿದನೆಂದು ತಿಳಿಸಲ್ಪಟ್ಟಿಲ್ಲವಾದರೂ ಈ ಸಂದರ್ಭ ಆತನು ಮಾಡಿದ “ಅವರು ನಿನ್ನವರಾಗಿದ್ದರು, ನೀನು ಅವರನ್ನು ನನಗೆ ಕೊಟ್ಟಿದ್ದೀ” (ಯೋಹಾನ 17:6) ಎಂತಲೂ “ನಾನು ಇವರ ಸಂಗಡ ಇದ್ದಾಗ ನೀನು ನನಗೆ ಕೊಟ್ಟಿರುವ ಹೆಸರಿನಲ್ಲಿ ಇವರನ್ನು ಕಾಯುತ್ತಾ ಬಂದೆನು. ಇವರನ್ನು ಕಾಪಾಡಿದೆನು; ಶಾಸ್ತ್ರದ ಮಾತು ನೆರವೇರುವಂತೆ ನಾಶಕ್ಕೆ ಗುರಿಯಾದ ಆ ಮನುಷ್ಯ (ಅಂದರೆ ಯೂದ)ನೇ ಹೊರತು ಇವರಲ್ಲಿ ಮತ್ತಾರೂ ನಾಶವಾಗಲಿಲ್ಲ” (ವಚನ 12) ಎಂಬ ಪ್ರಾರ್ಥನೆಯ ದಾಖಲೆಯಿದೆ. ಯಾವ ಅರ್ಥದಲ್ಲಿ ಅಥವಾ ಯಾವ ಶ್ರೇಣಿಯಲ್ಲಿ ಕರ್ತನು ಈ ಹನ್ನೆರಡು ಮಂದಿಯನ್ನು ಆರಿಸಿದನು ಎಂಬುದು ನಮಗೆ ಅವಶ್ಯವಿಲ್ಲ, ಅವರಲ್ಲಿದ್ದ ಒಂದು ಅರ್ಹತೆ ದೀನತೆ ಎಂಬುದರಲ್ಲಿ ಸಂಶಯವಿಲ್ಲ. ನಿಸ್ಸಂದೇಹವಾಗಿ ಅವರ ಕೆಳ ದರ್ಜೆಯ ಕಸುಬುಗಳು ಮತ್ತು ಜೀವನದಲ್ಲಿನ ಹಿಂದಿನ ಅನುಭವಗಳು ಅವರನ್ನು ದೀನರನ್ನಾಗಿ ಮಾಡಿದ್ದಲ್ಲದೆ ಅವರ ಗುಣ ನಡತೆಗಳನ್ನು, ನಿರ್ಧಾರಗಳನ್ನು, ಸತತ ಸಾಧನೆ ಮುಂತಾದವುಗಳನ್ನು ಬಲಪಡಿಸಿಕೊಳ್ಳಲು ಅವರನ್ನು ಹೆಚ್ಚಾಗಿ ನಡೆಸಿದವು. ಇತರ ಉದ್ಯೋಗಗಳು ಈ ಮಟ್ಟಿಗೆ ಮಾಡಲು ಸಾಧ್ಯವಾಗುತ್ತಿದ್ದಿಲ್ಲ. ಈ ಹನ್ನೆರಡು ಮಂದಿಯ ಆಯ್ಕೆಗೆ ಪಂಚಾಶತ್ತಮ ದಿನ (ಸಭೆಯು ಹೊಸದಾಗಿ ಹುಟ್ಟಿದ ದಿನ) ದವರೆಗೆ ಕಾಯದೆ ಮೊದಲೇ ಆಯಿತೆಂದು ನಮಗೆ ತಿಳಿಸಲಾಗಿದೆ. ಇದು ಹೆಚ್ಚಾಗಿ ಅವರು ಕರ್ತನ ಸಂಗಡಲೇ ಇದ್ದು ಆತನ ಕಾರ್ಯಗಳನ್ನು ಗಮನಿಸುವಂತೆ, ಆತನ ಸಂದೇಶಗಳನ್ನು ಖುದ್ದಾಗಿ ಕೇಳಿಸಿಕೊಳ್ಳುವಂತೆ ಮತ್ತು ಇದರ ಮೂಲಕವಾಗಿ ಅವರು ಸೂಕ್ತ ಸಮಯದಲ್ಲಿ ನಮಗೆ ಮತ್ತು ಎಲ್ಲಾ ದೇವ ಜನರಿಗೆ ಕ್ರಿಸ್ತೇಸುವಿನಲ್ಲಿ ಪ್ರಕಟವಾದ ದೇವರ ಅದ್ಭುತ ಕಾರ್ಯಗಳನ್ನು ಮತ್ತು ಜೀವಕರ ವಾಕ್ಯಗಳನ್ನು ನೇರವಾಗಿ ಹೇಳಲು ಸಾಧ್ಯವಾಯಿತು. (ಲೂಕ 24:44–48 ; ಅ.ಕೃ. 10:39–42).

## ಅಪೋಸ್ತೋಲಿಕ (ಧರ್ಮಸಂಬಂಧವಾದ) ನಿಯೋಗ

## The Apostolic Commission

ಅಪೋಸ್ತಲರಿಗಾಗಲೀ, ಅಥವಾ ಅವರಿಗೆ ಸಂಬಂಧಿಸಿದಂತೆ ಯಾರೇ ಆಗಲೀ ಅವರು ಸಭೆಗಳ ಮೇಲೆ ದೊರೆತನ ಮಾಡುವಂತೆಯಾಗಲೀ ತಮ್ಮನ್ನು ತಾವು ಇತರೆ ವಿಶ್ವಾಸಿಗಳಿಗಿಂತ ವಿಭಿನ್ನರಾದವರೆಂತಲೂ, ದೈವನಿಯಮದಿಂದ ರಿಯಾಯಿತಿ ಹೊಂದಿದವರೆಂತಲೂ ಅಥವಾ ವಿಶೇಷ ಕೃಪೆಗೆ ಪಾತ್ರರಾದವರೆಂತಲೂ ಅಥವಾ ನಿರಂತರ ಭಾದ್ಯತೆಯನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವರೆಂತಲೂ ಎಲ್ಲೂ ಒಂದು ಕಿಂಚಿತ್ತೂ ಹೇಳಿಲ್ಲ. "ಎಲ್ಲರೂ ಸಹೋದರರು ಅವರಿಗೆ ಒಡೆಯನು ಒಬ್ಬನೇ, ಆತನು ಕ್ರಿಸ್ತನು ಎಂಬುದನ್ನು ಮತ್ತು ತಮ್ಮ ಕರೆ ಹಾಗೂ ಆಯ್ಕೆಯನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವೆಂಬುದನ್ನು ಅವರು ಸದಾ ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ಅವರು ಪ್ರೀತಿಯ ನಿಯಮಕ್ಕೆ ವಿಧೇಯರಾಗಿದ್ದು, ಚಿಕ್ಕಮಕ್ಕಳಂತೆ ವಿನಮ್ರವಾಗಿರದ ಹೊರತು ಅವರು ಬೇರಾವ ರೀತಿಯಿಂದಲೂ "ದೇವರ ರಾಜ್ಯ"ವನ್ನು ಪ್ರವೇಶಿಸಲಾರರು. ಅವರಿಗೆ ಯಾವುದೇ ಅಧಿಕಾರಯುಕ್ತವಾದ ಬಿರುದುಗಳನ್ನಾಗಾಲೀ, ಪೋಷಾಕುಗಳ ಮತ್ತು ನಡವಳಿಕೆಗಳ ಬಗ್ಗೆ ಯಾವುದೇ ಸೂಚನೆಗಳನ್ನಾಗಲೀ ನೀಡಲಾಗಿಲ್ಲ. ಆದರೆ ಈ ಎಲ್ಲಾ ವಿಷಯಗಳಲ್ಲಿ ಅವರು ಹಿಂಡಿಗೆ ಉತ್ತಮ ಉದಾಹರಣೆಗಳಾಗಿರತಕ್ಕದ್ದು. ಅವರ ಒಳ್ಳೇ ಕ್ರಿಯೆಗಳನ್ನು ಕಂಡು ಇತರರು ತಂದೆಗೆ ಮಹಿಮೆಯನ್ನು ತರುವಂತಾಗಬೇಕು ಮತ್ತು ಅವರ ಹೆಜ್ಜೆಜಾಡಿನಲ್ಲಿ ನಡೆಯುವ ಇತರರು ತಮ್ಮ ನಾಯಕನ ಹೆಜ್ಜೆಜಾಡಿನಲ್ಲಿ ನಡೆಯುವಂತಾಗಬೇಕು. ಅಂತಿಮವಾಗಿ ಅದೇ ಮಹಿಮೆ, ಗೌರವ ಮತ್ತು ನಿರ್ಲಯತ್ವವನ್ನು ಪಡಕೊಂಡವರಾಗಿ ಅದೇ ದೈವ ಸ್ವಭಾವದ ಪಾಲುದಾರರೂ, ನೂತನ ಸೃಷ್ಟಿಯ ಸದಸ್ಯರೂ ಆಗಬೇಕು.

ಅವರ ನಿಯೋಗವು "ಸೇವೆ'ಯಾಗಿದ್ದು ಅವರು ಒಬ್ಬರಿಗೊಬ್ಬರು ಸೇವೆ ಮಾಡತಕ್ಕದ್ದು, ಕರ್ತನ ಸೇವೆ ಮಾಡತಕ್ಕದ್ದು ಮತ್ತು ತಮ್ಮ ಜೀವವನ್ನೇ ಸೇವೆಯಲ್ಲಿ ಮುಡುಪಾಗಿಡತಕ್ಕದ್ದು. ಈ ಸೇವೆಯು ವಿಶೇಷವಾಗಿ ಸುವಾರ್ತೆಯನ್ನು ಪ್ರಕಟಿಸುವಲ್ಲಿ ಕಂಡುಬರತಕ್ಕದ್ದು. ಅಭಿಷೇಕದ

ಪೂರ್ವದಲ್ಲಿಯೇ ಅವರು ಅದರ ಪಾಲುದಾರರಾಗಿದ್ದು ಈಗಾಗಲೇ ಅದು ಕರ್ತನ ಮೇಲೆ ಬಂದಿದೆ. ಇದೇ ಅಭಿಷೇಕವು ಈಗ ಎಲ್ಲಾ ನೂತನ ಸೃಷ್ಟಿಗೂ, ಎಲ್ಲಾ ರಾಜವಂಶ ಯಾಜಕತ್ವದವರಿಗೂ ಅನ್ವಯಿಸುವುದಾಗಿದೆ. ಇದನ್ನು ಪ್ರವಾದಿಯು ಹೀಗೆ ವಿವರಿಸಿದ್ದಾನೆ– " ಕರ್ತನಾದ ದೇವರ ಆತ್ಮವು ನನ್ನ ಮೇಲೆ ಅದೆ. ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ... ಮನ ಮುರಿದವರನ್ನು ಕಟ್ಟಿ ವಾಸಿ ಮಾಡುವುದಕ್ಕೂ ಅಭಿಷೇಕಿಸಿದನು..." (ಯೆಶಾಯ 61: 1–2 ಲೂಕ 4:17–21, ಮತ್ತಾಯ 10:5–8, ಮಾರ್ಕ 3: 14,15 ಮತ್ತು ಲೂಕ 10:1–17).

ಈ ಅಭಿಷೇಕವು ಅವರ ಮೇಲೆ ನೇರವಾಗಿ ಪಂಚಾಶತ್ತಮ ದಿನದವರೆಗೆ ಬರಲಿಲ್ಲವಾದರೂ ಅವರು ಈ ಹಿಂದೆ ಅದರ ರುಚಿನೋಡಿದ್ದರು. ಕರ್ತನು ಅವರನ್ನು ಸುವಾರ್ತಾ ಸಂದೇಶ ಸಾರಲು ಕಳುಹಿಸಿದಾಗ ಅವರಿಗೆ ಪವಿತ್ರಾತ್ಮ ಶಕ್ತಿಯ ಪಾಲನ್ನು ಅನುಗ್ರಹಿಸಿದ್ದನು. ಆದರೆ ನಮ್ಮ ಕರ್ತನು ನಂತರದಲ್ಲಿ ಬೇರೆ ಎಪ್ಪತ್ತು ಮಂದಿಯನ್ನು ಅದೇ ಕಾರ್ಯಕ್ಕಾಗಿ ಕಳುಹಿಸಿಕೊಟ್ಟಾಗ ಇದರಲ್ಲಿ ಸಹಾ ಹೆಮ್ಮೆಪಡುವ ವಿಶೇಷ ಅವಕಾಶವನ್ನು ತೆಗೆದು ಹಾಕಲಾಗಿತ್ತು. ಯಾಕೆಂದರೆ, ಅವರಿಗೆ ಸಹಾ ತನ್ನ ಹೆಸರಿನಲ್ಲಿ ಮಹತ್ಕಾರ್ಯಗಳನ್ನು ಮಾಡುವ ಶಕ್ತಿಯನ್ನು ದಯಪಾಲಿಸಿದ್ದನು. ಅಪೋಸ್ತಲರು ಪಂಚಾಶತ್ತಮ ದಿನದಲ್ಲಿ ಪವಿತ್ರಾತ್ಮವನ್ನು ಹೊಂದಿಕೊಳ್ಳುವವರೆಗೆ ಅವರ ನಿಜವಾದ ಕಾರ್ಯವು ವಾಕ್ಯದ ಸರಿಯಾದ ಭಾವನೆಯಲ್ಲಿ ಆರಂಭಗೊಂಡಿರಲಿಲ್ಲ. ಆದುದರಿಂದ, ಪವಿತ್ರಾತ್ಮ ಮತ್ತು ಆತನ ವರಗಳು ಅವರಿಗೆ ಅನುಗ್ರಹಿಸಲ್ಪಟ್ಟದ್ದು ಮಾತ್ರವಲ್ಲ ಈ ಶಕ್ತಿಯನ್ನು ಇತರರಿಗೂ ದಯಪಾಲಿಸುವ ದೈವ ಶಕ್ತಿಯ ಒಂದು ವಿಶೇಷ ಪ್ರಕಟನೆಯುಂಟಾಯಿತು. ಈಗ ಹೇಳಿದ ಶಕ್ತಿಯಿಂದ ಸಭೆಯ ಇತರರಿಂದ ಇನ್ನು ಮುಂದೆ ಅವರು ಪ್ರತ್ಯೇಕವಾದರು. ಇತರ ವಿಶ್ವಾಸಿಗಳು ಕ್ರಿಸ್ತನ ಅಭಿಷಕ್ತ ದೇಹದ ಸದಸ್ಯರುಗಳಾಗಿ ಎಣಿಸಲ್ಪಟ್ಟಿದ್ದಾರೆ, ಆತನ ಆತ್ಮನ ಪಾಲುಗಾರರಾಗಿ ಮಾಡಲ್ಪಟ್ಟಿದ್ದಾರೆ ಮತ್ತು ಆ ಆತ್ಮನ ನೂತನ ಸೃಷ್ಟಿಗಳಾಗಿ ಉತ್ಪನ್ನಗೊಂಡಿರುತ್ತಾರೆ. ಆದರೆ ಯಾರಿಗೂ ಈ ಅಪೋಸ್ತಲರುಗಳಿಂದ ಅನುಗ್ರಹಿಸಲ್ಪಡದ ಹೊರತು ಯಾವುದೇ ವಿಶೇಷವಾದ ವರವಾಗಲೀ ಅಥವಾ ಪ್ರಕಟನೆಯಾಗಲೀ ಆಗುತ್ತಿರಲಿಲ್ಲ. ಅದ್ಭುತ ಕಾರ್ಯಗಳ, ವಾಣಿಗಳನ್ನಾಡುವ, ವಾಣಿಗಳ ಅರ್ಥ ವಿವರಿಸುವ ಮುಂತಾದ ವರಗಳು ಯಾವುದೇ ಅರ್ಥದಲ್ಲಿ ಪವಿತ್ರಾತ್ಮನ ಫಲಗಳಿಗೆ ಆತಂಕವನ್ನು ಉಂಟುಮಾಡುವುದಿಲ್ಲ ಅಥವಾ ಅದರ ಸ್ಥಾನವನ್ನು ಆಕ್ರಮಿಸಿಕೊಳ್ಳುವುದಿಲ್ಲವೆಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇವುಗಳು ಪ್ರತಿ ನಂಬಿಗಸ್ತನು ದೇವರ ಬೋಧನೆಗಳಲ್ಲಿ ತೋರುವ ವಿಧೇಯತೆಯ ಮೂಲಕ ಅಭಿವೃದ್ಧಿ ಹೊಂದಬೇಕಾಗುತ್ತದೆ. ಹೀಗೆ ಪ್ರತಿಯೊಬ್ಬರೂ ಕೃಪೆ, ಜ್ಞಾನ ಮತ್ತು ಪ್ರೀತಿಯಲ್ಲಿ ಬೆಳೆಯುವಂತೆ ಮನುಷ್ಯರು ಹೊಂದಿಕೊಳ್ಳಬಹುದಾದ ಈ ದೇವರಾತ್ಮ ವರದಾನಗಳು ನಾದಕೊಡುವ ಕಂಚು ಗಣಗಣಿಸುವ ತಾಳದಂತೆ ಅಪೋಸ್ತಲರನ್ನು ಗುರುತಿಸುತ್ತದಲ್ಲದೆ ಸಭೆಯ ಸ್ಥಾಪನೆ ಕೆಲಸದಲ್ಲಿ ಕರ್ತನ ವಿಶೇಷ ಸೇವಕರು ಅಥವಾ ಪ್ರತಿನಿಧಿಗಳಾಗುತ್ತಾರೆ. (1 ಕೊರಿ. 12:7–10 ಮತ್ತು 13:1–3 ನೋಡಿರಿ).

ನಮ್ಮ ಕರ್ತನು ಈ ಅಪೋಸ್ತಲರುಗಳನ್ನು ಅಯ್ಕೆಮಾಡುವಾಗ ಮತ್ತು ಅವರಿಗೆ ಸೂಕ್ತ ಸೂಚನೆಗಳನ್ನು ನೀಡುವಾಗ ತನ್ನ ಎಲ್ಲಾ ಯುಗದ ಸಮಾಪ್ತಿವರೆಗಿನ ತನ್ನೆಲ್ಲಾ ಅನುಯಾಯಿಗಳನ್ನು ತನ್ನ ದೃಷ್ಟಿಪಥದಲ್ಲಿ ಇರಿಸಿಕೊಂಡಿದ್ದನು. ಆತನ ಸೇವಾಕಾರ್ಯದ ಅಂತ್ಯದಲ್ಲಿ ಆತನು ಮಾಡಿದ ಪ್ರಾರ್ಥನೆಯಿಂದ ಇದು ವೇದ್ಯವಾಗುತ್ತದೆ. ಇದರಲ್ಲಿ ಆತನು ತನ್ನ ಶಿಷ್ಯರನ್ನು ಸೂಚಿಸುತ್ತಾ "ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ (ಅಪೋಸ್ತಲರಿಗೆ) ನಿನ್ನ ಹೆಸರನ್ನು ತಿಳಿಯಪಡಿಸಿದೆನು. ಇವರು ನಿನ್ನವರಾಗಿದ್ದರು. ನೀನು ಇವರನ್ನು ನನಗೆ ಕೊಟ್ಟೆ; ಮತ್ತು ಇವರು ನಿನ್ನ ವಾಕ್ಯವನ್ನು ಕೈಕೊಂಡು ನಡೆದಿದ್ದಾರೆ. ನೀನು ನನಗೆ ಕೊಟ್ಟಿದ್ದೆಲ್ಲಾ ನಿನ್ನಿಂದಲೇ ಬಂದದೆ ಎಂದು ಈಗ ಇವರು ತಿಳಿದುಕೊಂಡಿದ್ದಾರೆ. ಹೇಗೆಂದರೆ ನೀನು ನನಗೆ ಕೊಟ್ಟ ಮಾತುಗಳನ್ನು ನಾನು ಇವರಿಗೆ ಕೊಟ್ಟಿದ್ದೇನೆ; ಇವರು ಆ ಮಾತುಗಳನ್ನು (ಸಿದ್ಧಾಂತಗಳನ್ನು) ಕೈಕೊಂಡು ನನ್ನನ್ನು ನಿನ್ನ ಬಳಿಯಿಂದ ಹೊರಟು ಬಂದವನೆಂದು ನಿಜವಾಗಿ ತಿಳಿದು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವುದಾಗಿ ನಂಬಿದ್ದಾರೆ. ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ; ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ; ನಿನ್ನವರಾಗಿದ್ದಾರೆ... ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ (ಸಮಗ್ರ ಸುವಾರ್ತೆಯಿಂದ) ನನ್ನನ್ನು ನಂಬುವವರಿಗೋಸ್ಕರ ಸಹಾ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು (ಅಮೂಲ್ಯ ರಕ್ತದಿಂದ ವಿಮೋಚಿಸಲ್ಪಟ್ಟು ದೇವರ ಪ್ರೀತಿಪಾತ್ರವಾದ) ನಂಬುವುದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ (ಉದ್ದೇಶ ಮತ್ತು ಪ್ರೀತಿಯಲ್ಲಿ), ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ (ಅಪೋಸ್ತಲರ ಮತ್ತು ಸಮಗ್ರ ನೂತನ ಸೃಷ್ಟಿಯ ಅಯ್ಕೆಯ ಅಂತಿಮ ಉದ್ದೇಶವನ್ನು ತಿಳಿಸುವಂತೆ) ಕೇಳಿಕೊಳ್ಳುತ್ತೇನೆ (ಯೋಹಾನ 17:6–9, 20–21 ನೋಡಿರಿ) ಎಂದಿದ್ದಾನೆ.

ಅಪೊಸ್ತಲರುಗಳು ಅವಿದ್ಯಾವಂತರಾಗಿದ್ದರೂ ನಿಶ್ಚಯವಾಗಿ ಪ್ರಬಲವಾದ ಗುಣಲಕ್ಷಣಗಳನ್ನು ಹೊಂದಿದವರಾಗಿದ್ದರು. ಕರ್ತನ ಬೋಧನೆಯಿಂದಾಗಿ ದೊರೆತ "ಸ್ವಸ್ಥವಾದ ಮನಸ್ಸಿನ" ಚೈತನ್ಯದ ಮೂಲಕ ಹೆಚ್ಚಾದ ಅವರು ಈ ಲೋಕದ ಜ್ಞಾನ ಮತ್ತು ವಿದ್ಯೆಗಳಿಗಿಂತ ಹೆಚ್ಚಾದ ರೀತಿಯಲ್ಲಿ ಅದನ್ನು ಸರಿದೂಗಿಸಿಕೊಂಡರು. ಈ ಕಾರಣದಿಂದ ಈ ವ್ಯಕ್ತಿಗಳು ಆದಿಸಭೆಯವರಿಂದ ದೇವರ ಮಾರ್ಗದ ಮಾರ್ಗದರ್ಶಿಗಳಾಗಿಯೂ, ವಿಶೇಷವಾಗಿ ನಿಯೋಜಿಸಲ್ಪಟ್ಟ ಶಿಕ್ಷಕರಾಗಿಯೂ, ಕರ್ತನ ನಂತರದ ಸಭೆಯ ಸ್ಥಂಭಗಳಾಗಿಯೂ ಸಮವಾದ ರೀತಿಯಲ್ಲಿ ಮಾನ್ಯ ಮಾಡಲ್ಪಟ್ಟರು. ವಿವಿಧ ರೀತಿಯಲ್ಲಿ ದೇವರು ಅವರನ್ನು ಈ ಸ್ಥಾನಕ್ಕಾಗಿ ಸಿದ್ಧಪಡಿಸಿದನು :

ಅವರುಗಳು ನಿರಂತರವಾಗಿ ಆತನ ಸಂಗಡವಿದ್ದ ಕಾರಣ ಅವರು ಆತನ ಸೇವೆಯ ಎಲ್ಲಾ ಕಾರ್ಯಗಳಲ್ಲಿ ಅಂದರೆ ಆತನ ಬೋಧನೆಗಳು, ಆತನ ಅದ್ಭುತ ಕಾರ್ಯಗಳು, ಆತನ

ಪ್ರಾರ್ಥನೆಗಳು, ಆತನ ಅನುಕಂಪ, ಆತನ ಪವಿತ್ರತೆ, ಆತನ ಸ್ವಯಂ ತ್ಯಾಗ, ಮಾತ್ರವಲ್ಲದೆ ಆತನ ಮರಣ ಮತ್ತು ಪುನರುತ್ಥಾನ ಇವೆಲ್ಲವುಗಳಲ್ಲಿಯೂ ಸಾಕ್ಷಿಗಳಾಗಿದ್ದರು. ಆದಿ ಸಭೆಗೆ ಈ ಎಲ್ಲಾ ಪುರಾವೆಗಳ ಅಗತ್ಯತೆ ಮಾತ್ರವಲ್ಲ, ಆವರೆಗೆ ಕರೆಯಲ್ಪಟ್ಟು ನೂತನ ಸೃಷ್ಟಿಯ ಕರೆಯನ್ನು ಅಂಗೀಕರಿಸಿದವರೆಲ್ಲರ, ಹಾಗೂ ಆತನ ಆಶ್ರಯವನ್ನು ಅರಿಸಿ ಬಂದವರ, ಆತನ ಗುಣಲಕ್ಷಣಗಳಲ್ಲಿ ಕೇಂದ್ರೀಕೃತವಾಗಿರುವ ಆತನ ಮಹಿಮೆಯನ್ನು, ಆತನ ತ್ಯಾಗಮಯ ಸಾವನ್ನು, ಆತನ ಉನ್ನತ ಏರಿಕೆ ಮತ್ತು ದೇವರ ಯೋಜನೆಗಳಲ್ಲಿ ನಂಬಿಕೆಯುಳ್ಳವರ ಅಗತ್ಯತೆ ಇತ್ತು. ಇವುಗಳು ಅವರು ತಮ್ಮ ದೃಢ ನಂಬಿಕೆ ಮತ್ತು ಪ್ರಭಲ ಸಾಂತ್ವನ ಹೊಂದುವುದರ ಉದ್ದೇಶಕ್ಕಾಗಿ ಇತ್ತು.

ನಂತರದಲ್ಲಿ ಆತನ ಪ್ರಸನ್ನತೆಯನ್ನು ಮತ್ತು ಯೆಹೂದ್ಯರ ಕಾಲದ ಸುಗ್ಗಿಯನ್ನು ಪ್ರಕಟಿಸಲು ಎಪ್ಪತ್ತು ಮಂದಿ ಇತರ ಶಿಷ್ಯರುಗಳು ಕಳುಹಿಸಲ್ಪಟ್ಟರು. ಆದರೆ, ಇವರ ಕಾರ್ಯಗಳು ಆ ಹನ್ನೆರಡು ಮಂದಿಯ ಕಾರ್ಯಗಳಿಗಿಂತ ಬಹಳಷ್ಟು ಭಿನ್ನವಾಗಿದ್ದವು. ನಿಜವಾಗಿಯೂ ಎಲ್ಲಾ ರೀತಿಯಲ್ಲಿಯೂ ಸಮಗ್ರ ಸಭೆಯವರು ಅವರಲ್ಲಿ ಸಂಪೂರ್ಣ ಭರವಸೆಯಿಡುವಂತೆ ಕರ್ತನು ತನ್ನ ಅಪೋಸ್ತಲರನ್ನು ವಿಶೇಷ ರೀತಿಯಲ್ಲಿ ಪ್ರತ್ಯೇಕಗೊಳಿಸಿದ್ದನು. ಇವರುಗಳು ಮಾತ್ರವೇ ಆತನ ಮರಣದ ಜ್ಞಾಪಕಾರ್ಥವಾಗಿ ಸ್ಥಾಪಿಸಲ್ಪಟ್ಟ ಕಡೆಯ ಪಸ್ಕದ ಆಚರಣೆಯಲ್ಲಿ ಆತನೊಡನೆ ಇದ್ದವರು. ಆ ರಾತ್ರಿಯಲ್ಲಿ ಗೆತ್ಸೇಮನೆಯಲ್ಲಿ ಆತನೊಡನೆ ಇದ್ದವರು ಸಹಾ ಇವರೇ. ತನ್ನ ಪುನರುತ್ಥಾನದ ನಂತರ ಆತನು ತನ್ನನ್ನು ವಿಶೇಷವಾಗಿ ಇವರಿಗೆ ಪ್ರಕಟಪಡಿಸಿಕೊಂಡನು. ವಿಶೇಷವಾಗಿ ಇವರುಗಳು ಮಾತ್ರವೇ ಆ ಪಂಚಾಶತ್ತಮ ದಿನದಂದು ಪವಿತ್ರಾತ್ಮನ ಪರವಾಗಿ ಮಾತನಾಡುವವರಾಗಿ ಉಪಯೋಗಿಸಲ್ಪಟ್ಟರು. "ಗಲಿಲಾಯದವರೆಂದು" ಸಂಬೋಧಿಸಲ್ಪಟ್ಟವರು ಈ ಹನ್ನೊಂದು ಮಂದಿಯ ಮಾತುಗಳನ್ನು ಕೇಳಿದ ಕೆಲವರು "ಇವರು ಗಲಿಲಾಯದವರಲ್ಲವೇ?" ಎಂಬದಾಗಿ ಸಂಬೋಧಿಸಿದರು, (ಅ.ಕೃ. 2:7, ಲೂಕ 24 :48–51, ಮತ್ತಾಯ 28:16–19).

ದಾಖಲೆಗಳ ಪ್ರಕಾರ ನಮ್ಮ ಕರ್ತನು ತನ್ನ ಪುನರುತ್ಥಾನದ ನಂತರ ಸುಮಾರು ಐನೂರು ಮಂದಿಗೆ ತನ್ನನ್ನು ಪ್ರಕಟಿಸಿಕೊಂಡಿದ್ದಾಗ್ಯೂ, ಅಪೋಸ್ತಲರೊಡನೆ ಮಾತ್ರವೇ ವಿಶೇಷವಾದ ರೀತಿಯಲ್ಲಿ ವ್ಯವಹರಿಸಲಾಯಿತು. "ಆತನು ಯೆಹೂದ್ಯರ ಭೂಮಿಯಲ್ಲಿ ಹಾಗೂ ಯೆರೂಸಲೇಮಿನಲ್ಲಿ ನಡೆಸಿದ ಎಲ್ಲಾ ಕಾರ್ಯಗಳಿಗೆ ಇವರುಗಳು ಸಾಕ್ಷಿಗಳಾಗಿರಬೇಕೆಂಬುದೇ ಇದರ ಉದ್ದೇಶವಾಗಿತ್ತು. ಅಲ್ಲಿಯವರು ಆತನನ್ನು ಅವಮಾನ ಪಡಿಸಿ, ನೇಣು ಹಾಕಿ ಕೊಂದರೂ, ತಂದೆ ದೇವರು ಆತನನ್ನು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಜೀವಂತವಾಗಿ ಎಬ್ಬಿಸಿದನು ಆತನು ಅವರಿಗೆ ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರುವಂತೆ ಅಪ್ಪಣೆ ಕೊಟ್ಟನು" (ಅ.ಕೃ. 10:39–45, 13:31 ಮತ್ತು 1 ಕೊರಿ. : 15:3–8 ನೋಡಿರಿ).

ಅಪೋಸ್ತಲನಾದ ಪೌಲನು ಉಳಿದ ಹನ್ನೊಂದು ಮಂದಿ ಅಪೋಸ್ತಲರಂತೆ ಎಲ್ಲಾ ಸಂಗತಿಗಳ ನೇರವಾದ ಸಾಕ್ಷಿ ಅಲ್ಲವಾದಾಗ್ಯೂ ಕರ್ತನ ಪುನರುತ್ಥಾನದ ಸಾಕ್ಷಿಯಾಗುವಂತೆ ಆತನ ಮಹಿಮಾ ಪ್ರಸನ್ನತೆಯ ಕ್ಷಣಿಕ ದರ್ಶನವೊಂದನ್ನು ಆತನಿಗೆ ನೀಡಲಾಯಿತು. ಆತನೇ ಈ ಬಗ್ಗೆ " ಕಟ್ಟಕಡೆಗೆ ದಿನತುಂಬದೆ ಹುಟ್ಟಿದಂತಿರುವ ನನಗೂ ಕಾಣಿಸಿಕೊಂಡನು" (1 ಕೊರಿ. 15:8) ಎಂದು ಬರೆದಿದ್ದಾನೆ. ಅಪೋಸ್ತಲನಾದ ಪೌಲನು ನಿಜವಾಗಿಯೂ ಉಳಿದ ಸಭೆಯವರು ಕರ್ತನ ಎರಡನೆಯ ಬರೋಣ ಸಮಯದಲ್ಲಿ ಆತನ ಮಹಿಮೆಯನ್ನು ನೋಡುವುದಕ್ಕಿಂತ ಮುಂಚಿತವಾಗಿಯೇ ಆ ಮಹಿಮೆಯನ್ನು ನೋಡಲು ಅರ್ಹನಾಗಿರಲಿಲ್ಲ. ಆ ಸಮಯದಲ್ಲಿ ನಂಬಿಗಸ್ತರೆಲ್ಲರೂ ಮಾರ್ಪಡಲ್ಪಟ್ಟು, ಆತನಂತೆ ಮಾಡಲ್ಪಟ್ಟು ಆತನನ್ನು ಕಾಣುವವರಾಗಿದ್ದಾರೆ. ಆದರೆ ಈ ಅಪೋಸ್ತಲನು (ಪೌಲನು) ಕರ್ತನ ಸಾಕ್ಷಿಯಾಗಬೇಕಾಗಿದ್ದುದರಿಂದ ಆತನಿಗೆ ಈ ಕ್ಷಣಿಕ ದರ್ಶನ ಉಂಟಾಯಿತಲ್ಲದೆ ಆತನಿಗೆ ಅಧಿಕವಾದ ಕರ್ತನ ಒಂದು ದರ್ಶನವುಂಟಾಗಿ ಅವರೆಲ್ಲರಿಗಿಂತ ಹೆಚ್ಚಾದ ಪ್ರಕಟನೆಯಾಯಿತು. ಈ ರೀತಿಯಲ್ಲಿ ಆತನು ಕರ್ತನೊಡನೆ ಹಿಂದಿನ ವೈಯುಕ್ತಿಕ ಸಂಪರ್ಕದ ಕೊರತೆಯನ್ನು ನಿವಾರಿಸಿಕೊಳ್ಳುವಂತಾಯಿತು. ಈ ವಿಶೇಷ ಅನುಭವಗಳು ಆತನ ವೈಯುಕ್ತಿಕ ಲಾಭಕ್ಕಾಗಿ ಇರದೆ ಅದು ಮುಖ್ಯವಾಗಿ ಸಭೆಯ ಅನುಕೂಲಕ್ಕಾಗಿ ಇತ್ತೆಂದು ನಾವು ಗ್ರಹಿಸಬಹುದು. ಯೂದನ ಸ್ಥಾನವನ್ನು ಪಡಕೊಂಡ ಈ ಅಪೋಸ್ತಲನು ಬೇರೆ ಯಾವುದೇ ಅಪೋಸ್ತಲರುಗಳಿಗಿಂತ ಹೆಚ್ಚಾದ ವಿಚಿತ್ರವಾದ ಅನುಭವಗಳನ್ನೂ, ದರ್ಶನಗಳನ್ನೂ, ಪ್ರಕಟನೆ ಮುಂತಾದುವುಗಳನ್ನು ಖಂಡಿತವಾಗಿಯೂ ಪಡಕೊಂಡನು.

ಆತನ ಅನುಭವಗಳು ಆತನಿಗೆ "ದೇವರ ಆಳವಾದ ಸಂಗತಿಗಳನ್ನು" ಕಂಡುಕೊಳ್ಳಲು ಅನುಮತಿಸಿದ್ದಲ್ಲದೆ, ಮನುಷ್ಯರು ನುಡಿಯಲಶಕ್ಯವಾದ ಹೇಳಬಾರದ ಮಾತುಗಳನ್ನೂ ಕೇಳುವಂತಾಯಿತು (2 ಕೊರಿ.12:4). ಆದರೆ ಈ ಅಪೋಸ್ತಲನ ಮನಸ್ಸಿಗೆ ನೀಡಲ್ಪಟ್ಟ ಪ್ರಕಾಶವು ಆತನ ಬರಹಗಳ ಮೂಲಕ ಅಂದಿನಿಂದ ಇಂದಿನವರೆಗಿನ ಎಲ್ಲಾ ಸಭೆಯ ಮೇಲೆ ಪ್ರತಿಬಿಂಬಿಸಲ್ಪಟ್ಟಿದೆ.

ಅಪೋಸ್ತಲನಾದ ಪೌಲನು ಈ ಎಲ್ಲಾ ದರ್ಶನಗಳನ್ನೂ, ಪ್ರಕಟನೆಗಳನ್ನೂ ಹೊಂದಿಕೊಂಡ ಕಾರಣ ಪರಿಸ್ಥಿತಿಯನ್ನು ಗ್ರಹಿಸಿಕೊಂಡು ನೂತನ ದೈವೇಚ್ಛೆಯನ್ನು ಮೆಚ್ಚಿ ಕೊಳ್ಳುವಂತೆಯೂ, ದೇವರ ಗುಣಲಕ್ಷಣಗಳ ಉದ್ದ, ಅಗಲ, ಆಳ ಮತ್ತು ಎತ್ತರಗಳನ್ನು ಗ್ರಹಿಸಿ ಆತನ ಯೋಜನೆಗಳನ್ನು ಸ್ಪಷ್ಟವಾಗಿ ತಿಳುಕೊಳ್ಳುವಂತೆಯೂ ಸಾಧ್ಯವಾಯಿತು. ಈ ಮೂಲಕ ಆತನು ಪರಿಣಿತನಾಗಿ ತನ್ನ ಬೋಧನೆಗಳಲ್ಲಿಯೂ, ಪತ್ರಿಕೆಗಳಲ್ಲಿಯೂ ಈ ಬಗ್ಗೆ ತಿಳಿಸಿ ನಂಬಿಗಸ್ತ ಮನೆವಾರ್ತೆಯವರಿಗೆ ಸುವಾರ್ತಾ ಯುಗದ ಪರ್ಯಂತ ಆಶೀರ್ವಾದವನ್ನು ಹೊಂದಿಕೊಳ್ಳುವಂತೆ ಮಾಡಲು ಸಾಧ್ಯವಾಯಿತು. ಇಂದೂ ಸಹಾ ಸಭೆಯು ಬೇರೆ ಯಾವುದೇ ಅಪೋಸ್ತಲರ ಸಾಕ್ಷಿಯನ್ನು ಕಳಕೊಳ್ಳಲು ಒಂದು ವೇಳೆ ಶಕ್ತವಿರುವುದಾದರೂ ಈತನ ಸಾಕ್ಷಿಯನ್ನು ಕಳಕೊಳ್ಳಲು ಸಿದ್ಧರಿಲ್ಲ. ಆದರೆ ನಾವು ಈ ಪೂರ್ಣ ಸಾಕ್ಷಿಯನ್ನು ಪಡೆದಿರುವುದು ಸಂತೋಷಕರ. ಇವೆಲ್ಲವನ್ನೂ ನಾವು

ಮೆಚ್ಚಿಕೊಳ್ಳುತ್ತೇವೆ ಮತ್ತು ಈ ಎಲ್ಲಾ ಹನ್ನೆರಡು ಮಂದಿಯ ಉದಾತ್ತ ಗುಣಲಕ್ಷಣಗಳನ್ನು ಸಹ. ಆತನ "ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವುದಕ್ಕಾಗಿ ಆರಿಸಿಕೊಂಡ ಸಾಧನವಾಗಿದ್ದಾನೆ" (ಅ. ಕೃ. 9:15) ಎಂದು ಪೌಲನ ಅಪೋಸ್ತಲತನವನ್ನು ಸೂಚಿಸುವ ಕರ್ತನ ಸಾಕ್ಷಿಯನ್ನು ನಾವು ಗುರುತಿಸೋಣ. ಪೌಲನು ತಾನೇ ತನ್ನ ಬಗ್ಗೆ "ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪಿತವಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ. ನಾನು ಅದನ್ನು ಮನುಷ್ಯರಿಂದ ಹೊಂದಲಿಲ್ಲ. ನನಗೆ ಯಾರೂ ಉಪದೇಶಿಸಲಿಲ್ಲ. ಯೇಸುಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು" (ಗಲಾತ್ಯ1:11) ಎಂತಲೂ "ಸುನ್ನತಿಯಾದವರಿಗೆ ಸುವಾರ್ತೆಯನ್ನು ಸಾರುವ ಕೆಲಸವು ಹೇಗೆ ಪೇತ್ರನಿಗೆ ಕೊಡಲ್ಪಟ್ಟಿತೋ ಹಾಗೆಯೇ ಸುನ್ನತಿಯಿಲ್ಲದವರಿಗೆ ಅದನ್ನು ಸಾರುವ ಕೆಲಸವು ನನಗೆ ಕೊಡಲ್ಪಟ್ಟಿರುವುದನ್ನು..." (ಗಲಾತ್ಯ : 2:8) ರಲ್ಲಿ ಬರೆಯುತ್ತಾನೆ. ಆತನಿಗೆ ಕರ್ತನ ಮೇಲೆ ಮತ್ತು ಸಹೋದರರುಗಳ ಮೇಲಿದ್ದ ಆಸಕ್ತಿ ಮತ್ತು ತನ್ನ ಸಹೋದರರಿಗಾಗಿ ತನ್ನ ಪ್ರಾಣವನ್ನೇ ಅರ್ಪಿಸುವ ಇಚ್ಛೆ, ಅವರಿಗಾಗಿ ತನ್ನ ಸಮಯ ಮತ್ತು ಸಾಮರ್ಥ್ಯಗಳನ್ನು ಬಳಸುವ ಮನಸ್ಸು ಅಪೋಸ್ತಲತನದ ಆತನ ಅರ್ಹತೆಗೆ ಸಾಕ್ಷಿಯಾಗಿರುವುದಲ್ಲದೆ, ಸಭೆಯ ಸಂಬಂಧ ಆತನ ಅಪೋಸ್ತಲತನದ ಸಂಬಂಧವನ್ನು ಪ್ರಶ್ನಿಸುವವರಿಗೆ ಆತನು ಮುಚ್ಚುಮರೆಯಿಲ್ಲದೆ ಇವನ್ನು ಉಲ್ಲೇಖಿಸಿದನು. ಕರ್ತನು ಆಶೀರ್ವದಿಸಿದ ಪ್ರಕಟನೆ ಮತ್ತು ದೇವರ ಸೇವೆ ಮುಂತಾದುವುಗಳಲ್ಲಿ ಆತನು ಕಿಂಚಿತ್ತಾದರೂ ಇತರರಿಗಿಂತ ಹಿಂದೆ ಬಿದ್ದವನಲ್ಲ (1 ಕೊರಿ. 9:1, 2 ಕೊರಿ. 11:5, 23, 12:1–7,12; ಗಲಾತ್ಯ 2:8,3:5).

ಅಪೋಸ್ತಲರು ಯೆಹೂದ್ಯರ ಮಧ್ಯೆ ಮಾತ್ರವೇ ಸೇವೆ ಮಾಡಬೇಕೆಂಬುದು ದೇವರ ಉದ್ದೇಶವಾಗಿರಲಿಲ್ಲ. ದಾಖಲೆಗಳು ಇದಕ್ಕೆ ವ್ಯತಿರಿಕ್ತವಾಗಿವೆ. ಆತನು ಆ ಹನ್ನೊಂದು ಮಂದಿಗೆ ಪವಿತ್ರಾತ್ಮ ಶಕ್ತಿಯು ಬರುವವರೆಗೂ ಅವರು ಯೆರೂಸಲೇಮಿನಲ್ಲಿ ಕಾಯ್ದುಕೊಂಡಿರಬೇಕಾದರೂ ಮತ್ತು ಅಲ್ಲಿಂದ ತಮ್ಮ ಸಾಕ್ಷಿಯನ್ನು ಆರಂಭಿಸಬೇಕಾಗಿದ್ದರೂ ತನ್ನ ಕಾರ್ಯ ಮತ್ತು ಅವರ ಸಂದೇಶಗಳು ಅಂತಿಮವಾಗಿ ಎಲ್ಲಾ ಜನರಿಗಾಗಿ ಇವೆಯೆಂಬ ಸೂಚನೆಯನ್ನಿತ್ತಿದ್ದನು. ನಮ್ಮ ಕರ್ತನ ಮಾತುಗಳು ಇಂತಿವೆ : "ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" (ಅ. ಕೃ. 1:8). ಈ ಸಾಕ್ಷಿಯು ಅಪೋಸ್ತಲರ ಜೀವಿತ ಸಮಯದಲ್ಲಿ ಮುಂದುವರಿಯಿತಲ್ಲದೆ, ಈಗಲೂ ಮುಂದುವರೆಯುತ್ತಾ ಇದೆ. ಅವರು ಇನ್ನೂ ನಮಗೆ ಬೋಧಿಸುತ್ತಿದ್ದಾರೆ, ವಿಶ್ವಾಸಿಗಳಿಗೆ ಇನ್ನೂ ಅದೇಶಗಳನ್ನು ನೀಡುತ್ತಿದ್ದಾರೆ, ಇನ್ನೂ ಪ್ರೋತ್ಸಾಹಿಸುತ್ತಿದ್ದಾರೆ, ಇನ್ನೂ ಬುದ್ಧಿ ಹೇಳುತ್ತಿದ್ದಾರೆ ಮತ್ತು ಅಕ್ಷೇಪಣೆಗಳನ್ನು ಇನ್ನೂ ಮಾಡುತ್ತಲೇ ಇದ್ದಾರೆ. ಅವರ ಮರಣವು ಅವರ ಸೇವೆಯನ್ನು ಸ್ಥಗಿತಗೊಳಿಸಲಿಲ್ಲ. ಅವರು ಇನ್ನೂ ಮಾತನಾಡುತ್ತಿದ್ದಾರೆ, ಸಾಕ್ಷಿ ನೀಡುತ್ತಿದ್ದಾರೆ, ಕರ್ತನ ನಂಬಿಗಸ್ತರಿಗೆ ಅವರು ದೇವರ ಬಾಯಿಯಂತಿದ್ದಾರೆ.

## ಅಪೋಸ್ತಲರ ಪ್ರೇರಣೆ

## The Inspiration of the Apostles

ಅಪೋಸ್ತಲರು ವಿಶ್ವಾಸಾರ್ಹ ಸಾಕ್ಷಿಗಳಾಗಿದ್ದಾರೆ, ಇತಿಹಾಸಕಾರರಾಗಿದ್ದಾರೆ ಎಂಬ ಭರವಸೆ ನಮಗಿರುವುದು ಒಳ್ಳೆಯದು. ಅವರ ಸಾಕ್ಷಿಗಳು ಪ್ರಾಮಾಣಿಕತೆಯ ಮುದ್ರೆ ಹೊಂದಿದೆ. ಅದರಲ್ಲಿ ಅವರು ಜನರಲ್ಲಿ ಐಶ್ವರ್ಯವನ್ನಾಗಲೀ, ಮಹಿಮೆಯನ್ನಾಗಲೀ ಬಯಸಲಿಲ್ಲ. ಆದರೆ ಪುನರುತ್ಥಾನಗೊಂಡ ತಮ್ಮ ಒಡೆಯನ ಬಗ್ಗೆ ಇದ್ದ ಆಸಕ್ತಿಯ ಸಲುವಾಗಿ ತಮ್ಮೆಲ್ಲಾ ಲೌಕಿಕ ಹಿತಗಳನ್ನೂ ತ್ಯಾಗಮಾಡಿದರು. ಇದಕ್ಕಿಂತ ಹೆಚ್ಚಿನ ತೂಕವಿಲ್ಲದೇ ಹೋಗಿದ್ದರೂ ಅವರ ಸಾಕ್ಷಿಗೆ ಬೆಲೆ ಇರುತ್ತಿದ್ದಿಲ್ಲ; ಆದರೆ ನಾವು ದೇವರ ವಾಕ್ಯದ ಬೋಧನೆಗಳಲ್ಲಿ ಕರ್ತನು ಅವರನ್ನು ತನ್ನ ಸ್ಫೂರ್ತಿಯುತ ನಿಯೋಗಿಗಳನ್ನಾಗಿ ಉಪಯೋಗಿಸಿಕೊಂಡನೆಂದು ಕಂಡುಕೊಳ್ಳುತ್ತೇವೆ. ಅವರು ತಮ್ಮ ಸಾಕ್ಷಿಯಲ್ಲಿ, ಸಿದ್ಧಾಂತಗಳಲ್ಲಿ ಮತ್ತು ಸಂಪ್ರದಾಯ ಮುಂತಾದವುಗಳಲ್ಲಿ ಆತನಿಂದಲೇ ಮಾರ್ಗದರ್ಶನ ಪಡೆದು ಅವುಗಳನ್ನು ಸಭೆಗಳಲ್ಲಿ ಅನುಷ್ಠಾನಗೊಳಿಸಿದರು. ಅವರು ತಾವು ಕಂಡು ಕೇಳಿದ ಸಂಗತಿಗಳಿಗಷ್ಟೇ ಸಾಕ್ಷಿಗಳಾಗಿರದೆ ಇದಕ್ಕೂ ಹೆಚ್ಚಾಗಿ ಪವಿತ್ರಾತ್ಮನಿಂದ ತಾವು ಪಡೆದ ಸೂಚನೆಗಳಿಗೂ ಸಾಕ್ಷಿಗಳಾಗಿದ್ದರು. ಈ ರೀತಿಯಲ್ಲಿ ಅವರುಗಳು ನಂಬಿಕೆಯುಳ್ಳ ಮನೆವಾರ್ತೆಯವರಾಗಿದ್ದರು. " ಜನರು ನಮ್ಮನ್ನು ಕ್ರಿಸ್ತನ ಕೈಕೆಳಗಿನವರೆಂತಲೂ, ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು" (1 ಕೊರಿಂಥ.4:1) ಎಂದು ಪೌಲನು ಹೇಳಿದ್ದಾನೆ. ಇದೇ ಅಭಿಪ್ರಾಯವನ್ನು ನಮ್ಮ ಕರ್ತನು ತನ್ನ ಹನ್ನೆರಡು ಮಂದಿ ಅಪೋಸ್ತಲರಿಗೆ " ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುತ್ತೇನೆ" ಎಂತಲೂ, "ನನ್ನ ಕುರಿಗಳನ್ನು ಮೇಯಿಸಿರಿ" ಎಂದು ಹೇಳುವಾಗಲೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಅಪೊಸ್ತಲರುಗಳು ಸಹಾ "ಧಾರ್ಮಿಕ ರಹಸ್ಯವು ( ನೂತನ ಸೃಷ್ಟಿಯ ಮಹಾ ಕರೆಗೆ ಸಂಬಂಧಪಟ್ಟ ಆಳವಾದ ಸತ್ಯವು – ಕ್ರಿಸ್ತನೇ) ಇತರ ಯುಗಗಳಲ್ಲಿ ಅಡಗಿದ್ದು ಈಗ ಪವಿತ್ರಾತ್ಮನ ಮೂಲಕ ಆತನ ಪವಿತ್ರ ಅಪೋಸ್ತಲರಿಗೂ ಪ್ರವಾದಿಗಳಿಗೂ ಪ್ರಕಟವಾಗಿದೆ" ಎಂದಿದ್ದಾರೆ. ಈ ಪ್ರಕಟನೆಯ ಉದ್ದೇಶವು "ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು (ಈ ನೂತನ ಸೃಷ್ಟಿಯು ಯಾವ ಶರತ್ತುಗಳ ಮೇರೆಗೆ ಭಾಗವಹಿಸಬಹುದೆಂಬ) ಪ್ರಕಟವಾಗುವ ವಿಧ ಎಂಥಾದ್ದೆಂದು... (ಎಫೆಸ 3:3–11) ಎಂಬುದರಲ್ಲಿ ತೋರಿಬರುತ್ತದೆ. ಪುನಃ ಸಭೆಯು ಯಾವರೀತಿಯಲ್ಲಿ ಅಪೋಸ್ತಲರ ಮತ್ತು ಪ್ರವಾದಿಗಳ ಅಸ್ಥಿವಾರದ ಮೇಲೆ ಕಟ್ಟಲ್ಪಡಬೇಕು ಎಂಬುದನ್ನು ವಿವರಿಸುತ್ತಾ ಯೇಸುಕ್ರಿಸ್ತನು ಸ್ವತಃ ಮೂಲೆಗಲ್ಲಾಗಿರಲಾಗಿ "ಅಪೋಸ್ತಲರೂ, ಪ್ರವಾದಿಗಳೂ ಎಂಬ ಅಸ್ಥಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ" (ಎಫೆಸ. 2:20) ಎಂತಲೂ "ಅನ್ಯಜನರಾಗಿರುವ ನಿಮ್ಮ ನಿಮಿತ್ತ ಕ್ರಿಸ್ತ ಯೇಸುವಿನ ಸೆರೆಯವನಾದ ಪೌಲನೆಂಬ ನಾನು ನಿಮಗೋಸ್ಕರ ಪ್ರಾರ್ಥಿಸುತ್ತೇನೆ" (ಎಫೆಸ 2:20,22; 3:1) ಎಂತಲೂ ಅಪೋಸ್ತಲನು ಬರೆಯುತ್ತಾನೆ.

ಸಹಾಯಕನು (ಅಂದರೆ ಪವಿತ್ರಾತ್ಮನು) ನಿಮಗೆ ಎಲ್ಲಾ ಸಂಗತಿಗಳನ್ನು ಕಲಿಸಿಕೊಡುತ್ತೇನೆ ಮತ್ತು ನಾನು ನಿಮಗೆ ಹೇಳಿರುವ ಎಲ್ಲಾ ಸಂಗತಿಗಳನ್ನು ನಿಮ್ಮ ನೆನಪಿಗೆ ತರುತ್ತೇನೆ ಎಂಬ ವಾಗ್ದಾನ ನೀಡುವವನಾಗಿದ್ದಾನೆ. ಮತ್ತು ಆತನು ನಿಮಗೆ ಮುಂದೆ ಸಂಭವಿಸಲಿರುವ ಎಲ್ಲಾ ಸಂಗತಿಗಳನ್ನು ಸಹಾ ತೋರಿಸುವವನಾಗಿದ್ದಾನೆ ( ಯೋಹಾನ 14: 26 ಮತ್ತು 16:13 ನೋಡಿರಿ). ಸ್ವಲ್ಪ ಮಟ್ಟಿಗೆ, ನಿಸ್ಸಂದೇಹವಾಗಿ ಇದು ಇಡೀ ಸಭೆಗೆ ಅನ್ವಯಿಸುವುದಾಗಿದ್ದರೂ ಇದು ವಿಶೇಷವಾಗಿ ಅಪೋಸ್ತಲರಿಗೆ ಅನ್ವಯಿಸುವುದಾಗಿದೆ. ನಿಜವಾಗಿಯೂ ಇದು ಅಪೋಸ್ತಲರ ಮೂಲಕವಾಗಿ ಸಭೆಯ ಇನ್ನುಳಿದ ಭಾಗಕ್ಕೂ ತನ್ನ ಕಾರ್ಯವೆಸಗುತ್ತದೆ – ಅವರ ಮಾತುಗಳು ಇನ್ನೂ ನಾಲೆಗಳಂತಿದ್ದು ಅವುಗಳ ಮೂಲಕ ಪವಿತ್ರಾತ್ಮನು ಹಳೆಯ ಮತ್ತು ನೂತನ ಸಂಗತಿಗಳನ್ನು ನಮಗೆ ಬೋಧಿಸುವ ವನಾಗಿದ್ದಾನೆ. ಈ ವಾಗ್ದಾನಗಳ ಐಕ್ಯತೆಯೊಂದಿಗೆ ನಾವು ಅಪೊಸ್ತೋಲಿಕ ಪ್ರೇರಣೆಯು ಮೂರು ಪಟ್ಟಿನ ಗುಣ ಲಕ್ಷಣಗಳನ್ನು ಹೊಂದಿದೆ ಎಂದು ಅರ್ಥ ಮಾಡಿಕೊಳ್ಳಬಹುದಾಗಿದೆ. ಅವುಗಳೆಂದರೆ :

(1) ಕರ್ತನ ವೈಯುಕ್ತಿಕ ಬೋಧನೆಗಳನ್ನು ನೆನಪಿಗೆ ತಂದುಕೊಳ್ಳುವಂತೆ ಮತ್ತು ಅದನ್ನು ಉತ್ಪನ್ನಗೊಳಿಸುವಂತೆ ನೆನಪಿನ ಶಕ್ತಿಯನ್ನು ಬಲಗೊಳಿಸುವುದು.

(2) ಯುಗಗಳ ದೈವಿಕ ಯೋಜನೆಗಳಲ್ಲಿ ಅಡಗಿರುವ ಸತ್ಯತೆಯನ್ನು ಮೆಚ್ಚಿಕೊಳ್ಳಲು ಮಾರ್ಗದರ್ಶನ.

(3) ಮುಂದೆ ಸಂಭವಿಸಲಿರುವ ಸಂಗತಿಗಳ ಪ್ರಕಟನೆ –"ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ" (ಯೋಹಾನ 16 :12) ಎಂಬುದೇ.

ಅಪೋಸ್ತಲರ ನೆನಪಿನ ಬಲಗೊಳ್ಳಿಸುವಿಕೆಯು ಕರ್ತನ ಮಾತುಗಳ, ಪದ ಸಮುಚ್ಚಯದ ಅಥವಾ ಅಪ್ಪಣೆಯ ನಿಖರವಾದ ಅಧಿಕಾರವಾಣಿಯೆಂದು ನಾವು ಗ್ರಹಿಸಿಕೊಳ್ಳಬಾರದು. ಅಪೋಸ್ತಲರ ಧಾರ್ಮಿಕ ಬರಹಗಳು ಸಹಾ ಅಂಥಹ ಅಧಿಕಾರವಾಣಿಗೆ ಸೂಚನೆ ನೀಡುವುದಿಲ್ಲ. ಕರ್ತನ ವಾಗ್ದಾನವು ತಾನೇ ಆ ಹೇಳಿಕೆಗಳ ನಿಖರತೆಯನ್ನು ನಿಶ್ಚಿತಗೊಳಿಸುವುದಾಗಿದೆ. ನಾಲ್ಕು ಸುವಾರ್ತೆಗಳ ಪ್ರತಿಯೊಂದರಲ್ಲಿಯೂ ನಾವು ನಮ್ಮ ಕರ್ತನ ಬಾಲ್ಯ ದಿನಗಳ ಬಗ್ಗೆ ಮತ್ತು ಆತನ ಸೇವೆಯ ಬಗ್ಗೆ ಇತಿಹಾಸವಿದೆ; ಅದರೂ ಪ್ರತಿಯೊಂದರಲ್ಲಿಯೂ ಲೇಖಕರುಗಳ ವೈಯುಕ್ತತೆಯು ಪ್ರಕಟವಾಗುತ್ತದೆ. ಪ್ರತಿಯೊಬ್ಬನೂ ತನ್ನದೇ ಆದ ಶೈಲಿಯಲ್ಲಿ ತನಗೆ ಮುಖ್ಯವಾಗಿ ಕಂಡುಬಂದದ್ದನ್ನು ಬಣ್ಣಿಸಿದ್ದಾನೆ. ಕರ್ತನ ಮೇಲ್ವಿಚಾರಣೆಯಲ್ಲಿ ಈ ಎಲ್ಲಾ ವರ್ಣನೆಗಳು ಒಟ್ಟಾಗಿ ಸಭೆಯ ನಂಬಿಕೆಯನ್ನು ಸ್ಥಾಪಿಸುವ ಅಗತ್ಯಕ್ಕೆ ತಕ್ಕಂತೆ ಒಂದು ಸಂಪೂರ್ಣ ಇತಿಹಾಸವನ್ನು ಒದಗಿಸುವುದಾಗಿದೆ ಮತ್ತು ಇದು ಕ್ರಿಸ್ತನನ್ನು ಪ್ರವಾದಿಗಳ ಒಬ್ಬ ಮೆಸ್ಸೀಯನೆಂದೂ, ಅತನ ಬಗ್ಗೆ ಹೇಳಿರುವ ಎಲ್ಲಾ ಪ್ರವಾದನೆಗಳನ್ನು ಮತ್ತು ಆತನ ಜೀವಿತದ ನಿಜ ಸಂಗತಿಗಳು ಮತ್ತು ಬೋಧನೆಗಳನ್ನು ಪೂರೈಸುವವನೆಂದೂ ಗುರುತಿಸುತ್ತದೆ. ಈ ಪ್ರೇರಣೆಯು ಬಾಯಿಮಾತುಗಳಾಗಿದ್ದರೆ (ಮಾತಿನಿಂದ ಮಾತಿಗೆ ಹೇಳಿಕೆ) ಇವುಗಳನ್ನು ಹಲವು ಜನರುಗಳಿಂದ ಬೇರೆ ಬೇರೆ ವಾಕ್ಸರಣಿಯಲ್ಲಿ ಪುನರಾವರ್ತನೆಗೊಳ್ಳುವ ಅಗತ್ಯವಿದ್ದಿಲ್ಲ. ಆದರೆ ಪ್ರತಿಯೊರ್ವ ಲೇಖಕನು ತನ್ನ ವೈಯುಕ್ತಿಕ ಸ್ವಾತಂತ್ರ್ಯವನ್ನು ಬಳಸಿಕೊಂಡು ತನ್ನ ಸ್ವಂತ ಅಯ್ಕೆಯ ಸಂಗತಿಗಳನ್ನು ದಾಖಲಿಸಿರುವುದು ಗಮನಾರ್ಹ. ಕರ್ತನು ತನ್ನ ಪವಿತ್ರಾತ್ಮನ ಮೂಲಕ ಇದರ ಮೇಲ್ವಿಚಾರಣೆ ನಡಿಸಿ ಯಾವುದೇ ಒಂದು ಪ್ರಮುಖ ಸಂಗತಿಯೂ ಬಿಟ್ಟುಹೋಗದಂತೆ ನೋಡಿಕೊಂಡಿದ್ದಾನೆ. ದೇವಜನರು ಸಮರ್ಪಕವಾಗಿರುವಂತೆ, ಅವರಿಗೆ ಸಮಗ್ರ ಮಾಹಿತಿಯು ಒದಗಿಬರುವಂತೆ ಅಗತ್ಯವಾದವುಗಳೆಲ್ಲವೂ ಪ್ರಾಮಾಣಿಕವಾಗಿ ದಾಖಲೆಗೊಂಡಿವೆ. ಅಪೋಸ್ತಲನಾದ ಯೋಹಾನನ ದಾಖಲೆಯು ಇತರ ಸುವಾರ್ತಿಕರಾದ ಮತ್ತಾಯ, ಮಾರ್ಕ ಮತ್ತು ಲೂಕರ ಸುವಾರ್ತೆಗಳಿಗೆ ಅನುಬಂಧವಾಗಿರುವುದು ಸ್ವಾರಸ್ಯಕರ. ಆತನು ಮುಖ್ಯವಾಗಿ ಸಂಧರ್ಭ ಮತ್ತು ಸಂಭವಗಳ ಬಗ್ಗೆ ಇತರರು ಬಿಟ್ಟುಬಿಟ್ಟಿರ ಬಹುದಾದ ಸಂಗತಿಗಳ ಬಗ್ಗೆ ಉಪನ್ಯಾಸ ಮಾಡುತ್ತಾನೆ.

ಪವಿತ್ರಾತ್ಮನ ಮೂಲಕ ಅಪೋಸ್ತಲರಿಗೆ ಮತ್ತು ಅವರ ಮೂಲಕ ನೂತನ ಸೃಷ್ಟಿಗೆ "ಎಲ್ಲಾ ಸತ್ಯ ಸಂಗತಿಗಳ ಬಗ್ಗೆ" ಮಾರ್ಗದರ್ಶನ ನೀಡುತ್ತೇನೆಂಬ ಕರ್ತನ ಪ್ರಸ್ತಾಪವು ಈ ಮಾರ್ಗದರ್ಶನವು ವೈಯುಕ್ತಿಕ ಅಥವಾ ವ್ಯಕ್ತಿಗತವಾದುದಾಗಿರದೆ ಸರ್ವೇಸಾಮಾನ್ಯವಾಗಿರುವುದೆಂಬ ಅರ್ಥವನ್ನು ನೀಡುವುದಾಗಿದೆ. ಈ ಸಂಗತಿಗಳ ಪೂರೈಕೆಯು ದಾಖಲೆಗಳ ಮೂಲಕ ನಿದರ್ಶನಗೊಂಡಿವೆ. ಪೌಲನ ಹೊರತಾಗಿ ಉಳಿದೆಲ್ಲಾ ಅಪೋಸ್ತಲರುಗಳು ಸಾಮಾನ್ಯರು, ಹೆಚ್ಚು ವಿಧ್ಯಾಭ್ಯಾಸ ಮಾಡದವರೂ ಆಗಿದ್ದಾಗ್ಯೂ ಅವರ ದೇವರ ವಾಕ್ಯ ವಿವರಣೆಗಳು ಬಹಳ ಗಮನಾರ್ಹವಾದವುಗಳಾಗಿವೆ. ಅವರು ಆಗಿನ ಕಾಲದ ದೈವಜ್ಞಾನ ಪಂಡಿತರುಗಳಿಂದ ಹಿಡಿದು ಈ ವರೆಗಿನ ಎಲ್ಲಾ "ವಿವೇಕಿಗಳ ಜ್ಞಾನವನ್ನು ಸಹಾ ದಿಗ್ಭ್ರಮೆ'ಗೊಳಿಸುವವರಾಗಿದ್ದಾರೆ. ವಾಕ್ಚಾತುರ್ಯ ದೋಷಗಳು ಏನೇ ಇರಲಿ ಅವುಗಳು ಧರ್ಮಶಾಸ್ತ್ರದ, ಪ್ರವಾದನೆಗಳ, ಕರ್ತನ ಬೋಧನೆಗಳ ಅವರ ತರ್ಕಬದ್ಧವಾದ ವ್ಯವಕಲನಕ್ಕೆ ಸರಿಬೀಳಲಾರವು. ಆ ದೇಶದ ಯೆಹೂದಿ ಧರ್ಮಶಾಸ್ತ್ರ ಪಂಡಿತರುಗಳು "ಅವರು ಯೇಸುವಿನ ಬಳಿ ಇದ್ದವರೆಂದು, ಅವರು ಆತನ ಸಿದ್ಧಾಂತಗಳನ್ನು ಕಲಿತವರು ಮತ್ತು ಆತನ ಉತ್ಸಾಹವನ್ನು ನಕಲು ಮಾಡಿಕೊಂಡವರು ಎಂಬ ಕಾರಣ ಅವರ ಜ್ಞಾನವನ್ನು ಗಣನೆಗೆ ತೆಗೆದುಕೊಂಡರು. (ಅ.ಕೃ. 4:5,6 ಮತ್ತು 13 ನೋಡಿರಿ).

ಅಪೋಸ್ತಲರ ಪತ್ರಿಕೆಗಳು ಹಳೆಒಡಂಬಡಿಕೆ ಮತ್ತು ಕರ್ತನ ಪ್ರೇರಿತ ಬರಹ ಮತ್ತು ಮಾತುಗಳ ಮೇಲೆ ತರ್ಕಬದ್ಧವಾದ ವಾದಗಳನ್ನೊಳಗೊಂಡಿವೆ; ಈ ಸುವಾರ್ತಾ ಯುಗದಲ್ಲಿ ಈ ವಾದಗಳ ನೆಲೆಯಲ್ಲಿ ಕರ್ತನು ತನ್ನ ಪರವಾಗಿ ಮಾತನಾಡುವವರ ಮೂಲಕ ನಮ್ಮ ಮುಂದೆ ಇಟ್ಟಿರುವ ಈ ಪ್ರೇರಣೆಯಲ್ಲಿ ಯಾರ್‍ಯಾರು ಪಾಲುದಾರರಾಗಿರುವರೋ ಅವರೆಲ್ಲರೂ ಅದೇ ಸತ್ಯವಾದ ತೀರ್ಮಾನಕ್ಕೆ ಬರುತ್ತಾರೆ; ಈ

ಕಾರಣದಿಂದ ನಮ್ಮ ವಿಶ್ವಾಸವು ಮಾನವ ಜ್ಞಾನದ ಮೇಲೆ ಆಧಾರಗೊಂಡಿರದೆ ಅದು ದೇವರ ಶಕ್ತಿಯ ಮೇಲೆ ಆಧಾರಗೊಂಡಿದೆ (1ಕೊರಿ.2:4–5), ಆದರೆ ಈ ಬೋಧನೆಗಳಲ್ಲಿ ಮತ್ತು ಅವರ ಐತಿಹಾಸಿಕ ಪ್ರಸ್ತುತಿಯಲ್ಲಿ ನಮಗೆ ಪದಕ್ಕೆ-ಪದಯುಕ್ತ ಲೇಖನದ ನಿದರ್ಶನಗಳಿಲ್ಲ – ಅವರುಗಳು ಹಿಂದಿನ ಕಾಲದ ಕೆಲವು ಪ್ರವಾದಿಗಳಂತೆ ದೇವರೊಡನೆ ಮಾತನಾಡಿ ಯಾಂತ್ರಿಕ ರೀತಿಯಲ್ಲಿ ಬರೆಯುವ ಕೇವಲ ದೇವರ ಯುಕ್ತ ಲೇಖಕರೆಂಬ ಯಾವ ನಿದರ್ಶನವೂ ಇಲ್ಲ (2 ಪೇತ್ರ 1:21). ನಿಜವಾಗಿ ಹೇಳುವುದಾದರೆ ಅಪೋಸ್ತಲರುಗಳ ಸ್ಪಷ್ಟವಾದ ದೃಷ್ಟಿಯುಳ್ಳ ನೋಟವು ಅವರ ಮನಸ್ಸಿನ ಪ್ರಕಾಶವಾಗಿತ್ತು. ಇದು ಅವರನ್ನು ದೇವರ ಉದ್ದೇಶಗಳನ್ನು ಮೆಚ್ಚಿಕೊಂಡು ಅವುಗಳನ್ನು ಸ್ಪಷ್ಟವಾಗಿ ಹೇಳಲು ಶಕ್ತರನ್ನಾಗಿ ಮಾಡುವುದಾಗಿತ್ತು. ಸರಿಯಾಗಿ ಅಂದಿನಿಂದ ಎಲ್ಲಾ ದೇವಜನರೂ ಅವರನ್ನು ಅನುಸರಿಸಿ ದೇವರ ಕೃಪೆಯಲ್ಲಿ, ಜ್ಞಾನದಲ್ಲಿ ಮತ್ತು ಪ್ರೀತಿಯಲ್ಲಿ ಬೆಳೆಯಲು ಸಾಧ್ಯವಾಯಿತು ಮತ್ತು ಎಲ್ಲಾ ಸಂತರೊಡನೆ ಗ್ರಹಿಕೆಗೂ ಮೀರಿದ ಕ್ರಿಸ್ತನ ಪ್ರೀತಿಯ ಉದ್ದ, ಅಗಲ, ಆಳ ಎತ್ತರವು ಯಾವುದೆಂದು ಗ್ರಹಿಸಲು ಶಕ್ತರಾದರು (ಎಫೆಸ 3:18–19 ನೋಡಿರಿ).

ಅಷ್ಟಾದರೂ ನಾವು ಅವರ ಇತರ ಬೋಧನೆಗಳು ಮತ್ತು ಅವರ ಐತಿಹಾಸಿಕ ವಿವರಣೆಗಳು ದೇವರಿಂದ ಮೇಲ್ವಿಚಾರಣೆಗೊಳಪಟ್ಟಿವೆ ಎಂದು ನಾವು ಪೂರ್ಣವಾಗಿ ಅದನ್ನು ಪ್ರತಿಪಾದಿಸುತ್ತಿದ್ದೇವೆ. ಅದರಲ್ಲಿ ಅನುಚಿತವಾದ ಶಬ್ಧಗಳನ್ನು ನಿವಾರಿಸಲಾಗಿದೆ ಮತ್ತು ಸತ್ಯವನ್ನು ಮನೆವಾರ್ತೆಯವರಿಗೆ ಅವರ ದಿನದಿಂದ ಇಂದಿನ ವರೆಗೆ meat in due season ಎಂಬಂತೆ ಸ್ಥಾಪಿಸಲಾಗಿದೆ. ಅಪೋಸ್ತಲರ ಮೇಲಿನ ಈ ದೈವಿಕ ಮೇಲ್ವಿಚಾರಣೆಯು ನಮ್ಮ ಕರ್ತನ ಮಾತುಗಳಲ್ಲಿ ಮುನ್ಸೂಚಿಸಲ್ಪಟ್ಟಿದೆ "ಭೂಲೋಕದಲ್ಲಿ ನೀವು ಏನೇನು ಕಟ್ಟುತ್ತೀರೋ ಅದು ಪರಲೋಕದಲ್ಲಿಯೂ ಕಟ್ಟಿರುವುದು; ಮತ್ತು ಭೂಲೋಕದಲ್ಲಿ ನೀವು ಏನೇನು ಬಿಚ್ಚುತ್ತೀರೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು" (ಮತ್ತಾಯ 18:18) ಮುಂತಾಗಿ ಹೇಳಿಯದೆ. ದೇವರು ತನ್ನ ವಿಶೇಷಾಧಿಕಾರವನ್ನು ತ್ಯಜಿಸಿ ಅಪೋಸ್ತಲರ ಆದೇಶಗಳಿಗೆ ವಿಧೇಯನಾದನೆಂದು ನಾವು ತಿಳಿಯಬಾರದು ಆದರೆ ಅದು ಸಭೆಯಲ್ಲಿ ಅವರುಗಳ ನಿರ್ಧಾರಗಳು ಅಂದರೆ ಯಾವುದು ನಿರ್ಬಂಧವಾದುದೆಂದು ಪರಿಗಣಿಸಬೇಕೋ ಮತ್ತು ಯಾವುದನ್ನು ನಿರ್ಬಂಧಿತವೆಂದು ಪರಿಗಣಿಸಬೇಕೋ ಅವುಗಳೆಲ್ಲವೂ ಸಮರ್ಪಕವಾದ ನಿರ್ಣಯಗಳಾಗುವಂತೆ ಪವಿತ್ರಾತ್ಮನು ಅವರಿಗೆ ಮಾರ್ಗದರ್ಶನ ನೀಡುತ್ತಾನೆಂಬುದನ್ನು ಇವು ಸೂಚಿಸುತ್ತವೆ. ಆದುದರಿಂದ ಸಾಮಾನ್ಯವಾಗಿ ಸಭೆಗೆ ಎಲ್ಲಾ ಸಂಗತಿಗಳು ಗೊತ್ತುಪಡಿಸಲ್ಪಟ್ಟಿವೆ, ನಿರ್ಧರಿಸಲಟ್ಟಿವೆ ಮತ್ತು ಅಂತಿಮ ನಿರ್ಣಯವು ದೇವರದ್ದು ಮತ್ತು ಅಪೋಸ್ತಲರದ್ದು ಎಂದು ತಿಳುಕೊಳ್ಳತಕ್ಕದ್ದು.

## "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು"

## Upon This Rock Will I Build My Church

ಅಪೋಸ್ತಲನಾದ ಪೇತ್ರನು ನಮ್ಮ ಕರ್ತನೇ ಬರಬೇಕಾದ ಮೆಸ್ಸೀಯನು, ದೇವರ ಕುಮಾರನು ಎಂಬ ಸಾಕ್ಷಿಯನ್ನು ನೀಡಿದ ಸಂದರ್ಭದಲ್ಲಿ ಅದಕ್ಕನುಗುಣವಾಗಿಯೇ ಯೇಸು ಉತ್ತರಿಸಿ ಆತನಿಗೆ "ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟನ್ನು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ನಿನಗೆ ತಿಳಿಸಿದನು. ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ– ನೀನು ಪೇತ್ರನು (ಪೇತ್ರ ಅಂದರೆ ಬಂಡೆ). ಈ ಬಂಡೆಯ (ಧೃಢವಾದ ಬಂಡೆ) – ನೀನು ಈಗ ತಾನೇ ಹೇಳಿದ ಮಹಾ ಮೂಲಭೂತ ಸತ್ಯವೆಂಬ ಬಂಡೆ) ಮೇಲೆ ನನ್ನ ಸಭೆಯನ್ನು ಕಟ್ಟುವೆನು" (ಮತ್ತಾಯ 16:18 ನೋಡಿರಿ) ಎಂದು ಹೇಳಿದನು. ಕರ್ತನು ತಾನೇ ಕಟ್ಟುವಾತನು ಯಾಕೆಂದರೆ, ಕರ್ತನು ತಾನೇ ತನ್ನನ್ನು ಮೂಲೆಗಲ್ಲೆಂದು ಹೇಳಿಕೊಂಡಿದ್ದಾನೆ. "ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ" (1 ಕೊರಿ. 3:11). ಆತನೇ ಮಹಾ ಬಂಡೆ. ಈ ಬಗ್ಗೆ ಪೇತ್ರನ ಸಾಕ್ಷಿಯು ದೇವರ ಯೋಜನೆಯ ಅಸ್ತಿವಾರ ಸಿದ್ಧಾಂತಗಳ ಬಂಡೆಯಂತಹ ಪ್ರಶಂಸನಾ ಪತ್ರದಂತಿದೆ. ಅಪೋಸ್ತಲನಾದ ಪೇತ್ರನು ಇದನ್ನು ಆ ರೀತಿಯಾಗಿ ಅರ್ಥಮಾಡಿಕೊಂಡು ಅದೇ ರೀತಿಯಲ್ಲಿ ಆತನ ತಿಳುವಳಿಕೆ ಯನ್ನು ಪ್ರಕಟಗೊಳಿಸಿದನು. (1ಪೇತ್ರ 2:5,6 ನೋಡಿರಿ) ಆತನು ದೇವರ ಯೋಜನೆಯ ಮಹಾ ಬಂಡೆಯಾದ ಯೇಸುವಿನ ಬಳಿಗೆ ಅಸ್ತಿವಾರವಾದ ಆತನ ಅನ್ಯೋನತೆಯ ಮೂಲಕ ಬರುವ ಎಲ್ಲಾ ಪ್ರತಿಷ್ಠಿತ ನಂಬಿಗಸ್ಥರನ್ನು ದೇವಮಂದಿರವಾಗುವದಕ್ಕೆ ಕಟ್ಟಲ್ಪಡುತ್ತಿರುವ ಜೀವವುಳ್ಳ ಕಲ್ಲುಗಳೆಂದು ಕರೆದಿದ್ದಾನೆ. ಪೇತ್ರನು ಜೀವವುಳ್ಳ ಕಲ್ಲುಗಳಿಗಿಂತ (Lithos) ದೊಡ್ಡದಾಗಿರುವ ಎಲ್ಲಾ ಅಪೋಸ್ತಲರುಗಳು ಜೀವವುಳ್ಳ ಕಲ್ಲುಗಳಾಗಿದ್ದು ದೈವಿಕ ಯೋಜನೆಯಲ್ಲಿ ಅಸ್ತಿವಾರದಂತಿದ್ದಾರೆ (ಪ್ರಕಟನೆ 21:14) ಮತ್ತು ಅವರು ತಮ್ಮ ಸಹೋದರರುಗಳಿಗಿಂತ ಶ್ರೇಷ್ಠವಾಗಿದ್ದಾರೆ ಎಂಬ ಸೂಚನೆಯಿದ್ದರೂ ಪೇತ್ರನು ತಾನೇ ಮೂಲೆಗಲ್ಲು ಎಂಬುದನ್ನು ಅಲ್ಲಗಳೆದಿದ್ದಾನೆ ಮತ್ತು ತನ್ನನ್ನು ಸಭೆಯ ಇತರ ಜೀವವುಳ್ಳ ಕಲ್ಲುಗಳೊಂದಿಗೆ ವರ್ಗೀಕರಿಸಿಕೊಂಡಿದ್ದಾನೆ.

## ಅಧಿಕಾರದ ಬೀಗದ ಕೈಗಳು

## Keys of Authority

ಇದೇ ಸಂಬಂಧದಲ್ಲಿ ಕರ್ತನು ಪೇತ್ರನಿಗೆ "ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವುದು: ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು" (ಮತ್ತಾಯ 16:19) ಎಂಬಿತ್ಯಾದಿಯಾಗಿ ಹೇಳಿದ್ದಾನೆ. ಈ ರೀತಿಯಲ್ಲಿ ಅಪೋಸ್ತಲರಿಗೆ ನೀಡಿದ ಅದೇ ಅಧಿಕಾರವು ಪೇತ್ರನಿಗೆ ನಿಶ್ಚಿತ ರೂಪದಲ್ಲಿ ಅಧಿಕವಾದ ಸೌಕರ್ಯಗಳು ಅಥವಾ ಬೀಗದ ಕೈಗಳ – ತೆರೆಯುವ ಶಕ್ತಿ ಅಥವಾ ಅಧಿಕಾರವು ಗೌರವಯುತವಾಗಿ ನೀಡಲ್ಪಟ್ಟಿದೆ. ಅಪೋಸ್ತಲನಾದ ಪೇತ್ರನು ಯಾವ ರೀತಿಯಲ್ಲಿ ದೇವರ ರಾಜ್ಯದ ಬೀಗದ ಕೈಗಳನ್ನು ಉಪಯೋಗಿಸಿ ನೂತನ ದೈವೇಚ್ಛೆಯನ್ನು ಮೊದಲು ಪಂಚಾಶತ್ತಮ ದಿನದಂದು ಯೆಹೂದ್ಯರಿಗೆ ನಂತರ ಕೊರ್ನೇಲ್ಯನ ಮನೆಯಲ್ಲಿ ಅನ್ಯಜನರಿಗೂ ಹೇಗೆ ಕಾರ್ಯಾರಂಭಗೊಳಿಸಿದನು ಎಂಬುದು ನಮಗೆ

ತಿಳಿದದೆ. ಪಂಚಾಶತ್ತಮ ದಿನದಂದು ಪವಿತ್ರಾತ್ಮ ವರವು ಸುರಿಸಲ್ಪಟ್ಟಾಗ "ಪೇತ್ರನು ಹನ್ನೊಂದು ಮಂದಿ ಅಪೋಸ್ತಲರ ಸಹಿತ ಎದ್ದು ನಿಂತು" ಘಟ್ಟಿಯಾದ ಧ್ವನಿಯಲ್ಲಿ ಮಾಡಿದ ಪ್ರಸಂಗದ ಬಗ್ಗೆ ನಾವು ಓದಿದ್ದೇವೆ (ಅ.ಕೃ 2:14). ಆತನು ಉಪಕ್ರಮಿಸಿದನು, ಪ್ರಾರಂಭಿಸಿದನು, ಇತರರು ಆತನನ್ನು ಅನುಸರಿಸಿದರು. ಈ ರೀತಿಯಲ್ಲಿ ಸುವಾರ್ತಾ ಆಹ್ವಾನವು ಯೆಹೂದ್ಯರಿಗೆ ತೆರೆಯಲ್ಪಟ್ಟಿತು. ಕೊರ್ನೇಲ್ಯನ ಪ್ರಕರಣದಲ್ಲಿ ಕರ್ತನು ತನ್ನ ದೂತರನ್ನು ಪೇತ್ರನ ಬಳಿಗೆ ಕಳುಹಿಸಿದನು ಮತ್ತು ವಿಶೇಷವಾಗಿ ದರ್ಶನವೊಂದರ ಮೂಲಕ ಅವರ ಅಹ್ವಾನವನ್ನು ಸ್ವೀಕರಿಸಿ ಅದನ್ನು ಅನುಸರಿಸುವಂತೆ ಹೇಳಿದನು. ಈ ರೀತಿಯಲ್ಲಿ ಅನ್ಯಜನರಿಗೂ ಕರುಣೆಯ, ಬಿಡುಗಡೆಯ ಸೌಕರ್ಯದ ಬಾಗಿಲನ್ನು ತೆರೆಯುವಂತೆ ಅವರುಗಳು ಸಹಾ ನೂತನ ಸೃಷ್ಟಿಯ ಮಹಾ ಕರೆಗೆ ಓಗೊಟ್ಟು ಬಂದು ಅದರ ಸೌಕರ್ಯಗಳಲ್ಲಿ ಪಾಲುದಾರರಾಗುವಂತೆ ಕರ್ತನು ಆತನನ್ನು ವಿಶಿಷ್ಟವಾಗಿ ಉಪಯೋಗಿಸಿದನು. ಈ ಸಂಗತಿಗಳು ಕರ್ತನು ಹನ್ನೆರಡು ಮಂದಿ ಅಪೋಸ್ತಲರುಗಳನ್ನು ಆಯ್ಕೆಮಾಡಿದ ಉದ್ದೇಶಕ್ಕೆ ಪೂರ್ಣವಾಗಿ ಅನುಗುಣವಾಗಿವೆ. ಈ ಹನ್ನೆರಡು ಮಂದಿಯನ್ನು ನೂತನ ಹಂಚಿಕೆಯ ವಿಶಿಷ್ಟ ಪ್ರತಿನಿಧಿಗಳನ್ನಾಗಿ ಮಾಡಿದ್ದಾನೆ ಮತ್ತು ಇವರ ಮಾತುಗಳು ನೂತನ ಸೃಷ್ಟಿಯ ಪರವಾಗಿ ಸತ್ಯದ ವಿಶೇಷವಾದ ಸಂಪರ್ಕಮಾರ್ಗಗಳಾಗಿರುತ್ತವೆ ಎಂಬ ಸತ್ಯವನ್ನು ದೇವಜನರು ಸ್ಪಷ್ಟವಾಗಿ ಗ್ರಹಿಸಿ ಕೊಳ್ಳುತ್ತಿರುವಂತೆಯೇ ಅವರು ಸಂಪೂರ್ಣವಾಗಿ ಆ ಮಾತುಗಳನ್ನು ಅಂಗೀಕರಿಸಲು ಸಿದ್ಧರಾಗುತ್ತಾರೆ ಹಾಗೂ ಈ ನೂತನ ಸೃಷ್ಟಿಗಳು ಇವರ ಮಾತುಗಳು ಸಮಗ್ರವಾಗಿ ಒಪ್ಪುವಂತವುಗಳೆಂದು ತಿಳಿದು ಹಾಗೂ ಇವರ ಬೋಧನೆಗಳಿಗೆ ವ್ಯತಿರಿಕ್ತವಾಗಿ ಇತರರು ಮಾಡುವ ಬೋಧನೆಗಳನ್ನು ಎಷ್ಟುಮಾತ್ರಕ್ಕೂ ಒಪ್ಪದಂತ ರೀತಿಯಲ್ಲಿ ತಾವು ತಯಾರಾದರು– "ದೇವರ ಉಪದೇಶವನ್ನೂ ದೇವರ ಬೋಧನೆಯನ್ನೂ ವಿಚಾರಿಸುವ ಎಂದು ಅವರು ಹೇಳದಿದ್ದರೆ ಅವರಿಗೆ ಎಂದಿಗೂ ಬೆಳಗಾಗುವುದಿಲ್ಲ" (ಯೆಶಾಯ 8:20).

ನಮ್ಮ ಕರ್ತನ ವಾಗ್ದಾನಗಳ ಕಡೆಯ ಮಾತುಗಳು ಹೇಳುವುದೇನೆಂದರೆ – "ಆತನು (ತಂದೆಯ ಆತ್ಮನು) ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸಲಿರುವನು" (ಯೋಹಾ.16:13).ಇದು ಅಪೋಸ್ತಲರಿಗೆ ವಿಶೇಷವಾದ ಪ್ರೇರಣೆಯನ್ನು ಸೂಚಿಸುತ್ತದೆ ಮತ್ತು ಇದು ಪರೋಕ್ಷವಾಗಿ ಅವರ ಬೋಧನೆಗಳ ಮೂಲಕ ಈ ಯುಗದ ಅಂತ್ಯದವರೆಗೂ ದೇವಜನರಿಗುಂಟಾಗುವ ಆಶೀರ್ವಾದ ಮತ್ತು ಜ್ಞಾನೋದಯವನ್ನೂ ಸೂಚಿಸುತ್ತದೆ. ಈ ಕಾರಣದಿಂದ ಅವರುಗಳು ಪವಿತ್ರರಾದ ಅಪೋಸ್ತಲರುಗಳು ಮಾತ್ರವೇ ಅಲ್ಲ, ಪ್ರವಾದಿಗಳು ಅಥವಾ ಸಭೆಯ ಮುಂದಣ ಸಂಗತಿಗಳನ್ನು ತಿಳಿಸುವ ದಿವ್ಯಜ್ಞಾನಿಗಳು ಕೂಡಾ ಆಗಿದ್ದಾರೆ. ಈ ಯಾವುದೇ ಅಥವಾ ಸಮಸ್ತ ಸೇವೆಗಳಲ್ಲಿ ಎಲ್ಲಾ ಅಪೋಸ್ತಲರನ್ನು ಏಕಪ್ರಕಾರವಾಗಿ ಉಪಯೋಗಿಸಲಾಯಿತು ಎಂಬುದಲ್ಲ. ಆದರೆ ಕೆಲವರಿಗೆ ಸೇವೆಯ ಸೌಕರ್ಯದಲ್ಲಿ ಮಾತ್ರವಲ್ಲ ಮುಂದೆ ಸಂಭವಿಸಲಿರುವ ಸಂಗತಿಗಳ ಭವಿಷ್ಯ ನುಡಿಯುವಲ್ಲಿ ಹೆಚ್ಚು ಗೌರವ ನೀಡಲಾಯಿತು. ಅಪೋಸ್ತಲನಾದ ಪೌಲನು ಮುಂದೆ ಸಂಭವಿಸಲಿರುವ ವಿವಿಧ ಸಂಗತಿಗಳಾದ ಸಭೆಯ ಮಹಾಪತನ, "ಅಧರ್ಮ ಸ್ವರೂಪಿ" ಯ ಕಾರ್ಯ ಕುರಿತು ಪ್ರಕಟಿಸುವಿಕೆ, ಕರ್ತನ ದ್ವಿತೀಯಾಗಮನದ ವಿಷಯ ಕುರಿತ ರಹಸ್ಯ, ನಾವೆಲ್ಲರೂ ನಿದ್ರೆಹೋಗುವುದಿಲ್ಲ, ಆದರೆ ಮಾರ್ಪಡುವೆವು, ಪ್ರಾಚೀನ ಕಾಲದಿಂದಲೂ ಅಡಗಿರುವ ಯುಗಾಂತರಗಳ ರಹಸ್ಯ ಸಂಗತಿಗಳು, ದೈವೇಚ್ಛೆಗಳು, ಅನ್ಯಜನರನ್ನೂ ಒಳಗೊಂಡ ಸಭೆಯು, ಅಬ್ರಹಾಮನಿಗೆ ಮಾಡಿದ ವಾಗ್ದಾನಗಳಿಗೆ ಜೊತೆ ವಾರಸುದಾರರಾಗಿದ್ದಾರೆ, ಯಾಕೆಂದರೆ ಆತನ ಸಂತಾನವು ಆಶೀರ್ವದಿಸಲ್ಪಡಬೇಕು ಇತ್ಯಾದಿ, ಇತ್ಯಾದಿ ಮುಂತಾಗಿ ಮುಂದೆ ಸಂಭವಿಸಲಿರುವ ಅನೇಕಾನೇಕ ಸಂಗತಿಗಳ ಬಗ್ಗೆ ಮುಂತಿಳಿಸಿದ್ದಾನೆ. ಯುಗಾಂತ್ಯಕಾಲದಲ್ಲಿ ಜನರು ದೇವರನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಲೋಕದ ಭೋಗಗಳನ್ನು ಪ್ರೀತಿಸುತ್ತಾರೆ ಎಂಬಿತ್ಯಾದಿ ಅನೇಕ ಕೆಟ್ಟ ಸಂಗತಿಗಳು ಸಭೆಯಲ್ಲಿ ಜಾರಿಯಲ್ಲಿರುತ್ತವೆ ಈ ರೀತಿಯಲ್ಲಿ ಅವರು ದೇವಭಕ್ತಿಯ ವೇಷವಿದ್ದು ಅದರ ಬಲವನ್ನು ಹೊಂದಲು ನಿರಾಕರಿಸುತ್ತಾರೆ, ಅವರು ಒಡಂಬಡಿಕೆಯನ್ನು ಮುರಿಯುತ್ತಾರೆ, ಘೋರವಾದ ತೋಳಗಳು (ನಾಶಕರ ಮಹಾ ಟೀಕೆಕಾರರು) ದೇವಜನ ಹಿಂಡನ್ನು ಉಳಿಯಗೊಳಿಸುವುದಿಲ್ಲ ಎಂಬುದನ್ನೂ ಆತನು ತಿಳಿಸಿದ್ದಾನೆ. ನಿಜವಾಗಿಯು ಅಪೋಸ್ತಲನಾದ ಪೌಲನ ಬರಹಗಳು ದರ್ಶನ ಮತ್ತು ಪ್ರಕಟನೆಗಳ ಮೂಲಕ ಪ್ರಕಾಶಿಸಿವೆ. ಇದನ್ನು ಆತನು ಆ ದಿನಗಳ ಭವಿಷ್ಯವಾದಿಯಾಗಿ ಈ ಭವಿಷ್ಯವಾಣಿಯನ್ನು ಸಮರ್ಪಕವಾಗಿ ವಿವರಿಸಲು ಅಸಾಧ್ಯವಾಯಿತು. ಆದರೆ ಅದು ಈಗ ಸಂತರಿಗೆ ಹಳೆ ಒಡಂಬಡಿಕೆಯ ಮಾದರಿ ಮತ್ತು ಪ್ರವಾದನೆಗಳಿಂದ ಸ್ಪಷ್ಟಗೊಂಡಿವೆ ಮತ್ತು ಅಪೋಸ್ತಲರ ಮಾತುಗಳ ದೆಸೆಯಿಂದ ಅರ್ಥೈಸಬಹುದಾಗಿದೆ. ಯಾಕೆಂದರೆ ಅವನ್ನು ಅರ್ಥಮಾಡಿಕೊಳ್ಳುವ "ಉಚಿತವಾದ ಸಮಯವು" ಇದೀಗ ಬಂದದೆ.

ಅಪೋಸ್ತಲನಾದ ಪೇತ್ರನು ಸಹಾ ಒಬ್ಬ ದಿವ್ಯಜ್ಞಾನಿಯಾಗಿ ಸಭೆಯಲ್ಲಿ ಸುಳ್ಳು ಬೋಧಕರು ಬರುವ ಬಗ್ಗೆ ಅವರುಗಳು ಖಂಡನಾರ್ಹ ಪಾಷಾಂಡವಾದಗಳನ್ನು ತರುವ ಬಗ್ಗೆ ಮತ್ತು ಕರ್ತನು ಅವರನ್ನು ತನ್ನ ರಕ್ತದ ಬೆಲೆತೆತ್ತು ಕೊಂಡುಕೊಂಡಿರುವುದನ್ನು ನಿರಾಕರಿಸುವ ಬಗ್ಗೆಯೂ ಸೂಚಿಸುತ್ತಾನೆ. ನಮ್ಮ ಕಾಲದ ಬಗ್ಗೆ ದೃಷ್ಟಿಹಾಯಿಸುತ್ತಾ, ಹೀಯಾಳಿಸಿ ಮಾತನಾಡುವವರು ಕಡೇ ದಿನಗಳಲ್ಲಿ ಬಂದು ಆತನ (ಕ್ರಿಸ್ತನ) 'ಪ್ರತ್ಯಕ್ಷತೆ' ಬಗ್ಗೆ ಮಾಡಿದ ವಾಗ್ದಾನಗಳು ಏನಾದವು ಎಂಬಿತ್ಯಾದಿಯಾಗಿ ಪ್ರಶ್ನಿಸುವ ಬಗ್ಗೆಯೂ ಆತನು ಬರೆಯುತ್ತಾನೆ. ಆತನು "ಕರ್ತನ ದಿನವು ರಾತ್ರಿಯಲ್ಲಿ ಕಳ್ಳನು ಬರುವ ರೀತಿಯಲ್ಲಿ ಬರುತ್ತದೆ" ಎಂಬಿತ್ಯಾದಿಯಾಗಿ ಸಹಾ ಪ್ರವಾದಿಸುತ್ತಾನೆ.

ಅಪೋಸ್ತಲನಾದ ಯಾಕೋಬನು ಅದೇರೀತಿಯಲ್ಲಿ ಈ ಯುಗದ ಅಂತ್ಯದ ಬಗ್ಗೆ ಪ್ರಸ್ತಾಪಿಸುತ್ತಾ "ಧನಿಕರೇ, ಕೇಳಿರಿ; ನಿಮಗೆ ಬರುವ ದುರ್ದಶೆಗಳಿಗಾಗಿ ಗೋಳಾಡಿರಿ . . . ಅಂತ್ಯ ದಿವಸಗಳು ಬಂದರೂ ದ್ರವ್ಯವನ್ನು ಕೂಡಿಸಿ ಇಟ್ಟುಕೊಂಡಿದ್ದೀರಿ"(ಯಾಕೋ.5:1–3)ಎಂದು ಬರೆಯುತ್ತಾನೆ.

ಹೇಗಿದ್ದರೂ ಅಪೋಸ್ತಲನಾದ ಯೋಹಾನನು ಎಲ್ಲಾ ಅಪೋಸ್ತಲರುಗಳಲ್ಲಿ ಓರ್ವ ಅತಿಶ್ರೇಷ್ಠ ದಿವ್ಯಜ್ಞಾನಿಯಾಗಿದ್ದಾನೆ ಆತನ ದರ್ಶನ ಮೂಲಕ ಪ್ರಕಟನೆ ಎಂಬ ಗ್ರಂಥವು ರಚಿಸಲ್ಪಟ್ಟಿದೆ. ಅದರಲ್ಲಿ ಅದ್ಭುತವಾದ ರೀತಿಯಲ್ಲಿ ಭವಿಷ್ಯದ ಸಂಗತಿಗಳು ವರ್ಣಿಸಲ್ಪಟ್ಟಿವೆ.

## ಅಪೋಸ್ತಲರ ನಿಶ್ಚಲ ಗುಣ
## The Apostolic Infallibility

ಈ ಹಿಂದಿನ ಸಂಗತಿಗಳ ಮೂಲಕ ನಮಗೆ ಅಪೋಸ್ತಲರುಗಳು ಹೇಗೆ ಪವಿತ್ರಾತ್ಮನ ಮೂಲಕ ಮಾರ್ಗದರ್ಶನ ಹೊಂದಿದ್ದರೆಂದು ಅವರ ಎಲ್ಲಾ ಸಾರ್ವಜನಿಕ ಹೇಳಿಕೆಗಳೂ ಯಾವರೀತಿಯಲ್ಲಿ ಸಭೆಯ ಎಚ್ಚರಿಕೆಗಾಗಿ ದೈವಪ್ರೇರಿತವಾಗಿದ್ದವೆಂಬುದು ನಮಗೆ ಸಂಪೂರ್ಣವಾಗಿ ಮನದಟ್ಟಾಗಿದೆ. ಇವುಗಳು ಹಿಂದಿನ ಪಂಚಿಕೆಯ (ಯೆಹೂದ್ಯ ಯುಗ) ಪ್ರವಾದಿಗಳ ಹೇಳಿಕೆಗಳಿಗೆ ಯಾವರೀತಿಯಲ್ಲಿಯೂ ಕಡಿಮೆಯಾಗಿ ನಿಶ್ಚಿತವಾದವುಗಳಲ್ಲ. ಅವರ ಸಾಕ್ಷಿಯ ಸತ್ಯತೆಯನ್ನು ನಿಶ್ಚಿತವಾಗಿ ಅನುಭವಿಸುವಾಗ ಮತ್ತು ಅವರ ಎಲ್ಲಾ ಹೇಳಿಕೆಗಳೂ ದೈವ ಸಮ್ಮತಿಯುಳ್ಳವುಗಳಾಗಿತ್ತೆಂದು ತಿಳಿಯುವಾಗ ನಾವು ಹೊಸ ಒಡಂಬಡಿಕೆಯಲ್ಲಿ ಹೇಳಿರುವ ಐದು ವಿವಿಧ ಪರಿಸ್ಥಿತಿಗಳ ಬಗ್ಗೆ ಸೂಕ್ಷ್ಮವಾಗಿ ಪರೀಕ್ಷಿಸುವುದು ಒಳಿತು. ಇವುಗಳು ಸಾಮಾನ್ಯವಾಗಿ ಅಪೋಸ್ತಲರುಗಳು ತಮ್ಮ ಬೋಧನೆಗಳಲ್ಲಿ ತಪ್ಪು ಮಾಡಲಿಲ್ಲವೆಂಬ ಭಾವನೆಗಳನ್ನು ವಿರೋಧಿಸುತ್ತವೆ. ಇವುಗಳನ್ನು ನಾವು ಬೇರೆ ಬೇರೆಯಾಗಿ ಪರಿಶೀಲಿಸೋಣ :

(1) ಕರ್ತನು ಕ್ರೂಜಿತನಾಗುವ ಸ್ವಲ್ಪ ಮುನ್ನ ಪೇತ್ರನು ಆತನನ್ನು ನಿರಾಕರಿಸಿದ್ದು. ಪೇತ್ರನು ಇಲ್ಲಿ ಹಠಾತ್ತಾಗಿ ಒಂದು ಕಠಿಣವಾದ ತಪ್ಪನ್ನು ಮಾಡಿದನು ಎಂಬ ಬಗ್ಗೆ ಯಾವುದೇ ತಕರಾರಿಲ್ಲ. ಇದಕ್ಕಾಗಿ ಆತನು ನಂತರದಲ್ಲಿ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಟ್ಟನು. ಈ ಅಪರಾಧವು ಆತನು ಅಪೋಸ್ತಲನಾಗಿ ಆಯ್ಕೆಗೊಂಡ ಬಳಿಕ ನೆರವೇರಿತಾದರೂ ಅದು ಆತನು ಪಂಚಾಶತ್ತಮ ದಿನದಂದು ಪವಿತ್ರಾತ್ಮನಿಂದ ಅಭಿಷಕ್ತನಾಗುವ ಮೊದಲು ಅಂದರೆ ಆತನು ಸಂಪೂರ್ಣವಾದ ಅರ್ಥದಲ್ಲಿ ಅಪೋಸ್ತಲನೆಂದು ದೈವಿಕ ಸಂಪನ್ನತೆಯನ್ನು ಹೊಂದುವ ಮೊದಲು ನಡೆದದ್ದೆಂಬುದನ್ನು ನಾವು ಮರೆಯಬಾರದು. ಇದಕ್ಕಿಂತ ಹೆಚ್ಚಾಗಿ ನಾವು ಅಪೋಸ್ತಲರ ಬಗ್ಗೆ ಬಯಸುತ್ತಿರುವ ದಿಟ್ಟತನವು ಅವರ ಸಾರ್ವಜನಿಕ ಬೋಧನೆ ಮತ್ತು ಬರಹಗಳ ಬಗ್ಗೆಯೇ ಹೊರತು ಅವರ ಜೀವನದ ಎಲ್ಲಾ ನಿಖರವಾದ ಘಟನೆಗಳ ಬಗ್ಗೆ ಅಲ್ಲ. ಯಾಕೆಂದರೆ ಇವುಗಳೆಲ್ಲವೂ ನಿಸ್ಸಂದೇಹವಾಗಿ ಅವರ ಮಣ್ಣಿನ ಘಟವೆಂಬ ಐಹಿಕತೆಯ ದೋಷದಿಂದಾಗಿ ಉಂಟಾದವುಗಳು. ಈ ರೀತಿಯಲ್ಲಿ ಆದಾಮನ ಎಲ್ಲಾ ಸಂತಾನದವರೂ ಸೋತುಹೋಗಿದ್ದಾರೆ. ಅಪೋಸ್ತಲನು ಹೇಳುವಂತೆ "ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು" (2ಕೊರಿ.4:7). ಈ ಮಾತುಗಳನ್ನು ಆತನು ಸ್ಪಷ್ಟವಾಗಿ ತನಗೂ ಮತ್ತು ಇತರ ಅಪೋಸ್ತಲರಿಗೂ ಹಾಗೂ ಪವಿತ್ರಾತ್ಮನನ್ನು ಹೊಂದಿದ ಸಭೆಯ ಎಲ್ಲರಿಗೂ ಅನ್ವಯಿಸಿದ್ದಾನೆ. ನಮ್ಮ ಒಡೆಯನ ಮಹಾ ದೋಷಪರಿಹಾರಕ ಕಾರ್ಯದಲ್ಲಿ ವ್ಯಕ್ತಿಗಳಾಗಿ ನಮ್ಮ ವೈಯಕ್ತಿಕ ಪಾಲು ಈ ಐಹಿಕ ದೋಷಗಳನ್ನೊಳಗೊಂಡಿದೆ ಮತ್ತು ಇವುಗಳು ನೂತನ ಸೃಷ್ಟಿಗಳಾಗುವ ನಮ್ಮ ಬಯಕೆಗೆ ವಿರೋಧವಾಗಿವೆ.

ಕರ್ತನ ಹಾಗೂ ಸಭೆಯ ಸೇವೆಗೆ ಅಪೋಸ್ತೋಲಿಕರ ಧಾರ್ಮಿಕ ಉದ್ಯೋಗ ಸ್ಥಾನವು ಮಾಂಸಿಕ (ದೈಹಿಕ) ಬಲಹೀನತೆಗಿಂತ ಕೇವಲ ವ್ಯತ್ಯಾಸವುಳ್ಳದ್ದಾಗಿದೆ."ನಾವೂ ಮನುಷ್ಯರು, ನಿಮ್ಮಂಥ ಸ್ವಭಾವವುಳ್ಳವರು" (ಅ.ಕೃ:14:15) ಎಂದು ಅವರೇ ಒಪ್ಪಿಕೊಂಡಿರುವಾಗ ಅದು ಅವರಿಗೆ ಅನುಗ್ರಹವಾಗಿರುವುದು ಅವರ ಮಾನವ ಸಮರ್ಪಕತೆಯ ದೆಸೆಯಿಂದಲ್ಲ. ಈ ಅಧಿಕಾರಸ್ಥಾನವು ಈ ಮರ್ತ್ಯ ಶರೀರಕ್ಕೆ ನೀತಿನಿರ್ಣಯವನ್ನಾಗಲೀ, ಸಮರ್ಪಕತೆಯನ್ನಾಗಲೀ ತರಲಾರದು. ಆದರೆ ಈ ದೆಸೆಯಲ್ಲಿ ನಡೆಯುವಂತೆ ಕೇವಲ ನೂತನ ಮನಸ್ಸು ಮತ್ತು ಪವಿತ್ರಾತ್ಮನಿಗೆ ಎಡೆಮಾಡಿಕೊಡಬಹುದು. ಇದು ಅವರ ಅಲೋಚನೆ ಮತ್ತು ಕ್ರಿಯೆಗಳನ್ನು ಸಮರ್ಪಕಗೊಳಿಸಲಿಲ್ಲ. ಆದರೆ, ಈ ಹನ್ನೆರಡು ಮಂದಿಯ ಸಾರ್ವಜನಿಕ ಬೋಧನೆಗಳು ಕರ್ತನ ಮಾತುಗಳಂತೆ ಖಾತ್ರಿಯುಳ್ಳದ್ದಾಗುವಂತೆ ಅವರ ಅಲೋಚನೆ ಮತ್ತು ಕ್ರಿಯೆಗಳನ್ನು ತಿದ್ದಿತು. ಇಂಥಹ ತಪ್ಪೇ ಮಾಡದಂತಹ ಗುಣ (Infallibility) ಪೋಪರುಗಳಲ್ಲಿಯೂ ಇದೆ ಎಂಬದಾಗಿ ಸಾಧಿಸುತ್ತಾರೆ. ಪೋಪನು ('ex cathedra') ಅಧಿಕಾರಿಯಂತೆ ಮಾತನಾಡುವಾಗ ದೇವರ ಮೇಲ್ವಿಚಾರಿಕೆಯಿಂದಾಗಿ ಆತನು ತಪ್ಪು ಮಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂತಲೂ ಹೇಳುತ್ತಾರೆ. ಪೋಪ್‌ಗಳು ಈ ರೀತಿ ತಪ್ಪು ಮಾಡದವರು ಎಂಬದನ್ನು ಆಧಾರವಾಗಿಟ್ಟುಕೊಂಡು ಅವರುಗಳೂ ಕೂಡ ಅಪೋಸ್ತಲರುಗಳು ಎಂಬದಾಗಿ ಹಕ್ಕಿನಿಂದ ಹೇಳುತ್ತಾರೆ. "ಯಜ್ಞದ ಕುರಿಯಾದಾತನ ಹನ್ನೆರಡು ಮಂದಿ ಅಪೋಸ್ತಲರು" ಎಂಬ ದೈವೋಕ್ತಿಯನ್ನು ಕಡೆಗಣಿಸಿ ತಪ್ಪು ಮಾಡುವವರಾಗಿದ್ದಾರೆ

(2) ಒಂದು ಸಂದರ್ಭದಲ್ಲಿ ಪೇತ್ರನು ಎರಡು ವಂಚನೆಯ ವ್ಯವಹಾರಮಾಡಿ ದೋಷಿಯಂತೆ ಕಂಡು ಬರುತ್ತಾನೆ (ಗಲಾತ್ಯ 2:11–13). ಅಪೊಸ್ತಲರು ಸಹಾ ತಪ್ಪುಮಾಡದವರಲ್ಲ ಎಂದು ರುಜುವಾತು ಪಡಿಸಲು ಇದನ್ನು ಸೂಚಿಸುವುದುಂಟು. ಅಪೋಸ್ತಲರು ಸಹಾ ಇದನ್ನು ಒಪ್ಪಿಕೊಂಡಿದ್ದಾರೆಂದು ನಾವು ತಿಳಿಯುತ್ತೇವೆ (ಅ,ಕೃ. 14:15). ಆದರೆ ಈ ಮಾನವ ಸಹಜ ದುರ್ಬಲತೆಯು ಅವರ ಕಾರ್ಯಗಳನ್ನಾಗಲೀ, ಉಪಯುಕ್ತತೆಯನ್ನಾಗಲೀ ಹಾನಿಗೊಳಿಸುವುದಿಲ್ಲ. ಅವರು ಸುವಾರ್ತೆಯನ್ನು ಪರಲೋಕದಿಂದ ಇಳಿದು ಬಂದ ಪವಿತ್ರಾತ್ಮನ ಸಹಾಯದಿಂದ ಸಾರುವವರಾಗಿದ್ದರು (1ಪೇತ್ರ1:12; ಗಲಾ.1:11,12). ಮಾನುಷ್ಯ ಜ್ಞಾನದಿಂದಲ್ಲ ಮೇಲಣಿನಿಂದ ಬರುವ ಜ್ಞಾನದಿಂದಲೇ (1 ಕೊರಿ.2:5–16). ಪೇತ್ರನ ಈ ತಪ್ಪನ್ನು ದೇವರು ಅಪೋಸ್ತಲನಾದ ಪೌಲನ ಮೂಲಕ ತಡವಿಲ್ಲದೆ ಸರಿಪಡಿಸಿದನು. ಆತನು ಸುವಾರ್ತೆಯ ಸತ್ಯಾರ್ಥದ ಪ್ರಕಾರ ನೆಟ್ಟಗೆ ನಡೆಯುತ್ತಿಲ್ಲವೆಂದು ಕಂಡುಬಂದಾಗ ಪೌಲನು ಎಲ್ಲರ ಮುಂದೆ ಆತನನ್ನು ಸರಿಪಡಿಸಿದನು (ಗಲಾತ್ಯ 2: 14 ರಿಂದ ಮುಂದಕ್ಕೆ ಓದಿರಿ). ಪೇತ್ರನು ಇದನ್ನು ಸರಿಯಾದ ರೀತಿಯಲ್ಲಿ ಅಂಗೀಕರಿಸಿಕೊಂಡು ಯೆಹೂದ್ಯರ ಬಗ್ಗೆ ಇದ್ದ ತನ್ನ

ಬಲಹೀನತೆಯನ್ನು ಸರಿಪಡಿಸಿಕೊಂಡನು. ಇದನ್ನು ನಾವು ಆತನ ಎರಡು ಪತ್ರಿಕೆಗಳಲ್ಲಿ ಕಾಣಬಹುದು. ಅವುಗಳಲ್ಲಿ ಈ ವಿಷಯವಾದ ಯಾವ ಚಂಚಲತೆಯಾಗಲೀ, ಕ್ರಿಸ್ತನನ್ನು ಅಂಗೀಕರಿಸುವ ಪ್ರವಾಣಿಕತೆಯಲ್ಲಿ ಯಾವುದೇ ಕೊರತೆಯಾಗಲೀ ಕಂಡು ಬರುವುದಿಲ್ಲ.

(3) ಅಪೋಸ್ತಲರು ಕ್ರಿಸ್ತನ ಎರಡನೆಯ ಆಗಮನವನ್ನು ಬಹುಬೇಗ ಅಂದರೆ ಬಹುಶಃ ಅವರ ಜೀವನ ಕಾಲದಲ್ಲಿಯೇ ನಿರೀಕ್ಷಿಸಿದ್ದರು ಎಂದು ಹೇಳಲಾಗಿದೆ. ಇದರಲ್ಲಿ ಅವರು ತತ್ವಸಂಬಂಧವಾಗಿ ಮುಗ್ಗರಸಿ ತಮ್ಮ ಬೋಧನೆಗಳು ನಂಬಲರ್ಹವಲ್ಲವೆಂಬಂತೆ ತೋರಿಸಿಕೊಟ್ಟರು. ಇದಕ್ಕೆ ಉತ್ತರವಾಗಿ ನಾವು ಹೇಳುವುದೇನೆಂದರೆ ನಮ್ಮ ಕರ್ತನು ಅವರನ್ನು ಆತನ ಎರಡನೆಯ ಬರೋಣದ ಮತ್ತು ದೇವರ ರಾಜ್ಯ ಸ್ಥಾಪನೆಯ ಬಗ್ಗೆ ಅನಿಶ್ಚಿತವಾದ ರೀತಿಯಲ್ಲಿ ಬಿಟ್ಟುಹೋದನು. ಯಾಕೆಂದರೆ, ಆ ಘಟನೆಯು ಸಂಭವಿಸುವಾಗ ಅವರು ಸಾಮಾನ್ಯವಾದ ಲೋಕದವರಂತೆ ಅಂಧಕಾರದಲ್ಲಿರದೆ ಆ ಬಗ್ಗೆ ತಿಳಿದವರಾಗಿರಲಿ ಎಂಬುದರ ಸಲುವಾಗಿ ಆತನು ಅವರಿಗೆ "ಕಾದುಕೊಂಡಿರ್ರಿ' ಎಂದು ಮಾತ್ರವೇ ಹೇಳಿದ್ದನು. ಕರ್ತನ ಪುನರುತ್ಥಾನದ ನಂತರ ಈ ಬಗ್ಗೆ ಅವರ ವಿಚಾರಣೆಗೆ ಸಿಕ್ಕ ಉತ್ತರ "ದೇವರ ಸ್ವಂತ ಅಧಿಕಾರವ್ಯಾಪ್ತಿಯಲ್ಲಿರುವ ಸಮಯ ಮತ್ತು ಕಾಲಗಳ ಬಗ್ಗೆ ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ" ಎಂಬುದು. ಹಾಗಾದರೆ, ಕರ್ತನು ಈ ಕಾಲವು ದೈವಿಕ ರಹಸ್ಯವಾಗಿದೆ ಎಂದಿರುವುದರ ಬಗ್ಗೆ ನಾವು ಅಪೋಸ್ತಲರನ್ನು ದೋಷಿಗಳನ್ನಾಗಿ ಮಾಡಲಾದೀತೋ? ಖಂಡಿತವಾಗಿಯೂ ಇಲ್ಲ. ಮುಂಬರುವ ಸಂಗತಿಗಳ ಬಗ್ಗೆ ಪವಿತ್ರಾತ್ಮನ ಮಾರ್ಗದರ್ಶನದಂತೆ ಅಪೋಸ್ತಲರು ದ್ವಿತೀಯಾಗಮನದ ಬಗ್ಗೆ ಹೇಳಿಕೆ ನೀಡುವಲ್ಲಿ ಬಹಳ ಎಚ್ಚರಿಕೆಯಿಂದಿದ್ದರು ಎಂಬುದನ್ನು ನಾವು ಕಾಣುತ್ತೇವೆ. ಈ ಕಾರಣದಿಂದ ಅವರು ಈ ಸಂಗತಿಗಳು ತಮ್ಮ ಜೀವಿತಕಾಲದಲ್ಲಿಯೇ ನೆರವೇರುತ್ತದೆಂದು ನಿರೀಕ್ಷಿಸುವುದು ವ್ಯತಿರಿಕ್ತವಾಗುತ್ತದೆ.

ದೃಷ್ಟಾಂತವಾಗಿ, ತನ್ನ ಸಾಕ್ಷಿಯು ತನ್ನ ಮರಣಾ ನಂತರದಲ್ಲಿಯೂ ಜ್ಞಾಪಕ ಮಾಡಿಕೊಳ್ಳಲು ಸಾಧ್ಯವಾಗುವಂತೆ ಪ್ರಯಾಸಪಡುತ್ತೇನೆ (2ಪೇತ್ರ 1:15) ಎಂಬ ಅಪೋಸ್ತಲನಾದ ಪೇತ್ರನ ನಿರ್ಧಿಷ್ಟವಾದ ಮಾತುಗಳು ಆತನು ತಾನು ದೇವರ ರಾಜ್ಯ ಸ್ಥಾಪನೆಯಾಗುವವರೆಗೆ ಜೀವದಿಂದಿರುವನೆಂದು ನಿರೀಕ್ಷಿಸಲಿಲ್ಲವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಅಪೋಸ್ತಲನಾದ ಪೌಲನು "ಕಾಲವು ಕಡಿಮೆಯಾಗಿದೆ' ಎಂದು ಹೇಳಿದಾಗ ಎಷ್ಟು ಕಡಿಮೆ ಎಂದು ನೆಪಮಾತ್ರಕ್ಕೆ ಹೇಳಲಿಲ್ಲ. ಕಾಲಾವಧಿಯಲ್ಲಿ ಏಳನೆಯ ದಿನದಲ್ಲಿ ರಾಜ್ಯ ಸ್ಥಾಪನೆ ಯಾಗುತ್ತದೆಂಬ ದೃಷ್ಟಿಕೋನದಲ್ಲಿ ನೋಡುವಾಗ, ಅದನ್ನು ಕಾಯುವುದರಲ್ಲಿ ಆರನೆಯ ನಾಲ್ಕು ಭಾಗ ಈಗಾಗಲೇ ಸಂದಿದೆ. ಬಹಳಷ್ಟು ಕಾಲ ಮುಗಿದಿದೆ. ಇದೇ ರೀತಿಯಲ್ಲಿ ನಾವು ಈಗ ಈ ಲೋಕದ ಸಂಗತಿಗಳ ಬಗ್ಗೆಯೂ ಮಾತನಾಡುತ್ತೇವೆ. ಗುರುವಾರ ಬಂದ ಕೂಡಲೇ ನಾವು ವಾರವು ಶೀಘ್ರದಲ್ಲಿ ಮುಗಿದು ಹೋಗಲಿದೆ ಎಂದೆನ್ನುತ್ತೇವೆ. ಪೌಲನು ಸಹಾ ತನ್ನ ನಿರ್ಗಮನದ ಬಗ್ಗೆ, ತನ್ನ ಜೀವವನ್ನು ತೊರೆಯುವ ಸಿದ್ಧತೆಯ ಬಗ್ಗೆ ಮತ್ತು ಹಾಗೆ ಮಾಡುವ ತನ್ನ ಆಯ್ಕೆಯ ಬಗ್ಗೆ ಮಾತನಾಡುತ್ತಾನೆ. ಕರ್ತನ ದಿನವು ಕಳ್ಳನು ರಾತ್ರಿಯಲ್ಲಿ ಅನಿರೀಕ್ಷಿತವಾಗಿ ಬರುವಂತೆಯೇ ಬರಲಿರುವುದು ಎಂದು ಆತನು ಹೇಳುತ್ತಾನೆ. ಈ ವಿಷಯದಲ್ಲಿದ್ದ ಕೆಲವು ತಪ್ಪು ಅಭಿಪ್ರಾಯಗಳನ್ನು ಆತನು ಸರಿಪಡಿಸುತ್ತಾ – ಕರ್ತನ ದಿನವು ಈಗಲೇ ಹತ್ತಿರವಾಯಿತೆಂಬದಾಗಿ ದೇವರಾತ್ಮ ಪ್ರೇರಿತವಾದ ನುಡಿ ಇದೆ ಎಂದಾಗಲೀ ಪೌಲನು ಹಾಗೆ ಹೇಳಿದನೆಂದಾಗಲೀ, ಪೌಲನು ಹಾಗೆ ಬರೆದನೆಂದಾಗಲೀ ಯಾರಾದರೂ ಹೇಳಿದರೂ ನೀವು ಬೇಗನೆ ಬುದ್ದಿಗೆಟ್ಟು ಚಂಚಲರಾಗಿ ಕಳವಳಪಡಬೇಡಿರಿ ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ..." (2 ಥೆಸ.:2–3), ಎಂದು ಅನೇಕ ರೀತಿಯಲ್ಲಿ ಎಚ್ಚರಿಸುತ್ತಾ" ನಾನು ನಿಮ್ಮ ಸಂಗಡ ಇದ್ದಾಗ ಈ ಸಂಗತಿಗಳನ್ನು ಹೇಳಿದ್ದು ಜ್ಞಾಪಕವಿಲ್ಲವೋ? ಇದಲ್ಲದೆ ಆ ಮನುಷ್ಯನು ನೇಮಕವಾದ ಸಮಯದಲ್ಲೇ ಹೊರತು ಬೈಲಿಗೆ ಬರುವುದಕ್ಕೆ ಏನು ಅಡ್ಡಿಮಾಡುತ್ತದೋ ಅದು ನಿಮಗೆ ತಿಳಿದೇ ಅದೆ" (ವ : 5) ಎಂದು ಹೇಳುತ್ತಾನೆ.

(4) "ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ – ನೀವು ಸುನ್ನತಿ ಮಾಡಿಸಿಕೊಂಡರೆ ನಿಮಗೆ ಏನೂ ಪ್ರಯೋಜನವಿಲ್ಲ " (ಗಲಾತ್ಯ 5:2) ಎಂದು ಹೇಳಿದ ಪೌಲನೇ ತಿಮೋಥೆಗೆ ಸುನ್ನತಿ ಮಾಡಿಸಿದನು (ಅ.ಕೃ. 16:3) ಎಂಬ ಬಗ್ಗೆ ವಿರೋಧವಿದೆ. ಆತನು ಹೀಗೆ ಮಾಡಿ ತಪ್ಪಾದ ಬೋಧನೆಯನ್ನು ನೀಡಿ ತನ್ನ ಸಾಕ್ಷಿಗೆ ವಿರೋಧವಾಗಿ ನಡೆದಂತಾಗಲಿಲ್ಲವೋ? ಎಂದು ನಮ್ಮನ್ನು ಪ್ರಶ್ನಿಸುತ್ತಾರೆ. ಅದಕ್ಕೆ ನಾವು ಉತ್ತರಿಸುತ್ತಾ "ಇಲ್ಲ, ತಿಮೋಥೆಯು ಒಬ್ಬ ಯೆಹೂದ್ಯನಾಗಿದ್ದನು, ಯಾಕೆಂದರೆ ಆತನ ತಾಯಿ ಓರ್ವ ಯೆಹೂದ್ಯಳು (ಅ.ಕೃ. 16:1) ಯೆಹೂದ್ಯರಲ್ಲಿ ಸುನ್ನತಿಯು ಒಂದು ರಾಷ್ಟ್ರೀಯ ಸಂಪ್ರದಾಯವಾಗಿತ್ತು. ಇದು ಮೋಶೆಯ ಧರ್ಮಶಾಸ್ತ್ರದ ಮೊದಲೇ ಪ್ರಾರಂಭವಾಗಿತ್ತು ಮತ್ತು ಕ್ರಿಸ್ತನ ನಂತರವೂ ಮುಂದುವರೆಯಿತು. ಆತನು ಈ ಒಡಂಬಡಿಕೆಯನ್ನು ತನ್ನ ಶಿಲುಬೆಗೆ ಜಡಿಯುವುದರ ಮೂಲಕ ಸಮಾಪ್ತಿಗೊಳಿಸಿದನು ಸುನ್ನತಿಯು ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವು ನೀಡುವ 430 ವರ್ಷಗಳ ಹಿಂದೆಯೇ ಸಿನಾಯ್ ಬೆಟ್ಟದಲ್ಲಿ ಒಂದು ಜನಾಂಗವಾಗಿ ಅಬ್ರಹಾಮನಿಗೆ ನೀಡಲ್ಪಟ್ಟಿತ್ತು. ಈ ಕಾರಣದಿಂದ ಪೇತ್ರನು ಸುನ್ನತಿಯವರಾದ (ಯೆಹೂದ್ಯರಿಗೆ) ನೇಮಿಸಲ್ಪಟ್ಟನು ಮತ್ತು ಪೌಲನು ಸುನ್ನತಿಯಿಲ್ಲದವರ ಪರವಾಗಿ(ಅನ್ಯರಿಗೆ) ನೇಮಿಸಲ್ಪಟ್ಟನು . (ಗಲಾ. 2:7,8).

ಕೆಲವು ಸುಳ್ಳು ಬೋಧಕರು ಈ ಅನ್ಯಜರಲ್ಲಿ ಕ್ರಿಸ್ತ ಮತ್ತು ಧರ್ಮಶಾಸ್ತ್ರ ಎರಡನ್ನೂ ಅನುಸರಿಸಬೇಕೆಂದು ಹೇಳಿ ಗಲಿಬಿಲಿ ಯನ್ನುಂಟು ಮಾಡಿ ನೂತನ ಒಡಂಬಡಿಕೆಯನ್ನು ನಿರ್ಲಕ್ಷಿಸುವಂತೆ ಮಾಡಿದ್ದರಿಂದ ಗಲಾತ್ಯ 5:2 ರ ಪೌಲನ ವಾದವು ಯೆಹೂದ್ಯರಿಗಾಗಿರದೆ ಅನ್ಯಜರಿಗಾಗಿತ್ತು. ಅಪೊಸ್ತಲನು ಇಲ್ಲಿ ಅವರಿಗೆ ಸುನ್ನತಿ ಮಾಡಿಸಿಕೊಳ್ಳುವುದೆಂದರೆ (ಅಂತಹ ಯಾವುದೇ ಕಾರಣಕ್ಕಾಗಿ) ಕೃಪೆಯ ಒಡಂಬಡಿಕೆಯನ್ನು ತೊರೆಯುವುದು ಮತ್ತು ಆ ರೀತಿಯಲ್ಲಿ ಕ್ರಿಸ್ತನ ಎಲ್ಲಾ ಕಾರ್ಯಗಳನ್ನೂ ತ್ಯಜಿಸುವುದು. ಯೆಹೂದ್ಯರು ತಮ್ಮ ರಾಷ್ಟ್ರೀಯ ಸಂಪ್ರದಾಯವಾದ ಸುನ್ನತಿಯನ್ನು

ಮುಂದುವರಿಸುವುದರಲ್ಲಿ ಆತನು ಯಾವ ಅಭ್ಯಂತರವನ್ನೂ ಕಾಣಲಿಲ್ಲವೆಂಬುದು "ದೇವರು ಕರೆದ ಕಾಲದಲ್ಲಿ ಯಾವನಾದರೂ ಸುನ್ನತಿಯುಳ್ಳವನಾಗಿದ್ದನೋ ಅವನು ಸುನ್ನತಿಯಿಲ್ಲದವನಂತಾಗಬಾರದು" (1ಕೊರಿ.7:18) ಎಂಬ ಆತನ ಮಾತುಗಳಲ್ಲಿಯೂ, ತಿಮೋಥೆಯೊಡನೆ ಮಾಡಿದ ನಡವಳಿಕೆಯಲ್ಲಿ ಕಾಣಬಹುದು. ತಿಮೋಥೆ ಅಥವಾ ಬೇರೆ ಯಾವ ಯೆಹೂದ್ಯನಿಗೂ ಸುನ್ನತಿಯ ಅವಶ್ಯಕತೆ ಇಲ್ಲ; ಆದರೆ ಅದು ಅಸಮರ್ಪಕವೂ ಅಲ್ಲ; ಆತನು ಯೆಹೂದ್ಯರೊಡನೆ ಗಣನೀಯವಾಗಿ ಹೋಗುವವನಾದುದರಿಂದ ಅವರ ವಿಶ್ವಾಸ ಗಳಿಸುವಲ್ಲಿ ಇದು ಆತನಿಗೆ ಪ್ರಯೋಜನಕಾರಿಯಾಗುತ್ತಿತ್ತು. ಆದರೆ ತೀತನು ಗ್ರೀಕ್ ವಂಶದವನು ಈ ವಿಷಯದಲ್ಲಿ ಬಲಾತ್ಕರಿಸಲ್ಪಟ್ಟನೆಂದು ಕೆಲವರು ಹೇಳಿದಾಗ ಈ ಪ್ರಸ್ತಾಪದ ಬಗ್ಗೆ ಪೌಲನ ನಿಶ್ಚಲವಾದ ಪ್ರತಿಭಟನೆಯನ್ನು ನಾವು ಕಾಣುತ್ತೇವೆ (ಗಲಾ. 2:3–5 ನೋಡಿರಿ).

(5) ಈ ವಿಷಯದಲ್ಲಿ ಪೌಲನ ನಡವಳಿಕೆಯ ಬಗ್ಗೆ ಅ.ಕೃ. 21:20–26 ರಲ್ಲಿ ದಾಖಲೆಯಾಗಿದೆ. ಇದು ಸತ್ಯದ ಬಗ್ಗೆ ಆತನ ಸ್ವಂತ ಬೋಧನೆಗಳಿಗೆ ವಿರುದ್ಧವಾಗಿದೆ ಮತ್ತು ಸಿದ್ಧಾಂತಗಳು ಮತ್ತು ಅದರ ಆಚರಣೆಗಳ ಬಗ್ಗೆ ಇವು ತಪ್ಪುಗಳಾಗಿವೆ ಎಂಬ ಆಕ್ಷೇಪಣೆ ಇದೆ. ಈ ಸಂಬಂಧದಲ್ಲಿ ಪೌಲನು ತಪ್ಪು ಮಾಡಿದ್ದರಿಂದ ಆತನು ಸೆರೆಮನೆಯ ಘೋರ ಶಿಕ್ಷೆಗಳನ್ನು ಅನುಭವಿಸಬೇಕಾಯಿತು ಮತ್ತು ಅಂತ್ಯದಲ್ಲಿ ಆತನನ್ನು ರೋಮಾಪುರಕ್ಕೆ ಕಳುಹಿಸಲಾಯಿತು ಎಂಬ ಹೇಳಿಕೆ ಇದೆ. ಆದರೆ ಇಂತಹ ದೃಷ್ಟಿಕೋನವು ದೇವರ ವಾಕ್ಯದ ಸತ್ಯದಲ್ಲಿ ತೋರಿಬರುವುದಿಲ್ಲ. ಈ ಸಮಗ್ರ ಅನುಭವದಲ್ಲಿ ಪೌಲನು ಇತರ ಅಪೋಸ್ತಲರ ಅನುಕಂಪ ಮತ್ತು ಒಪ್ಪಿಗೆಯನ್ನು ಮತ್ತು ಎಲ್ಲಾದಕ್ಕಿಂತ ಹೆಚ್ಚಾಗಿ ದೇವರ ಮುಂದುವರೆದ ಕೃಪೆಯನ್ನು ಹೊಂದಿದ್ದನೆಂದು ದಾಖಲೆಗಳಲ್ಲಿ ತೋರಿಬರುತ್ತದೆ. ಆತನ ನಡುವಳಿಕೆಗಳು ಇತರ ಅಪೋಸ್ತಲರ ವಿನಂತಿಗನುಸಾರವಾಗಿತ್ತು. ಆತನು ಯೆರೂಸಲೇಮಿಗೆ ಹೋಗುವ ಮೊದಲು ಅಲ್ಲಿ ಆತನ ಬಂಧನ ಮತ್ತು ಬೇಡಿ ಹಾಕಿಸಿಕೊಳ್ಳುವುದರ ಬಗ್ಗೆ ಪ್ರವಾದನೆಯ ಮೂಲಕ ಸಾಕ್ಷಿ ನುಡಿಯಲಾಗಿತ್ತು (ಅ.ಕೃ. 21:10–14 ನೋಡಿರಿ). ಇದು ಈ ಮುಂಚಿತವಾಗಿ ತಿಳಿಸಲ್ಪಟ್ಟಿದ್ದ ಎಲ್ಲಾ ವಿರೋಧಗಳ ಹೊರತಾಗಿಯೂ ಆತನ ಕರ್ತವ್ಯದ ಬಗ್ಗೆ ನಿಶ್ಚಿತಾಭಿಪ್ರಾಯದ ವಿಧೇಯತೆಯ ಸಾಹಸಕ್ಕನುಸಾರವಾಗಿತ್ತು. ಆತನ ಕಷ್ಟಗಳ ಮಧ್ಯದಲ್ಲಿಯೇ ಕರ್ತನು ಪೌಲನ ಬಳಿ ನಿಂತು "ಪೌಲನೇ, ಧೈರ್ಯದಿಂದಿರು, ನೀನು ಯೆರೂಸಲೇಮಿನಲ್ಲಿ ನನ್ನ ಸಂಗತಿಯನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿ ಹೇಳಬೇಕಾಗುವುದು" (ಅ.ಕೃ 23:11) ಎಂಬ ಅಭಯ ವಚನವನ್ನೂ ನಂತರದಲ್ಲಿ ಒಬ್ಬ ದೇವದೂತನು ಆತನ ಬಳಿಯಲ್ಲಿ ನಿಂತು "ಪೌಲನೇ ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು; ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣ ಮಾಡುವವರೆಲ್ಲರ ಪ್ರಾಣವನ್ನು ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆ" (ಅ.ಕೃ. 27:23, 24) ಎಂಬ ಮಾತುಗಳನ್ನು ನಾವು ನೋಡುತ್ತೇವೆ.

ಈ ಸತ್ಯದ ದೆಸೆಯಿಂದ ನಾವು ಪೌಲನ ಏಕಪ್ರಕಾರವಾದ ಧೈರ್ಯ ಮತ್ತು ಅಮೂಲ್ಯವಾದ ನಡವಳಿಕೆಯನ್ನು ಆತನ ಪತ್ರವ್ಯವಹಾರಗಳಲ್ಲಿ ಕಾಣಬಹುದು. ಅವು ಆತನ ಕಾರ್ಯಗಳ ಬಗ್ಗೆ ಅತ್ಯುನ್ನತ ಮಟ್ಟದ ಸದಭಿಪ್ರಾಯವನ್ನುಂಟುಮಾಡುತ್ತವೆ. ದೇವರು ಇದರ ಬಗ್ಗೆ ದೋಷಿಸದೆ ಒಪ್ಪಿಕೊಳ್ಳುತ್ತಾನೆ. ಹಾಗಾದರೆ. ಅ.ಕೃ. 21:21–27ರಲ್ಲಿನ ಸಂಗತಿಗಳನ್ನು ಪರೀಕ್ಷಿಸುವಾಗ 21ನೇ ವಚನದಲ್ಲಿ ಹೇಳುವಂತೆ ಪೌಲನು ಪರಿವರ್ತನೆಯಾದ ಯೆಹೂದ್ಯರಿಗೆ ಅವರು ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸಬಾರದೆಂದಾಗಲೀ ಅಥವಾ ಆತನು ಮೋಶೆಯ ಧರ್ಮಶಾಸ್ತ್ರವನ್ನು ಪರಿತ್ಯಜಿಸುವಂತೆಯಾಗಲೀ ಹೇಳಲಿಲ್ಲ. ಮೋಶೆಯ ಧರ್ಮಶಾಸ್ತ್ರದ ಹೆಚ್ಚಿನ ಮತ್ತು ಭವ್ಯವಾದ ಸತ್ಯತೆಗಳನ್ನು ಎತ್ತಿಹಿಡಿಯುವುದರ ಮೂಲಕ ಆತನು ಅವನ್ನು ಗೌರವಿಸುತಿದ್ದನು. "ಈ ಧರ್ಮಶಾಸ್ತ್ರವು ನ್ಯಾಯವೂ, ಪವಿತ್ರವೂ, ಒಳ್ಳೆಯದೂ ಆಗಿದೆ" ಎಂದು ಹೇಳುವವನಾಗಿದ್ದು ಇದರ ಮೂಲಕವಾಗಿ ಪಾಪದ ನೀಚತನದ ಬಗ್ಗೆ ತಿಳುವಳಿಕೆಯು ಹೆಚ್ಚಾಗುವುದೆಂದು ಸೂಚಿಸಿದನು. ಈ ಧರ್ಮಶಾಸ್ತ್ರವು ಎಷ್ಟೊಂದು ಭವ್ಯವಾಗಿದೆ ಎಂದರೆ ಯಾವ ಅಸಮರ್ಪಕ ವ್ಯಕ್ತಿಯೂ ಇದಕ್ಕೆ ಪೂರ್ಣವಾಗಿ ವಿಧೇಯನಾಗಲು ಸಾಧ್ಯವಿಲ್ಲ, ಆದರೆ ಕ್ರಿಸ್ತನು ಇದಕ್ಕೆ ಪೂರ್ಣ ವಿಧೇಯನಾಗುವುದರ ಮೂಲಕ ಇದರ ಬಹುಮಾನಗಳನ್ನು ಪಡಕೊಂಡನು ಮತ್ತು ಈಗ ಕೃಪಾ ಒಡಂಬಡಿಕೆಯ ಅಡಿಯಲ್ಲಿ ಈ ಧರ್ಮಶಾಸ್ತ್ರವನ್ನು ಪಾಲಿಸಲಾರದವರ ಸಲುವಾಗಿ ಶಾಶ್ವತವಾದ ಬಲಿದಾನವನ್ನು ತೆತ್ತನು. ಆತನ ಈ ಸಮರ್ಪಕವಾದ ಬಲಿದಾನವು ತಮ್ಮ ಎಲ್ಲಾ ಅಸಮರ್ಪಕತೆ ಯನ್ನು ಮುಚ್ಚಿ ಹಾಕುವುದೆಂದು ವಿಶ್ವಾಸಪೂರ್ವಕವಾಗಿ ಒಪ್ಪಿಕೊಳ್ಳುವುದರ ಮೂಲಕ ಅವರು ನೀತಿಮಾರ್ಗದಲ್ಲಿ ಆತನ ಅನುಯಾಯಿಗಳೂ ಆದರು.

ಯೆಹೂದ್ಯ ಮತಾಚರಣೆಯ ಕೆಲವೊಂದು ಸಮಾರಂಭಗಳು ಅಂದರೆ ಉಪವಾಸ, ಅಮವಾಸ್ಯೆ ಮತ್ತು ಸಬ್ಬತ್ತು ದಿನಾಚರಣೆ ಮತ್ತಿತರ ಅವರ ಹಬ್ಬಗಳು ಸುವಾರ್ತಾ ಯುಗದ ಅತ್ಮೀಕ ಸತ್ಯತೆಯ ಸಂಕೇತಗಳಾಗಿದ್ದವು. ಕೃಪಾ ಒಡಂಬಡಿಕೆಯ ಸುವಾರ್ತೆಯು ಇವನ್ನು ನಿಯಮಿಸುವುದೂ ಇಲ್ಲ ಅಥವಾ ನಿಷೇದಿಸುವುದೂ ಇಲ್ಲವೆಂದು ಅಪೋಸ್ತಲನು ಸ್ಪಷ್ಟವಾಗಿ ತೋರಿಸಿಕೊಡುತ್ತಾನೆ. (ಕರ್ತನ ರಾತ್ರಿ ಭೋಜನ ಮತ್ತು ದೀಕ್ಷಾಸ್ನಾನ ಇವೆರಡು ಮಾತ್ರವೇ ನಮಗೆ ಕೊಡಲ್ಪಟ್ಟಿರುವ ಸಾಂಕೇತಿಕ ರೂಪದ ಆಜ್ಞಾವಿಧಿಗಳು ಮತ್ತು ಹೊಸದಾದವುಗಳು –ಕೊಲೊಸ್ಸೆ 2:16,17 ; ಲೂಕ 22:19; ಮತ್ತಾಯ 28:19)

"ಶುದ್ಧೀಕರಣ" ಎಂಬ ಯೆಹೂದ್ಯ ಸಾಂಕೇತಿಕ ವ್ರತವೊಂದನ್ನು ಪೌಲ ಮತ್ತು ಇತರ ನಾಲ್ಕು ಯೆಹೂದ್ಯರು ಆಚರಿಸಿದ ವಿಷಯದಲ್ಲಿ ನಾವೀಗ ಪರೀಕ್ಷಿಸುತ್ತಿರುವೆವು. ಯೆಹೂದ್ಯರಾಗಿದ್ದರಿಂದ ಕ್ರಿಸ್ತನಲ್ಲಿ ದೇವರಿಗೆ ತಮ್ಮನ್ನು ಅಭಿಷೇಕಿಸಿಕೊಳ್ಳಲು ಮಾತ್ರವಲ್ಲ ಈ ಸಾಂಕೇತಿಕ ಶುದ್ಧೀಕರಣವನ್ನು ಆಚರಿಸುವ ಬಗ್ಗೆ ಅವರಿಗೆ ಹಕ್ಕಿತ್ತು ಮತ್ತು ಇದನ್ನೇ ಅವರು ನೆರವೇರಿಸಿದರು – ಪೌಲನೊಡನಿದ್ದ ಆ ಜನರು ವ್ರತಾಚರಣೆ ಮಾಡಿದ್ದಲ್ಲದೆ ಇದರೊಂದಿಗೆ ದೇವರ ಮತ್ತು ಎಲ್ಲಾ ಜನರ ಮುಂದೆ ತಮ್ಮನ್ನು ತಗ್ಗಿಸಿಕೊಳ್ಳುವಂತೆ ತಮ್ಮ ತಲೆಗಳನ್ನೂ ಬೋಳಿಸಿಕೊಂಡರು. ಈ ಸಾಂಕೇತಿಕ ಸಮಾರಂಭಗಳಿಗೆ ಸ್ವಲ್ಪ ವೆಚ್ಚವಾಯಿತು. ಕಾಣಿಕೆ ಸಮರ್ಪಿಸುವುದರ ಮೂಲಕ ದೇವಾಲಯದ ಈ ಖರ್ಚು ವೆಚ್ಚವನ್ನು ಭರಿಸಿದರು.

ಅಪೋಸ್ತಲನಾದ ಪೌಲನು ಎಂದಿಗೂ ಯೆಹೂದ್ಯರಿಗೆ ಅವರು ಧರ್ಮಶಾಸ್ತ್ರದಿಂದ ಮುಕ್ತರು ಎಂದು ಬೋಧಿಸದೆ ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಧರ್ಮಶಾಸ್ತ್ರವು ಪ್ರತಿಯೊಬ್ಬರೂ ಬದುಕಿರುವವರೆಗೂ ಅವರನ್ನು ಆಳುತ್ತದೆ ಎಂದು ಬೋಧಿಸಿದನು. ಹೇಗಾದರೂ ಆತನು ಅವರಿಗೆ ಒಬ್ಬ ಯೆಹೂದಿಯು ಕ್ರಿಸ್ತನನ್ನು ಅಂಗೀಕರಿಸಿ ಆತನೊಂದಿಗೆ ಸಾಯುವುದಾದರೆ ಅದು ಆ ಯೆಹೂದ್ಯನ ಮೇಲಿರುವ ಧರ್ಮಶಾಸ್ತ್ರದ ಒಡಂಬಡಿಕೆಯನ್ನು ನೆರವೇರಿಸಿದಂತಾಗುತ್ತದೆ ಮತ್ತು ಆತನನ್ನು ಒಬ್ಬ ಸ್ವತಂತ್ರ ವ್ಯಕ್ತಿಯನ್ನಾಗಿ ಮಾಡುತ್ತದೆ (ರೋಮಾ. 7:1–4 ನೋಡಿರಿ) ಎಂದು ಹೇಳಿದನು. ಆದರೆ ಅವನು ಅನ್ಯಜನರಿಂದ ಮತಾಂತರ ಹೊಂದಿದವರಿಗೆ ಅವರು ಎಂದಿಗೂ ಯೆಹೂದ್ಯ ಧರ್ಮಶಾಸ್ತ್ರದ ನಿಯಮಗಳಿಗೆ ಒಳಗಾದವರಲ್ಲ ಮತ್ತು ಅವರು ಅದನ್ನು ಪಾಲಿಸಲು ಪ್ರಯತ್ನಿಸುವುದು ಅವರು ತಮ್ಮ ರಕ್ಷಣೆಗಾಗಿ ಸಂಪೂರ್ಣವಾಗಿ ಕ್ರಿಸ್ತನ ಬಲಿದಾನವನ್ನು ಆತುಕೊಳ್ಳದೆ ಆ ಸಂಕೇತಗಳನ್ನು ನಂಬುತ್ತಾರೆ ಎಂಬ ಅರ್ಥವನ್ನು ಉಂಟುಮಾಡುತ್ತದೆ ಎಂದಿದ್ದಾನೆ. ಇದನ್ನು ಉಳಿದೆಲ್ಲಾ ಅಪೋಸ್ತಲರು ಸಮ್ಮತಿಸಿದ್ದಾರೆ (ಅ.ಕೃ.21:25, 15:20 ಮತ್ತು 23–29)

ನಮ್ಮ ಅಂತ್ಯ ತೀರ್ಮಾನವೇನೆಂದರೆ, ದೇವರು ಈ ಹನ್ನೆರಡು ಅಪೋಸ್ತಲರನ್ನು ತನ್ನ ಸತ್ಯದ ಸಮರ್ಥ ಸೇವಕರುಗಳನ್ನಾಗಿ ಬಹು ಆಶ್ಚರ್ಯಕರವಾದ ರೀತಿಯಲ್ಲಿ ಉಪಯೋಗಿಸಿದನು ಮತ್ತು ಅವರು ಬರೆದ ಪ್ರಸ್ತಾಪಗಳಲ್ಲಿ ದೇವಜನರಿಗೆ ಲಾಭಕರವಾಗುವ ಯಾವುದೊಂದೂ ತಪ್ಪಿಹೋಗದಂತೆ ಅವರಿಗೆ ಉತ್ತಮ ಮಾರ್ಗದರ್ಶನ ನೀಡಿದನು– ಅವರ ಮೂಲ ಬರಹಗಳ ಮಾತುಗಳಲ್ಲಿ ಹೇಳಿರುವಂತೆ ಅಪೋಸ್ತಲರುಗಳ ಗ್ರಹಿಕೆಗೆ ಮೀರಿದ ಜ್ಞಾನವು ಪ್ರಕಟವಾಯಿತು. ನಮ್ಮ ವಿಶ್ವಾಸದ ಈ ನಿಶ್ಚಿತವಾದ ಅಸ್ತಿವಾರಕ್ಕಾಗಿ ದೇವರ ನಾಮಕ್ಕೆ ಸ್ತೋತ್ರವಾಗಲಿ !

## ಅಪೋಸ್ತಲರುಗಳು ದೇವರ ಪಿತ್ರಾರ್ಜಿತ (ಸ್ವಾಸ್ತ್ಯದ) ಪ್ರಭುಗಳಲ್ಲ

### The Apostles Not Lord Of God's Heritage

ಕ್ರೈಸ್ತ ಸಭೆಯಲ್ಲಿ ಅಪೋಸ್ತಲರುಗಳನ್ನು ಯಾವುದೇ ಅರ್ಥದಲ್ಲಿ ಪ್ರಭುಗಳೆಂದು ಗೌರವಿಸಬೇಕೆ ? ಅಥವಾ ಬೇರೆ ಮಾತುಗಳಲ್ಲಿ ನಿಜವಾದ ಪ್ರಭು ಅಥವಾ ಸಭಾ ಶಿರಸ್ಸು ನಿರ್ಗಮಿಸಿದ ನಂತರ ಇವರಲ್ಲಿ ಯಾರಾದರೂ ಈ ಸ್ಥಾನವನ್ನು ಅಲಂಕರಿಸಿರುವರೆ? ಅಥವಾ ಅವರೆಲ್ಲರೂ ಸೇರಿ ಒಂದು ಸಂಯುಕ್ತ ಶಿರಸ್ಸಿನ ರಚನೆಯಾಗಿದ್ದು, ಆತನ ಸ್ಥಾನವನ್ನು ಅಲಂಕರಿಸಿ ಆಡಳಿತ ನಡೆಸಲಾಗುತ್ತಿದೆಯೋ? ಅಥವಾ ಅವರುಗಳು ಅಥವಾ ಅವರಲ್ಲಿ ಒಬ್ಬರು ರೋಮಿನ ಪೋಪನು ಹೇಳಿಕೊಳ್ಳುವಂತೆ ಕ್ರಿಸ್ತನ ದೇಹವೆಂಬ ಸಭೆಯ ಪಾದ್ರಿಗಳು ಇಲ್ಲವೆ ಕ್ರಿಸ್ತನ ಬದಲಿಗಳಂತೆ ಆವರ ಉತ್ತರಾಧಿಕಾರಿ ಗಳಾಗಿದ್ದಾರೋ?

ಇಂತಹ ಪ್ರಮೇಯದ ಆಧಾರೋಕ್ತಿಗೆ ನಮ್ಮಲ್ಲಿ ಪೌಲನ ಸರಳವಾದ ಹೇಳಿಕೆಯೇನೆಂದರೆ "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ" (ಎಫೆಸ 4:4:5). "ಒಂದೇ ದೇಹ' ಮತ್ತು "ಒಬ್ಬನೇ ಕರ್ತನು', ಅದುದರಿಂದ ಈ ದೇಹದ ವಿವಿಧ ಅಂಗಗಳಲ್ಲಿ (ಸದಸ್ಯರಲ್ಲಿ), ಅವುಗಳಲ್ಲಿ ಕೆಲವುದರ ಸಂಬಂಧಿತ ಪ್ರಾಮುಖ್ಯತೆಗಳು ಏನೇ ಇರಲಿ ಒಬ್ಬನೇ ಶಿರಸ್ಸಾಗಿರುವ ಕರ್ತನನ್ನು ಮಾತ್ರವೇ ಗುರುತಿಸಬೇಕು. ಈ ಬಗ್ಗೆ ಕರ್ತನು ಜನಸಮೂಹಕ್ಕೆ ಮತ್ತು ತನ್ನ ಶಿಷ್ಯರಿಗೆ ಬೋಧಿಸಿದಾಗ "ಶಾಸ್ತ್ರಿಗಳೂ ಫರಿಸಾಯರು... ಜನರಿಂದ ಬೋಧಕರೆನಿಸಿಕೊಳ್ಳುವುದು ಇವುಗಳೇ ಅವರಿಗೆ ಇಷ್ಟ. ಆದರೆ ನೀವು ಬೋಧಕರೆನಿಸಿಕೊಳ್ಳಬೇಡಿರಿ. ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರೂ ಸಹೋದರರು" (ಮತ್ತಾಯ 23:1,2,6–8,)ಎಂದಿದ್ದಾನೆ,ಮತ್ತೊಮ್ಮೆ ಆತನು ಅಪೋಸ್ತಲರನ್ನು ಉದ್ದೇಶಿಸಿ ಮಾತನಾಡುವಾಗ ಯೇಸು ಹೇಳಿದ್ದೇನೆಂದರೆ– "ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನ ಮಾಡುತ್ತಾರೆ ಮತ್ತು ಅವರಲ್ಲಿ ದೊಡ್ಡವರು ಬಲತ್ಕಾರದಿಂದ ಅಧಿಕಾರ ನಡೆಸುತ್ತಾರೆ ಎಂದು ನೀವು ಬಲ್ಲಿರಷ್ಟೆ; ಆದರೆ ನಿಮ್ಮಲ್ಲಿ ಹಾಗಿರಬಾರದು. ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಬೇಕು; ನಿಮ್ಮಲ್ಲಿ ಮೊದಲನೆಯವನಾಗಿರ ಬೇಕೆಂದಿರುವವನು ಎಲ್ಲರ ಆಳಾಗಿರಬೇಕು. ಮನುಷ್ಯಕುಮಾರನು ಸಹಾ ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆ ಮಾಡುವುದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವುದಕ್ಕೂ ಬಂದನು" ಎಂಬುದಾಗಿದೆ. (ಮಾರ್ಕ 10:42–45)

ಆದಿಸಭೆಯವರು ಅಪೋಸ್ತಲರನ್ನು ತಮ್ಮ ಸಭೆಗಳಲ್ಲಿ ಪ್ರಭುಗಳೆಂದು ಗೌರವಿಸಿದ ಬಗ್ಗೆ ಯಾವುದೇ ನಿದರ್ಶನಗಳಿಲ್ಲ ಅಥವಾ ಅಂತಹ ಅಧಿಕಾರವನ್ನಾಗಲೀ, ಘನತೆಯನ್ನಾಗಲೀ ಅಪೋಸ್ತಲರು ಎಲ್ಲಿಯೂ ಚಲಾಯಿಸಲಿಲ್ಲ. ಅವರ ನಡವಳಿಕೆಯು ಇಂದಿನ ಪೋಪರ ಪ್ರಭುತ್ವದ ಅಲೋಚನೆಗಳಿಗೆ ಮತ್ತು ಇನ್ನಿತರ ವಿವಿಧ ಕ್ರೈಸ್ತ ಬಣಗಳಲ್ಲಿ ಪ್ರಧಾನ ಸ್ಥಾನಗಳಲ್ಲಿರುವವರ ಅಲೋಚನೆಗಳಿಗೆ ಬಹಳ ದೂರವಿತ್ತು. ಉದಾಹರಣೆಗೆ, ಪೇತ್ರನು ಪೋಪಾಧೀನರು ಆತನನ್ನು ವರ್ಣಿಸುವಂತೆ ತಾನು ಎಂದಿಗೂ "ಅಪೋಸ್ತಲರ ಪ್ರಭು" ಎಂದು ಹೇಳಿಕೊಳ್ಳಲಿಲ್ಲ. ಅವನಾಗಲೀ, ಇತರ ಅಪೋಸ್ತಲರುಗಳಾಗಲೀ ತಮಗೆ ಯಾವುದೇ ಬಿರುದುಗಳನ್ನು ಬಳಸಿಕೊಳ್ಳಲಿಲ್ಲ ಅಥವಾ ಅಂಥಹ ಯಾವುದೇ ಸನ್ಮಾನವನ್ನು ಸಭೆಯಿಂದ ಬಯಸಲಿಲ್ಲ. ಅವರು ತಮ್ಮನ್ನು ಪರಸ್ಪರ ಪೇತ್ರ, ಯೋಹಾನ, ಪೌಲ ಅಥವಾ ಸಹೋದರ ಪೇತ್ರ, ಸಹೋದರ ಯೋಹಾನ, ಸಹೋದರ ಪೌಲ ಎಂಬಿತ್ಯಾದಿಯಾಗಿ ಹೆಸರಿನಿಂದಲೇ ಸಂಬೋಧಿಸುತ್ತಿದ್ದರು ಮತ್ತು ಸಭೆಯವರನ್ನೆಲ್ಲಾ ಅದೇರೀತಿಯಲ್ಲಿ ಕ್ರಿಸ್ತನಲ್ಲಿ ಸಹೋದರ ಸಹೋದರಿಯರೆಂದೇ ಸಂಬೋಧಿಸಲಾಗುತ್ತಿತ್ತು (ಅ.ಕೃ. 9:17, 21:20;ರೋಮಾ 16:23, 1ಕೊರಿ. 7:15; 8:11, 2 ಕೊರಿ. 8:18, 2ಥೆಸ. 3:6, 15; ಫಿಲೋ. 7,16). ಕರ್ತನು ಸಹಾ ಅವರು ದೌರ್ಜನ್ಯದ ಮನೋಭಾವದಿಂದ ದೂರವುಳಿದು ತನ್ನ ಪ್ರಭುತ್ವ ಮತ್ತು ಅಧಿಕಾರವನ್ನು ಮಾನ್ಯ ಮಾಡುವವರೆಗೆ ಅವರನ್ನು ಸಹೋದರರೆಂದು ಕರೆಯಲು ನಾಚಿಕೆಪಡಲಿಲ್ಲ (ಇಬ್ರಿಯ2:11) ಎಂದು ಬರೆದಿದೆ.

ಪ್ರಭಾವಶಾಲಿಗಳಾದ ಆದಿಸಭೆಯ ಈ ಸೇವಕರುಗಳಲ್ಲಿ ಯಾರೇ ಆಗಲಿ ಬಿರುದು ಗೌರವ ಮತ್ತು ಜನರ ಪ್ರಶಂಶೆ, ಸನ್ಮಾನ ಪೂಜ್ಯ ಭಾವವನ್ನು ಪಡೆಯುವ ಸಲುವಾಗಿ ಶಿಲುಬೆ, ಜಪಮಾಲೆ ಮುಂತಾದುವುಗಳೊಡನೆ ಯಾಜಕ ಉಡುಪುಗಳನ್ನು ಧರಿಸಿದವರಲ್ಲ; ಯಾಕೆಂದರೆ ಕರ್ತನು ಅವರಿಗೆ ಅವರಲ್ಲಿ ಹೆಚ್ಚು ಸೇವೆ ಮಾಡಿದವರು ಅತಿಮುಖ್ಯರೆನಿಸಿಕೊಳ್ಳುತ್ತಾರೆಂದು ಬೋಧಿಸಿದ್ದಾನೆ. ಈ ಉದಾಹರಣೆಯಾಗಿ ಹಿಂಸಾಚಾರದ ದೆಸೆಯಿಂದ ಸಭೆಯು ಚದುರಿಹೋಗಿ ಸಭೆಯಲ್ಲಿ ವ್ಯಾಪಿಸಿ ಅವರನ್ನು ಯೆರೂಲೇಮಿನಿಂದ ಹೊರಹಾಕಿದಾಗ, ಹನ್ನೊಂದು ಮಂದಿಯು ಧೈರ್ಯವಾಗಿ ನಿಂತು ಏನೇ ಬಂದರೂ ಎದುರಿಸಲು ಸಿದ್ಧರಾದರು. ಯಾಕೆಂದರೆ, ಈ ಪರೀಕ್ಷಾ ಸಮಯದಲ್ಲಿ ಹೊರಗಿನ ಸಭೆಗಳು ಯೆರೂಸಲೇಮಿನೆಡೆಗೆ ಅವರತ್ತ ಪ್ರೋತ್ಸಾಹ ನಿರೀಕ್ಷಣೆ ಮತ್ತು ಸಹಾಯಗಳಿಗಾಗಿ ನೋಡುವವರಾಗಿದ್ದರು. ಅವರು ಸಹಾ ತಲೆತಪ್ಪಿಸಿಕೊಂಡಿದ್ದರೆ ಇಡೀ ಸಭೆಯು ಗಾಭರಿಗೊಂಡು ಭಯಾಭ್ರಾಂತವಾಗುತ್ತಿತ್ತು. ಯಾಕೋಬನು ಹೆರೋದನ ಕತ್ತಿಯಿಂದ ಹತನಾದದ್ದನ್ನು ನಾವು ನೋಡುತ್ತೇನೆ. ಅದರಂತೆ ಪೇತ್ರನು ಸಹಾ ಸರಪಣಿಗಳಿಂದ ಕಟ್ಟಲ್ಪಟ್ಟವನಾಗಿ ಇಬ್ಬರು ಸಿಪಾಯಿಗಳಿಂದ ಸೆರೆಮನೆಗೆ ತಳ್ಳಲ್ಪಟ್ಟದ್ದನ್ನು ನೋಡುತ್ತೇವೆ. (ಅ.ಕೃ. 12:1–6). ಪೌಲ ಮತ್ತು ಸೀಲರು ತಮ್ಮ ಸೇವಾವಧಿಯಲ್ಲಿ ಅನೇಕಾವರ್ತಿ ಕೊರಡೇ ಪೆಟ್ಟುಗಳನ್ನು ತಿಂದು ಸೆರೆಮನೆಗೆ ತಳ್ಳಲ್ಪಟ್ಟರು ಮತ್ತು ಅವರ ಕಾಲುಗಳಿಗೆ ಕೋಳಗಳನ್ನು ಬಿಗಿಯಲಾಯಿತು. ಪೌಲನು ಈ ಎಲ್ಲಾ ವೇದನೆಗಳೊಂದಿಗೆ ಹೋರಾಡಿದನು (ಅ.ಕೃ. 16:23,24 ; 2 ಕೊರಿ. 11:23–33), ಅವರು ಪ್ರಭುಗಳಂತೆ ಕಂಡುಬಂದರೋ ಅಥವಾ ಪ್ರಭುಗಳಂತೆ ನಟಿಸಿದರೋ? ಖಂಡಿತವಾಗಿಯೂ ಇಲ್ಲ.

ಪೇತ್ರನು ಈ ಸಂಗತಿಗಳ ಬಗ್ಗೆ ಸ್ಪಷ್ಟವಾಗಿದ್ದಾನೆ. ಹಿರಿಯರನ್ನು ದೇವರ ಮಂದೆಯನ್ನು ಕಾಯಲು ಸಮಾಲೋಚಿಸಿದಾಗ ಆತನು ಅವರಿಗೆ ನಿಮ್ಮ ಮಂದೆಯೆಂದು ಹೇಳದೆ "ದೇವರ ಮಂದೆಯನ್ನು ಮೇಯಿಸಿರಿ" ಎಂದು ಹೇಳುತ್ತಾನೆ. ಆತನು ಅವರಿಗೆ ಈಗಿನ ಅನೇಕ ದೇವರ ಸೇವಕರುಗಳು ಹೇಳುವಂತೆ "ನಿಮ್ಮ ಮಂದೆ', "ನಿಮ್ಮ ಜನರು', "ನಿಮ್ಮ ಸಭೆ' ಎಂದು ಹೇಳದೆ "ದೇವರ ಮಂದೆ" ಎಂದೂ ಅದನ್ನು ಕರ್ತನ ಸ್ವಾಸ್ತ್ಯದ ಪ್ರಭುಗಳಂತಲ್ಲ, ನಮ್ರತೆ, ಪ್ರಾಮಾಣಿಕತೆ, ಅತ್ಯಾಸಕ್ತಿ, ದೈವತ್ವ ಇವುಗಳಿಂದ ಕೂಡಿದ ಉತ್ತಮ ಮಾದರಿಗಳಂತೆ ಮೇಯಿಸಬೇಕೆಂತಲೂ ಹೇಳಿದ್ದಾನೆ. (1 ಪೇತ್ರ 5 :1–3 "ದೇವರು ಅಪೋಸ್ತಲರಾದ ನಮ್ಮನ್ನು ಮರಣವಿಧಿ ಹೊಂದಿದವರೋ ಎಂಬಂತೆ ಕಡೆಯವರಾಗಿ ತೋರಿಸಿ ದ್ದಾನೆಂದು ನನಗೆ ತೋಚುತ್ತದೆ; ನಾವು ದೇವದೂತರಿಗೂ ಮನುಷ್ಯರಿಗೂ ಅಂತೂ ಜಗತ್ತಿಗೆಲ್ಲಾ ನೋಟವಾದೆವು. ನಾವಂತೂ ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ... ನಾವು ಮಾನಹೀನರು... ನಾವು ಹಸಿದವರೂ, ಬಾಯಾರಿದವರೂ, ಮೈಗೆ ವಸ್ತ್ರವಿಲ್ಲದವರೂ ಮನೆಯಿಲ್ಲದವರೂ ಸ್ವಂತ ಕೈಗಳಿಂದ ಕೆಲಸಮಾಡಿ ದುಡಿಯುವವರೂ ಆಗಿದ್ದೇವೆ. ಬೈಸಿಕೊಂಡು ಹರಸುತ್ತೇವೆ ಹಿಂಸೆಪಟ್ಟು ಸಹಿಸುತ್ತೇವೆ, ಈಗಿನವರೆಗೂ ಲೋಕದ ಕಸವೋ ಎಲ್ಲಾದರ ಹೊಲಸೋ ಎಂಬಂತೆ ಆಗಿದ್ದೇವೆ" (1 ಕೊರಿಂಥ 4 : 9–13). ಇವೆಲ್ಲವುಗಳಲ್ಲಿ ಅವರು ಒಡೆಯರಂತೆ ಕಂಡು ಬಂದಿದ್ದಾರೋ? ಇಲ್ಲ. ಕೆಲವು ಸಹೋದರರು ದೇವರ ಸ್ವಾಸ್ತ್ಯದ ಮೇಲೆ ದೊರೆತನ ಮಾಡುತ್ತಿದ್ದಂತೆ ಕಂಡಾಗ ಅವರ ಅಲೋಚನೆಗೆ ವಿರುದ್ಧವಾಗಿ ಪೌಲನು ವ್ಯಂಗವಾಗಿ "ಈಗಾಗಲೇ ನೀವು ತೃಪ್ತರಾದಿರಿ, ಈಗಾಗಲೇ ಐಶ್ವರ್ಯವಂತರಾದಿರಿ, ನಮ್ಮ ಸಹಾಯವಿಲ್ಲದೆ ಅರಸರಾದಿರಿ" (1 ಕೊರಿ. 4:8,) ಎಂದು ಹೇಳಿ ಮುಂದೆ ಅವರಿಗೆ ನಮ್ರತೆಯಿಂದ "ನನ್ನನ್ನು ಅನುಸರಿಸಬೇಕೆಂದು ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ" (ವ: 16) ಎನ್ನುತ್ತಾನೆ. ಪುನಃ ಆತನು "ಜನರು ನಮ್ಮನ್ನು ಕ್ರಿಸ್ತನ ಕೈಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವ ರೆಂತಲೂ ಎಣಿಸಬೇಕು" (ವಚನ : 1) ಎಂತಲೂ ಹೇಳಿದ್ದಾನೆ.

ಪುನಃ ಇದೇ ಅಪೋಸ್ತಲನು ಮುಂದುವರೆದು "ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತನಾಡುತ್ತೇವೆ. ನಿಮಗೆ ತಿಳಿದಿರುವಂತೆ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಂಡುಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವುದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ. ಇದಲ್ಲದೆ ನಾವು ಕ್ರಿಸ್ತನ ಅಪೋಸ್ತಲರಾಗಿರುವುದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲೀ ಇತರರಿಂದಾಗಲೀ ಹೊಂದಲಪೇಕ್ಷಿಸುವವರಾಗಿಲ್ಲ. ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು"(1 ಥೆಸ.–2:4–7). ಅಪೋಸ್ತಲರು ಯಾವುದೇ ಶಾಸನವನ್ನಾಗಲೀ, ಶಾಪವನ್ನಗಲೀ ನೀಡಲಿಲ್ಲ. ಆದರೆ ಅವರ ಪ್ರೀತಿಯ ವಿನಂತಿಗಳಲ್ಲಿ ನಮಗೆ "ಹೊಲಸೋ ಎಂಬಂತೆ" (1ಕೊರಿಂಥ 4:13), "ಅವರಿಗೆ ಸಹಾಯಕನಾಗಿರಬೇಕೆಂದು ನಿನ್ನನ್ನೂ ಕೇಳಿಕೊಳ್ಳುತ್ತೇನೆ" (ಫಿಲಿಪ್ಪಿ:4: 3), "ವೃದ್ಧನನ್ನು ಗದರಿಸದೆ ತಂದೆ ಎಂದು ಭಾವಿಸಿ ಬುದ್ಧಿಹೇಳು" (1ತಿಮೋ.5:1) ಎಂಬ ಮಾತುಗಳು ದೊರಕುತ್ತವೆ.

ಆದಿ ಸಭೆಗಳು ಅಪೋಸ್ತಲರ ದೈವಭಕ್ತಿ ಮತ್ತು ಶ್ರೇಷ್ಠಮಟ್ಟದ ಆತ್ಮಿಕ ತಿಳುವಳಿಕೆ ಮತ್ತು ಜ್ಞಾನವನ್ನು ಮತ್ತು ಅವರು ನಿಜವಾಗಿಯೂ ಆಗಿರುವಂತೆ ಕರ್ತನು ಆರಿಸಿಕೊಂಡ ಆತನ ರಾಯಭಾರಿಗಳೆಂದು ಸರಿಯಾಗಿಯೇ ಗೌರವಿಸಿದರು. ಅವರು ಕಲಿಯುವವರಂತೆ ಅವರ ಪಾದಗಳ ಬಳಿಯಲ್ಲಿ ಕುಳಿತರು. ಆದರೂ ಶೂನ್ಯದೃಷ್ಟಿಯಾದ, ಪ್ರಶ್ನಾತೀತ ಮನಸ್ಸಿನಿಂದಲ್ಲ. ಆದರೆ ಆತ್ಮನನ್ನು ಪರೀಕ್ಷಿಸಿ ಸಾಕ್ಷಿಯನ್ನು ಖಾತರಿಪಡಿಸಿಕೊಳ್ಳುವ ಸ್ವಭಾವವುಳ್ಳವರಾಗಿ. (1 ಯೋಹಾನ 4:1, 1, ಥೆಸ. 5:21, ಯೆಶಾಯ 8:20).ಅಪೋಸ್ತಲರು ಅವರಿಗೆ ಬೋಧಿಸುವಾಗ ಈ ರೀತಿಯ ಮನೋವೃತ್ತಿಗಾಗಿ ಸಂತೋಷಿಸಿದರು. ಅವರ ನಿರೀಕ್ಷೆಗೆ ಒಂದು ಕಾರಣದ ಅವಶ್ಯಕತೆ ಇತ್ತು ಮತ್ತು ಅವರು ಅದನ್ನು ಪ್ರೋತ್ಸಾಹಿಸಿದರು. ಈ ಪ್ರೋತ್ಸಾಹವು ಮಾನವ ತತ್ವಜ್ಞಾನ ಮತ್ತು ವಿಚಾರಸರಣಿಯ ಪುಸಲಾಯಿಸುವಿಕೆಯಂತಿರದೆ ಸಭೆಯು ಮಾನುಷ ಜ್ಞಾನದ ಮೇಲೆ ನಿಲ್ಲದೆ ದೇವರ ಆತ್ಮ ಮತ್ತು ಶಕ್ತಿಯ ಮೇಲೆ ನಿಲ್ಲಬೇಕೆಂದು ನಿರೂಪಣೆಯಾಗಿತ್ತು (1ಕೊರಿ. 2:4–5). ಅವರು ತಮ್ಮ ಬಗ್ಗೆ ಒಂದು ಅಂಧತ್ವದ ಮೂಢನಂಬಿಕೆಯನ್ನು ಬೆಳೆಸಿಕೊಳ್ಳಲಿಲ್ಲ.

"ಬೆರೋಯದವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಸಿದ್ಧಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು" (ಅ.ಕೃ. 17:11) ಎಂಬುದಾಗಿ ನಾವು ಓದುತ್ತೇವೆ. ಆದುದರಿಂದ ಅಪೋಸ್ತಲರು ತಾವು ಪ್ರಕಟಿಸುವ ಸುವಾರ್ತೆಯು ಹಿಂದಿನ ಪ್ರವಾದಿಗಳಿಂದ ಗೂಢವಾಗಿ ತಿಳಿಸಲ್ಪಟ್ಟ ಸುವಾರ್ತೆಯೇ ಆಗಿದೆ ಎಂದು ತೋರಿಸಲು ನಿತ್ಯ ಶ್ರಮಿಸುತ್ತಿದ್ದರು. "ದೇವರು ನಿಮಗೆ ತೋರಿಸಿರುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು... ಈ ಸಂಗತಿಗಳನ್ನು ಮುಂತಿಳಿಸುವುದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವರಾಗಿದ್ದರೆಂಬುದು ಅವರಿಗೆ ಪ್ರಕಟವಾಯಿತು" (1 ಪೇತ್ರ 1: 10–12 ). ಈ ಜೀವಕರ ಮತ್ತು ಅಮರವಾದ ಸುವಾರ್ತೆಯನ್ನೇ ನಮ್ಮ ಕರ್ತನು ಪ್ರಕಾಶಕ್ಕೆ ತಂದನು. ಇದರ ಹೆಚ್ಚಿನ ವಿಸ್ತರಣೆ ಮತ್ತು ಎಲ್ಲಾ ನಿರ್ದಿಷ್ಟ ವಿವರಣೆಗಳನ್ನು ಅವರು ಪವಿತ್ರಾತ್ಮನ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಸಭೆಯವರಿಗಾಗಿ ಕಂಡುಕೊಂಡರು. ಅದು ವಿಶೇಷ ಪ್ರಕಟನೆಯಾಗಿದ್ದಿರಬಹುದು ಅಥವಾ ಬೇರೆ ಯಾವುದೇ ಸ್ವಭಾವಿಕವಾದ ರೀತಿಯದ್ದಾಗಿರಬಹುದು. ಅವೆರಡನ್ನು ಸಹಾ ಉಪಯೋಗಿಸಿಕೊಂಡು ಆ ಅಪೋಸ್ತಲರಿಗೆ ಕರ್ತನು ಮಾಡಿದ ವಾಗ್ದಾನಗಳು ಅವರ ಮೂಲಕ ಸಮಸ್ತ ಸಭೆಯಲ್ಲಿ ನೆರವೇರಿದವು – "ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಅವೆ, ಆದರೆ ಈಗ ನೀವು ಅವುಗಳನ್ನು ಗ್ರಹಿಸಿಕೊಳ್ಳಲಾರಿರಿ."

ಆದುದರಿಂದ, ಬೆರೋಯುದವರು ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸಿ ಅಪೋಸ್ತಲರ ಸಾಕ್ಷಿಯು ಧರ್ಮಶಾಸ್ತ್ರಕ್ಕೆ ಮತ್ತು ಪ್ರವಾದನೆಗಳಿಗೆ ಹಾಗೂ ಕರ್ತನ ಬೋಧನೆಗಳಿಗೆ ಹೊಂದಾಣಿಕೆ ಆಗುತ್ತದೆಯೋ ಇಲ್ಲವೋ ಎಂದು ಪರೀಕ್ಷಿಸಿದ್ದು ಸರಿಯಾಗಿದೆ. ನಮ್ಮ ಕರ್ತನು ಸಹಾ ಅದೇ ರೀತಿಯಲ್ಲಿ ತನ್ನ ಸಾಕ್ಷಿಯನ್ನು ಧರ್ಮಶಾಸ್ತ್ರ ಮತ್ತು ಪ್ರವಾದನೆಗಳೊಡನೆ ರುಜುವಾತುಪಡಿಸಲು ಬಯಸಿ "ಧರ್ಮಶಾಸ್ತ್ರ ಗ್ರಂಥಗಳಲ್ಲಿ ಹುಡುಕಿರಿ... ಅವುಗಳೂ ನನ್ನ ಬಗ್ಗೆ ಸಾಕ್ಷಿಹೇಳುತ್ತವೆ" ಎಂದು ಹೇಳುತ್ತಿದ್ದನು. ಸಮಗ್ರ ದೈವ ಸಾಕ್ಷಿಯು ಅವು ಧರ್ಮಶಾಸ್ತ್ರದ ಮೂಲಕವಾಗಲೀ, ಕರ್ತನ ಮೂಲಕವಾಗಲೀ ಅಥವಾ ಅಪೋಸ್ತಲರ ಮೂಲಕವಾಗಲೀ ಹೇಳಿದ್ದಾಗಿರಲಿ ಎಲ್ಲವೂ ಹೊಂದಾಣಿಕೆಯಿಂದಿರಬೇಕು. ಪರಸ್ಪರ ಹೊಂದಾಣಿಕೆಯು ದೇವ ಪ್ರೇರಿತವಾಗಿದೆ ಎಂಬುದಕ್ಕೆ ಸಾಕ್ಷಿ. ದೇವರ ನಾಮಕ್ಕೆ ಸ್ತ್ರೋತ್ರವಾಗಲಿ! ಅಂತಹ ಐಕ್ಯತೆಯನ್ನು ನಾವೀಗ ಕಾಣುತ್ತಿದ್ದೇವೆ. ಹಳೆ ಮತ್ತು ಹೊಸಒಡಂಬಡಿಕೆಯಲ್ಲಿನ ದೇವರ ವಾಕ್ಯಗಳು ದೇವರ ವೀಣೆಯಂತಿದೆ (ಪ್ರಕಟನೆ 15 :2) ಮತ್ತು ಧರ್ಮಶಾಸ್ತ್ರ ಮತ್ತು ಪ್ರವಾದನೆಗಳ ವಿವಿಧ ಸಾಕ್ಷಿಗಳು ಈ ವೀಣೆಯ ವಿವಿಧ ತಂತಿಗಳಂತಿವೆ. ಇವನ್ನು ನಮ್ಮ ಹೃದಯದಲ್ಲಿ ನೆಲೆಗೊಂಡಿರುವ ಪವಿತ್ರಾತ್ಮನ ಮೂಲಕ ನುಡಿಸಿದಾಗ ಮತ್ತು ನಿಷ್ಠಾವಂತ ದೇವರ ಸೇವಕರುಗಳು ಮತ್ತು ಶಾಸ್ತ್ರಗ್ರಂಥಗಳ ಪರಿಶೋಧಕರುಗಳು ಇದರ ಮೇಲೆ ಕೈಯಾಡಿಸಿದಾಗ ಈ ಮಾನುಷ ಕಿವಿಗಳಿಗೆ ಎಂದೂ ಬೀಳದ ಬಹಳ ಮನೋಹರವಾದ ಪರಮ ಸಂಗೀತವು ಹೊರಹೊಮ್ಮುತ್ತದೆ. "ಮೋಶೆ ಮತ್ತು ಯಜ್ಞದ ಕುರಿಯಾದಾತನ ಉತ್ಕೃಷ್ಟ ಆಶೀರ್ವಾದದಾಯಕ ಮಧುರ ಗೀತೆಗಾಗಿ ದೇವರಿಗೆ ಸ್ತೋತ್ರ. ಇದನ್ನು ನಾವು ಪವಿತ್ರ ಅಪೋಸ್ತಲರ ಮತ್ತು ಪ್ರವಾದಿಗಳ ಮೂಲಕ ಕಂಡುಕೊಳ್ಳುತ್ತೇವೆ .. ಇವರಿಗೆ ನಮ್ಮ ಕರ್ತನೇ ಮುಖ್ಯಸ್ತನು!

ಕರ್ತನ ಮತ್ತು ಅಪೋಸ್ತಲರ ಸಾಕ್ಷಿಯು ಧರ್ಮಶಾಸ್ತ್ರ ಮತ್ತು ಪ್ರವಾದನೆಗಳೊಂದಿಗೆ ಐಕ್ಯತೆ ಹೊಂದಿರಬೇಕಾದರೂ ಅವುಗಳು ನೂತನ ಹಾಗೂ ಪುರಾತನ ಸಂಗತಿಗಳನ್ನು ಪರೀಕ್ಷಿಸುವುವೆಂದು ನಾವು ನಿರೀಕ್ಷಿಸಬೇಕು. ಈ ರೀತಿಯಲ್ಲಿ ನಿರೀಕ್ಷಿಸುವಂತೆ ಪ್ರವಾದಿಗಳೇ ನಮ್ಮನ್ನು ನಡೆಸಿದ್ದಾರೆ (ಮತ್ತಾ. 13:35, ಕೀರ್ತನೆ 78:02, ಧರ್ಮೋ. 18:15,18; ದಾನಿ. 12:09) ಆದುದರಿಂದ ಇವುಗಳು ಪುರಾತನ ಪ್ರವಾದನೆಗಳಲ್ಲಿ ಅಡಗಿರುವ ಸತ್ಯ ಸಂಗತಿಗಳನ್ನು ವಾಖ್ಯಾನಿಸುವವುಗಳು ಮಾತ್ರವಲ್ಲ ನೂತನ ಸತ್ಯಸಂಗತಿಗಳನ್ನು ಪ್ರಕಟಿಸುವವುಗಳು ಸಹಾ ಆಗಿವೆ ಎಂದು ಕಂಡುಕೊಳ್ಳುತ್ತೇವೆ.

## ಅಪೋಸ್ತಲರುಗಳು, ಪ್ರವಾದಿಗಳು, ಸೌವಾರ್ತಿಕರು ಮತ್ತು ಬೋಧಕರುಗಳು

### Apostles, Prophets, Evangelists, Teachers

ಕ್ರೈಸ್ತ ಪ್ರಪಂಚದಲ್ಲಿರುವ ಸಾಮಾನ್ಯ ಅಲೋಚನೆಯ ಪ್ರಕಾರ ಕರ್ತನು ಸಭೆಯ ವ್ಯವಸ್ಥಾಪನೆ ವಿಷಯವನ್ನು ಆತನು ವಿನ್ಯಾಸಗೊಳಿಸಿರುವ ಉದ್ದೇಶವನ್ನು ನೆರವೇರಿಸಲು ಆಗದ ಸ್ಥಿತಿಯಲ್ಲಿ ಬಿಟ್ಟು ಅದರ ಕಾರ್ಯರೂಪದ ತಿಳುವಳಿಕೆಯಿರುವ ಆತನ ಜನರೇ ಅದನ್ನು ಮುಂದುವರಿಸುವಂತೆ ನಿರೀಕ್ಷಿಸಿದನು. ಅನೇಕ ವಿಚಾರಗಳುಳ್ಳ ಅನೇಕ ಮಂದಿ ಹೆಚ್ಚು ಕಡಿಮೆ ಕಟ್ಟುನಿಟ್ಟಾದ ಸಂಸ್ಥೆಯ ಬಗ್ಗೆ ಒಲವು ತೋರಿದರು. ಈ ಕಾರಣದಿಂದ ಇಂದು ಪ್ರಪಂಚದಾದ್ಯಂತ ಕ್ರೈಸ್ತರು ಬೇರೆ ಬೇರೆಯಾದ ರೀತಿಯಲ್ಲಿ ತಮ್ಮನ್ನು ಸಂಘಟಿಸಿಕೊಂಡಿದ್ದು ತಮ್ಮ ನಿರ್ಧಿಷ್ಟವಾದ ಸಂಸ್ಥೆ ಅಥವಾ ಆಡಳಿತಕ್ಕೆ ಎಲ್ಲಾ ಸೌಕರ್ಯಗಳು ಒದಗಬೇಕೆಂದು ಬಯಸುತ್ತಿವೆ. ಇದು ತಪ್ಪು! ದೇವರು ಭೂಲೋಕದ ಅಸ್ತಿವಾರವನ್ನು ಹಾಕುವ ಮೊದಲೇ ತಿಳಿದಿದ್ದ ನೂತನ ಸೃಷ್ಟಿಯ ತನ್ನ ಸ್ವಂತ ಕಾರ್ಯದ ಬಗ್ಗೆ ಅಲಕ್ಷ್ಯವಾಗಿದ್ದು ತನ್ನಲ್ಲಿ ವಿಶ್ವಾಸವಿಟ್ಟಿರುವ ಜನರನ್ನು ತನ್ನ ಚಿತ್ತದ ಬಗ್ಗೆ ಯಾವುದೇ ಸ್ಪಷ್ಟವಾದ ತಿಳುವಳಿಕೆ ಇಲ್ಲದಂತೆ ಮತ್ತು ಅವರ ಒಳಿತಿಗೆ ಯಾವುದೇ ಯಥೋಚಿತವಾದ ವ್ಯವಸ್ಥೆಯಾಗಲೀ ರಚನೆಯಾಗಲೀ ಇಲ್ಲದಂತೆ ಬಿಟ್ಟುಬಿಟ್ಟನೆಂದು ಗ್ರಹಿಸುವುದು ಸಮಂಜಸವೆನಿಸದು. ಮಾನವ ಮನಸ್ಸಿನ ಧೋರಣೆಯು ಒಂದೆಡೆ ಅನಾಯಕತ್ವದ ಕಡೆಗೋ, ಮತ್ತೊಂದೆಡೆ ಬಿಗಿಯಾದ ವ್ಯೂಹ ಅಥವಾ ಗುಲಾಮತ್ವದ ಕಡೆಗೋ ಇರುತ್ತದೆ. ದೈವಿಕ ವ್ಯವಸ್ಥೆಯು ಈ ಎರಡೂ ವಿಪರೀತಾವಸ್ಥೆಗಳನ್ನು ದೂರವಿರಿಸುತ್ತದೆ ಮತ್ತು ಈ ನೂತನ ಸೃಷ್ಟಿಗಾಗಿ ಉತ್ಕಟವಾದ ಸರಳತೆಯುಳ್ಳ ಸಂಘಟನೆಯೊಂದನ್ನು ಗುರುತಿಸುತ್ತದೆ ಹಾಗೂ ಗುಲಾಮತನಕ್ಕೆ ಸಂಬಂಧವಾದುದೆಲ್ಲವನ್ನೂ ಇಲ್ಲದಂತೆ ಮಾಡಿಬಿಡುತ್ತದೆ. ನಿಜವಾಗಿಯೂ ಪ್ರತಿಯೊಬ್ಬ ಕ್ರೈಸ್ತನಿಗೂ ದೇವರ ವಾಕ್ಯದ ಕಟ್ಟಳೆ ಏನೆಂದರೆ "ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆ ಮಾಡಿದನು.

ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರುಗಿ ಸಿಕ್ಕಿಹಾಕಿಕೊಳ್ಳಬೇಡಿರಿ" (ಗಲಾ. : 5:1) ಎಂಬುದೇ.

ಈ ದೈವಿಕ ವ್ಯವಸ್ಥೆಯನ್ನು ಮುಂದಾಗಿ ತೋರಿಸುವ ಸಲುವಾಗಿ ನಾವು ನಮ್ಮನ್ನು ದೈವಿಕ ದಾಖಲೆಗಳಿಗೆ ಸೀಮಿತಗೊಳಿಸಿಕೊಳ್ಳಬೇಕು ಮತ್ತು ಸಂಪೂರ್ಣವಾಗಿ ಕ್ರೈಸ್ತ ಧರ್ಮೋಪದೇಶಕ ಸಭೆಯ ಚರಿತ್ರೆಯನ್ನು ಕಡೆಗಣಿಸಬೇಕು. ಮುಂತಿಳಿಸಿರುವ ಪತನವು ಅಪೋಸ್ತಲರ ಕಾಲದಲ್ಲಿಯೇ ತನ್ನ ಕಾರ್ಯ ಆರಂಭಿಸಿತ್ತೆಂದು ಮತ್ತು ಅದು ಅಪೋಸ್ತಲರುಗಳು ಮರಣಿಸಿದ ನಂತರ ತೀವ್ರಗೊಂಡು ಪೋಪರ ಪದ್ಧತಿಯಲ್ಲಿ ತುತ್ತತುದಿಗೇರಿತೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಸತ್ಯವೇದದ ವಿವರಗಳನ್ನು ಪರಿಶೀಲಿಸುವಾಗ ನಾವು ಹೊಸ ಒಡಂಬಡಿಕೆಯ ದಾಖಲೆಗಳಿಗೆ ನಿಯಮದಡಿಯ ಮಾದರಿಯ ವ್ಯವಸ್ಥೆಗಳನ್ನು ಸೇರಿಸಿಕೊಳ್ಳಬಹುದು. ಆದರೆ ಅಲ್ಲಿ ಪ್ರದರ್ಶಿಸಲ್ಪಟ್ಟಿರುವ ಮಾದರಿಗಳು ಸುವಾರ್ತಾಯುಗಕ್ಕೆ ಸೀಮಿತವಾದವುಗಳು ಮಾತ್ರವಲ್ಲ ಬರಲಿರುವ ಸಹಸ್ರ ವರ್ಷಗಳ ಧರ್ಮಯುಗಕ್ಕೂ ಅನ್ವಯಿಸುತ್ತದೆಂದು ನಿರಂತರವಾಗಿ ನೆನಪಿಸಿಕೊಳ್ಳಬೇಕು. ಉದಾಹರಣೆಗೆ ದೋಷಪರಿಹಾರಕ ದಿನ ಮತ್ತು ಅದರ ಕಾರ್ಯಗಳು ನಾವು ಕಂಡುಕೊಂಡಂತೆ ಸುವಾರ್ತಾಯುಗವನ್ನು ಪ್ರತಿನಿಧಿಸುತ್ತವೆ. ಆ ದಿನದಲ್ಲಿ ಮಹಾ ಯಾಜಕನು ಶೋಭಾಯಮಾನವಾದ ಉಡುಪನ್ನು ಧರಿಸದೆ ಬದಲಾಗಿ ಪವಿತ್ರ ಉಡುಪು ಅಥವಾ ನಾರುಮಡಿಯನ್ನು ಧರಿಸಿದ್ದನು. ಈ ಸುವಾರ್ತಾ ಯುಗದಲ್ಲಿ ಕರ್ತನಾಗಲೀ ಸಭೆಯಾಗಲೀ ಜನರ ದೃಷ್ಟಿಯಲ್ಲಿ ಯಾವುದೇ ವಿಶೇಷ ಲಕ್ಷಣದ ಅಥವಾ ಮಹಿಮಾ ಸ್ಥಾನವನ್ನು ಆಕ್ರಮಿಸಿಕೊಳ್ಳುವುದಿಲ್ಲವೆಂಬುದಕ್ಕೆ ಇದು ಉದಾಹರಣೆ. ಅವರ ಸಂಪೂರ್ಣ ನೆಲೆಯು ಪವಿತ್ರವಾಗಿಯೂ ನೀತಿಯುಳ್ಳದ್ದೂ ಆಗಿದ್ದು ಇದನ್ನು ನಾರುಮಡಿಯು ಸೂಚಿಸುತ್ತದೆ. ಸಭೆಯ ವಿಷಯದಲ್ಲಿ ಇದು ಅದರ ಶಿರಸ್ಸಾಗಿರುವ ಕರ್ತನ ನೀತಿವಂತಿಕೆಯ ಸಂಕೇತವಾಗಿದೆ. ದೋಷಪರಿಹಾರಕ ದಿನದ ನಂತರ ಮಹಾಯಾಜಕನು ಮಹಿಮಾ ಉಡುಪನ್ನು ಧರಿಸಿದನು. ಈ ಕಾರಣದಿಂದ ಮಹಿಮಾ ಉಡುಪುಗಳು ಸಹಸ್ರವರ್ಷಗಳ ಧರ್ಮಯುಗದಲ್ಲಿ ಕ್ರಿಸ್ತನ ಅಧಿಕಾರ, ಮಹಿಮೆ, ಘನತೆ ಮುಂತಾದುವುಗಳಿಗೆ ಸಂಕೇತವಾಗಿದೆ. ಆ ಚಿತ್ರಣದಲ್ಲಿ ಸಭೆಯು ಅದರ ಕರ್ತನೊಂದಿಗಿನ ಮಹಿಮೆಯಲ್ಲಿ ಸೂಚಿತವಾಗಿದೆ. ಯಾಕೆಂದರೆ, ಮಹಾಯಾಜಕರ ಮುಖ್ಯಸ್ಥನಾಗಿ ನಮ್ಮ ಕರ್ತನು ಮತ್ತು ಪ್ರಭುವು ಪ್ರತಿನಿಧಿಸುತ್ತಾನೆ. ಹೀಗೆ ಮಹಾಯಾಜಕನ ದೇಹವಾಗಿ ಸಭೆಯು ಕಂಡುಬರುತ್ತದೆ. ಈ ಕಾರಣದಿಂದ ಮಾಹಿಮಾ ಉಡುಪುಗಳು ಸಮಗ್ರ ರಾಜಯಾಜಕತ್ವದ ಉತ್ಕೃಷ್ಟ ಸಮಯ ಬರುವಾಗ ಇರುವ ಘನತೆ ಮತ್ತು ಗೌರವವನ್ನು ಪ್ರತಿನಿಧಿಸುತ್ತದೆ. ಪೋಪರ ವಂಶಪಾರಂಪರ್ಯವು ಕರ್ತನ ಆಡಳಿತವು ಬದಲಿ ಪ್ರಾತಿನಿದಿತ್ವದಲ್ಲಿ ಕಂಡುಬರುತ್ತದೆ. ಅಲಂಕಾರಿಕ ಉಡುಪುಗಳನ್ನು ಧರಿಸಿದ ಪೋಪರು, ಆತನ ಪ್ರತಿನಿಧಿಗಳು, ಕಾರ್ಡಿನಲ್‌ಗಳು ಮತ್ತು ಬಿಷೋಪರುಗಳು ತಮ್ಮ ಮಹಿಮೆ ಮತ್ತು ಅಧಿಕಾರಯುಕ್ತ ಸಭೆಯನ್ನು ಪ್ರತಿನಿಧಿಸುತ್ತಾರೆ ಎಂಬ ತಪ್ಪು ಹೇಳಿಕೆಗಳು ಪ್ರಪಂಚದ ಮೇಲೆ ನಾಗರಿಕ ಹಾಗೂ ಧಾರ್ಮಿಕ ನಿಯಂತ್ರಣವನ್ನು ಪಡಕೊಳ್ಳುವ ಪ್ರಯತ್ನವಾಗಿದೆ ಮತ್ತು ಆಯ್ದ ನೂತನ ಸೃಷ್ಟಿಯ ಮಹಿಮೆ ಮತ್ತು ಘನತೆಗಳ ಕೃತಕವಾದ ಅನುಕರಣೆಯಾಗಿದೆ. ನಿಜವಾದ ರಾಜಯಾಜಕತ್ವದವರು ಇನ್ನೂ ಸಹಾ ತ್ಯಾಗ ಸೂಚಕ ಶ್ವೇತ ವರ್ಣದ ಉಡುಪನ್ನೇ ಧರಿಸಿಕೊಂಡು ಆಯ್ದುಕೊಂಡವರಲ್ಲಿನ ಕಡೇ ಸದಸ್ಯನು ತ್ಯಾಗದ ಕಾರ್ಯದಲ್ಲಿ ತನ್ನ ಭಾಗವನ್ನು ಯಶಸ್ವಿಯಾಗಿ ಪೂರೈಸಿದ ಮೇಲೆ, ಸಭೆಯ ನಿಜವಾದ ಪ್ರಭುವಿಗಾಗಿ ಮತ್ತು ನಿಜವಾದ "ಮಹಿಮೆ, ಘನತೆ ಮತ್ತು ನಿರ್ಲಯತ್ವಕ್ಕೆ" ಕಾಯ್ದುಕೊಂಡಿರುತ್ತಾರೆ.

ಸಭೆಯು ತನ್ನ ಸಂಕಟ ಮತ್ತು ತ್ಯಾಗದ ಸಮಯದಲ್ಲಿ ಅನುಸರಿಸಿದ ಸಂಘಟನಾ ನಿಯಮಗಳನ್ನು ನಮ್ಮ ಮಾರ್ಗದರ್ಶನಕ್ಕಾಗಿ ನಾವು ನೂತನ ಒಡಂಬಡಿಕೆಯನ್ನು ನಿರ್ಧಿಷ್ಟವಾಗಿ ನೋಡ ಬೇಕಾಗುತ್ತದೆ. ಈ ನಿಯಮಗಳು ಒಂದು ಅಚ್ಚುಕಟ್ಟಾದ ರೀತಿಯಲ್ಲಿ ಇರುವುದಿಲ್ಲವಾದುದು ಸತ್ಯವಾದರೂ ಅವು ಹೇಗೂ ಒಂದು ಸಂಪೂರ್ಣವಾದ ವ್ಯವಸ್ಥೆಯೆನ್ನಲು ಇದು ನಮ್ಮನ್ನು ಅಡ್ಡಿಪಡಿಸಲಾರದು. ನಾವು ಈ ನಿಯಮಗಳ ಬಗ್ಗೆ ನಮ್ಮ ಅಪಾರ್ಥದ ತೀರ್ಮಾನಗಳ ಸ್ವಾಭಾವಿಕ ನಿರೀಕ್ಷೆಗಳ ವಿರುದ್ಧ ಹೋರಾಡತಕ್ಕದ್ದು ಮತ್ತು ಸಭೆಯಲ್ಲಿನ ದೇವರ ಮಕ್ಕಳಿಗೆ ಸ್ವಾತಂತ್ರ್ಯದ ಸಮರ್ಪಕವಾದ ನಿಯಮವೊಂದನ್ನು ನೀಡಲಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು. ಯಾಕೆಂದರೆ, ಅವರು ಇನ್ನೆಂದಿಗೂ ಸೇವಕರಲ್ಲ, ಆದರೆ ಮಕ್ಕಳು. ದೇವರ ಮಕ್ಕಳು ತಮ್ಮ ಮಕ್ಕಳತನದ ಸ್ವಾತಂತ್ರ್ಯವನ್ನು ಅನುಭವಿಸುತ್ತಾ ಪ್ರೀತಿಯ ನಿಯಮ ಮತ್ತು ಸಿದ್ಧಾಂತಗಳಿಗೆ ಸಂಪೂರ್ಣವಾದ ವಿಧೇಯತ್ವನ್ನು ತೋರಿಸಬೇಕಾಗುತ್ತದೆ.

ಅಪೋಸ್ತಲನು ನಮ್ಮ ಮನಸ್ಸಿನ ಮುಂದೆ ನೂತನ ಸೃಷ್ಟಿಯ ಚಿತ್ರಣವೊಂದನ್ನು ಇಡುತ್ತಾನೆ. ಇದು ಸಮಗ್ರ ಪ್ರಸ್ತಾಪವನ್ನು ನಿರೂಪಿಸುತ್ತದೆ. ಇದೊಂದು ಮಾನವ ಚಿತ್ರಣವಾಗಿದ್ದು ಶಿರಸ್ಸು ಕರ್ತನನ್ನು ಮತ್ತು ವಿವಿಧ ಅಂಗಗಳು ಸಭೆಯನ್ನು ಪ್ರತಿನಿಧಿಸುತ್ತವೆ. 1 ಕೊರಿ. 12ರಲ್ಲಿ ಈ ಪ್ರಸ್ತಾಪವು ಭವ್ಯವಾದ ರೀತಿಯಲ್ಲಿ ವಿವರಿಸಲ್ಪಟ್ಟಿದೆ. ನಿರಾಡಂಬರವಾಗಿ ನೀಡಲ್ಪಟ್ಟ ವಿವರಣೆ ಏನೆಂದರೆ, "ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವುದೋ, ಹಾಗೆಯೇ ಕ್ರಿಸ್ತನು. (ಒಂದೇ ದೇಹ ಅಥವಾ ಅನೇಕ ಅಂಗಗಳ ಸಮೂಹ) ಯೆಹೂದ್ಯರಾಗಲೀ, ಗ್ರೀಕರಾಗಲೀ, ದಾಸರಾಗಲೀ, ಸ್ವತಂತ್ರರಾಗಲೀ ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು" (1 ಕೊರಿ. 12:12–13). ಮಾನವ ದೇಹವು ಮುಖ್ಯವಾಗಿ ಅದರ ಎಲ್ಲಾ ಅಂಗಗಳ ಪರಸ್ಪರ ಅನ್ಯೋನ್ಯತೆ ಮತ್ತು ಸಾಮರಸ್ಯದ ಮೇಲೆ ಅವಲಂಬಿಸಿರುವುದನ್ನು ಇಲ್ಲಿ ಅಪೋಸ್ತಲನು ಎತ್ತಿ ತೋರಿಸುತ್ತಾನೆ. ಅದೇ ರೀತಿಯಲ್ಲಿ ಕ್ರಿಸ್ತನ ದೇಹವಾದ ಸಭೆಯಲ್ಲಿಯೂ ಸಹಾ. ಒಬ್ಬ ಸದಸ್ಯನು ಯಾವುದೇ ನೋವು ಇಲ್ಲವೆ ಅಪಮಾನಕ್ಕೆ ಒಳಗಾದರೆ ಅದು ಇಚ್ಛಾಪೂರ್ವಕವಾಗಿರಲಿ ಅಥವಾ ಇಚ್ಛೆಯಿಲ್ಲದ ರೀತಿಯಲ್ಲಿರಲಿ ಅದು ಎಲ್ಲಾ ಸದಸ್ಯರ ಮೇಲೂ ಪರಿಣಾಮವನ್ನು ಬೀರುತ್ತದೆ. ಒಬ್ಬ ಸದಸ್ಯನಿಗೆ ಯಾವುದೇ ವಿಶೇಷ ಆಶೀರ್ವಾದ ಉಂಟಾದಲ್ಲಿ, ಸಮಾಧಾನ ದೊರೆತಲ್ಲಿ ಅಥವಾ ಉಲ್ಲಾಸಗೊಂಡಲ್ಲಿ ಈ ಆಶೀರ್ವಾದವನ್ನು ಎಲ್ಲರೂ ಸರಿಸಮಾನವಾಗಿ ಹಂಚಿಕೊಳ್ಳುವರು. ವಚನ 23 ರಲ್ಲಿ ಆತನು

ನಮ್ಮ ಸ್ವಾಭಾವಿಕ ದೇಹಗಳ ಬಲಹೀನತೆಗಳನ್ನು, ಕುಂದುಕೊರತೆಗಳನ್ನು ಮುಚ್ಚಲು ಮತ್ತು ಅವುಗಳನ್ನು ನಿವಾರಿಸಲು, ಸಹಾಯಮಾಡಲು ಬಯಸುವಂತೆ ನಾವು ಕ್ರಿಸ್ತನ ದೇಹವಾದ ಸಭೆಯ ಬಗ್ಗೆಯೂ ಮಾಡಬೇಕು. ಹೆಚ್ಚು ಕುಂದುಕೊರತೆಯುಳ್ಳವರಿಗೆ ವಿಶೇಷ ಅರೈಕೆ ಮಾಡಬೇಕು, ಮತ್ತು ದಾನ–ಧರ್ಮ, ಪ್ರೀತಿಯನ್ನು ಅವರಿಗೆ ನೀಡಬೇಕು ಎಂಬುದರ ಬಗ್ಗೆ ಹೇಳುತ್ತಾನೆ.–"ದೇಹದಲ್ಲಿ ಬೇಧವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ"(ವಚನ 25).

ಈ ಪ್ರಕಾರವಾಗಿ ಸಭೆಯೆಂಬ ದೇವರ ಸಂಸ್ಥೆಯು ನಿಜವಾಗಿಯೂ ಸಂಪೂರ್ಣವಾದುದು; ಆದರೆ ಪ್ರಕೃತಿಯಲ್ಲಿರುವಂತೆ ಕೃಪೆಯಲ್ಲಿಯೂ ಸಹಾ–ಸಂಸ್ಥೆಯು ಸಂಪೂರ್ಣವಾಗಿರುವಾಗ ಕಟ್ಟುಗಳ ತೇಪೆಗಳ ಅವಶ್ಯಕತೆಯು ಬಹಳ ಕಡಿಮೆ. ಒಂದು ವೃಕ್ಷವು ತುದಿಯಿಂದ ಬೇರಿನವರೆಗೂ ಅನ್ಯೋನ್ಯವಾಗಿರುತ್ತದೆ, ಹೀಗಿದ್ದರೂ ಕೊಂಬೆಗಳನ್ನು ರಕ್ಷಣಾ ಕಟ್ಟುಗಳಿಂದ ಅಥವಾ ಹಗ್ಗಗಳಿಂದ ಯಾರೂ ಬಿಗಿಯುವುದಿಲ್ಲ ಅಥವಾ ಮೊಳೆಯಿಂದಾಗಲೀ ಅಥವಾ ಮುದ್ರಿತ ನಿಯಮಗಳಿಂದ ಬಂಧಿಸುವುದಿಲ್ಲ. ಅದರಂತೆ ಕ್ರಿಸ್ತನ ದೇಹವೆಂಬ ಸಭೆಯ ಬಗ್ಗೆಯೂ ಸಹಾ. ಇದನ್ನು ಸರಿಯಾದ ರೀತಿಯಲ್ಲಿ ಹೊಂದಿಸಿಕೊಂಡು, ಸಾಮರಸ್ಯದಿಂದ ದೇವರು ನಿಯಮಿಸಿದ ಪ್ರಕಾರದಲ್ಲಿ ಐಕ್ಯಗೊಳಿಸುವುದಾದರೆ ವಿವಿಧ ಸದಸ್ಯರನ್ನು ಒಟ್ಟುಗೂಡಿಸಲು ಯಾವುದೇ ವಿಧವಾದ ದಾರಗಳಾಗಲೀ, ಪಟ್ಟಿಗಳಾಗಲೀ ಅಥವಾ ಮೊಳೆಗಳಾಗಲೀ ಬೇಕಿಲ್ಲ, ಯಾವುದೇ ಕಾನೂನುಗಳ, ವಿಶ್ವಾಸ ಸೂತ್ರಗಳ ಅಥವಾ ಮಾನವನ ನೋಟಕ್ಕೆ ಸಂಬಂಧಿಸಿದ ಸಲಕರಣೆಗಳ ಅಗತ್ಯವಿರುವುದಿಲ್ಲ. ಒಂದೇ ಆತ್ಮನ ಅನ್ಯೋನ್ಯದ ಸಂಕೋಲೆಯಂತಿದೆ. ಜೀವದ ಆತ್ಮನು ಇರುವ ತನಕ ಅನ್ಯೋನ್ಯತೆ, ದೇಹದ ಒಂದಾಗಿರುವಿಕೆಯು ಸಹಾ ಉಳಿದುಕೊಳ್ಳುತ್ತದೆ. ಆದರೆ ಇದು ಕರ್ತನ ಆತ್ಮನ ಹೊಂದುವಿಕೆಗೆ ತಕ್ಕಂತೆ ಬಲಹೀನ ಅಥವಾ ಬಲವುಳ್ಳದ್ದಾಗಿರುತ್ತದೆ.

ಅಪೋಸ್ತಲನು ಮುಂದುವರೆದು ಕರ್ತನು ತಾನೇ ಯೋಜಿಸಿದ ಮತ್ತು ಆರಂಭಿಸಿದ ನೂತನ ಸೃಷ್ಟಿಯೆಂಬ ಈ ಸಂಸ್ಥೆಯ ಮೇಲ್ವಿಚಾರಕನೆಂದು. ಆತನು ಹೇಳುವುದೇನೆಂದರೆ – "ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ. ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೋಸ್ತಲರನ್ನು, ಎರಡನೆಯದಾಗಿ ಪ್ರವಾದಿಗಳನ್ನು, ಮೂರನೆಯದಾಗಿ ಉಪದೇಶಕರನ್ನು ಇಟ್ಟಿದ್ದಾನೆ; ಆಮೇಲೆ ಮಹತ್ಕಾರ್ಯಗಳನ್ನು ಮಾಡುವ ಶಕ್ತಿಯನ್ನೂ ನಾನಾ ರೋಗಗಳನ್ನು ವಾಸಿಮಾಡುವ ವರವನ್ನೂ ಪರಸಹಾಯ ಮಾಡುವ ಗುಣವನ್ನೂ, ಕಾರ್ಯಗಳನ್ನು ನಿರ್ವಹಿಸುವ ಜ್ಞಾನವನ್ನೂ ವಿವಿಧ ವಾಣಿಗಳನ್ನಾಡುವ ವರವನ್ನೂ ಅವರಿಗೆ ಕೊಟ್ಟಿದ್ದಾನೆ" (1 ಕೊರಿ. 12:27–28). ತಮ್ಮನ್ನೂ ಮತ್ತು ಇತರ ಅನೇಕರನ್ನು ಸಭೆಯಲ್ಲಿ ಮಹಿಮೆಯ ಹಾಗೂ ಗೌರವ ಸ್ಥಾನಗಳಲ್ಲಿ ಸ್ಥಾಪಿಸುವ ಹವ್ಯಾಸವುಳ್ಳವರಿಗೆ ಹೊಸ ಆಲೋಚನೆ ಎಂದೆನಿಸುತ್ತದೆ. ದೇವರು ಮಾರ್ಗದರ್ಶನಕ್ಕಾಗಿ ತನ್ನ ಕಡೆಗೆ ನೋಡುವವರಿಗೆ ಮತ್ತು ತನ್ನ ವಾಕ್ಯ ಮತ್ತು ಆತ್ಮನಿಂದ ನಿರ್ದೇಶನ ಪಡಕೊಳ್ಳುವವರಿಗೆ ಮಾತ್ರವೇ ತನ್ನ ಸಭೆಯ ಮೇಲ್ವಿಚಾರಿಕೆಯನ್ನು ಒಪ್ಪಿಸುತ್ತಾನೆಂಬ ಹೊಸ ಅಲೋಚನೆಯನ್ನು ಇದು ಕೊಡುವುದಾಗಿದೆ.

ಯಾವ ರೀತಿಯಲ್ಲಿ ಕೆಲವರು ಉನ್ನತ ಸ್ಥಾನಗಳನ್ನು ಪಡೆಯುವ ಸಾಹಸಮಾಡುತ್ತಾರೆ ಮತ್ತು ರಾಜಕೀಯದವರಂತೆ ಜಗ್ಗಾಟವಾಡುತ್ತಾರೆ ಎಂಬ ಗ್ರಹಿಕೆಯನ್ನು ಇದು ಉಂಟುಮಾಡುತ್ತದೆ. ನಿಜವಾದ ಸಭೆಯ ಮೇಲೆ ದೇವರ ಪಾಲನೆಯನ್ನು ಗ್ರಹಿಸುವುದೆಂದರೆ, ಮೊದಲನೆಯದಾಗಿ ನಾಮಾಂಕಿತ ಸಭೆಗಳಿಂದ ನಿಜವಾದ ಸಭೆಯನ್ನು ಬೇರ್ಪಡಿಸಬೇಕು; ನಂತರದಲ್ಲಿ ಶ್ರದ್ಧಾ ಪೂರ್ವಕವಾಗಿ ಮತ್ತು ವಿನಯಪೂರ್ವಕವಾಗಿ ದೇವರ ಸಭೆಯ ಎಲ್ಲಾ ವ್ಯವಸ್ಥೆಗಳ ಬಗ್ಗೆ, ಸೇವೆ ಮತ್ತು ಸೇವಕರುಗಳ ಬಗ್ಗೆ ತಿಳಿದುಕೊಳ್ಳ ಬಯಸಬೇಕು. "ಎಲ್ಲರೂ ಅಪೋಸ್ತಲರೋ? ಎಲ್ಲರೂ ಪ್ರವಾದಿಗಳೋ? ಎಲ್ಲರೂ ಉಪದೇಶಕರೋ?" ಎಂದು ಅಪೋಸ್ತಲನು ಪ್ರಶ್ನಿಸುತ್ತಾನೆ. ಇದರಿಂದ ಸಾಮಾನ್ಯವಾಗಿ ಈ ರೀತಿಯಾಗಿರುವುದಿಲ್ಲ ಎಂಬ ಅಭಿಪ್ರಾಯವು ಮೂಡುತ್ತದೆ. ಈ ಸ್ಥಾನಗಳನ್ನು ಆಕ್ರಮಿಸುವವರು ತಾವು ಆ ಸೇವೆಗೆ, ಅಧಿಕಾರಸ್ಥಾನಕ್ಕೆ ದೇವರಿಂದ ನೇಮಕಗೊಂಡಿದ್ದೇವೆಂಬ ಸಾಕ್ಷಿಯನ್ನು ನೀಡಬೇಕಾಗುತ್ತದೆ. ಮಾನವರನ್ನು ಮೆಚ್ಚಿಸುವವರಂತಲ್ಲ ಆದರೆ ಸಭೆಯ ಶಿರಸ್ಸೂ ಹಾಗೂ ಮಹಾ ಮೇಲ್ವಿಚಾರಕನೂ ಆದ ಕರ್ತನನ್ನು ಮೆಚ್ಚಿಸುವವರಂತೆ. ಸಭೆಯಲ್ಲಿನ ಈ ವ್ಯತ್ಯಾಸಗಳು ದೇಹದ ವಿವಿಧ ಅಂಗಗಳ ವ್ಯತ್ಯಾಸಗಳಿಗೆ ಅನುಗುಣವಾಗಿದೆ ಮತ್ತು ಪ್ರತಿಯೊಂದು ಅಂಗವೂ ಅವಶ್ಯಕವಾಗಿದೆ ಹಾಗೂ ಅವುಗಳಲ್ಲಿ ಯಾವುದೊಂದನ್ನೂ ಉಪೇಕ್ಷಿಸಲಾಗದು ಎಂಬ ಸತ್ಯದ ಕಡೆಗೆ ಅಪೋಸ್ತಲನು ನಮ್ಮ ಗಮನವನ್ನು ಸೆಳೆಯುತ್ತಾ –"ಕಣ್ಣು ಕೈಗೆ – ನೀನು ನನಗೆ ಅವಶ್ಯವಿಲ್ಲವೆಂದೂ, ತಲೆಯು ಕಾಲುಗಳಿಗೆ – ನೀವು ನನಗೆ ಅವಶ್ಯವಿಲ್ಲವೆಂದೂ ಹೇಳುವುದಕ್ಕಾಗುವುದಿಲ್ಲ" "ದೇಹವು ಒಂದೇ ಅಂಗವಲ್ಲ, ಅನೇಕ ಅಂಗಗಳುಳ್ಳದ್ದಾಗಿದೆ" (ವಚನಗಳು 19. 14) ಎಂದಿದ್ದಾನೆ.

ಇದೇ ರೀತಿ ವಿವಿಧ ಬಗೆಯವರು ಈಗ ಸಭೆಯಲ್ಲಿರುವುದಿಲ್ಲ ಎಂಬುದು ಸತ್ಯ. ಅಪೊಸ್ತಲನು ಸೂಚಿಸಿದಂತೆ ವಾಣಿಗಳನ್ನಾಡುವುದು ನಂಬದವರಿಗೆ ಸೂಚನೆಯಾಗಿದೆ ಹೊರತು ನಂಬುವವರಿಗೆ ಸೂಚನೆಯಲ್ಲ (ವ 22 ನೋಡಿರಿ). ಅದೇ ರೀತಿ ಮಹತ್ಕಾರ್ಯಗಳು ಸಹಾ. ಈ ಪವಿತ್ರಾತ್ಮ ವರಗಳು ವಾಸಮಾಡಿದ್ದ ಅಪೋಸ್ತಲರು ಮರಣಿಸಿದಾಗ, ಅವರಿಂದ ಈ ವರವನ್ನು ಹೊಂದಿದವರೆಲ್ಲರೂ ಮೃತಗೊಂಡಾಗ ಈ ಅದ್ಭುತ ಕಾರ್ಯಗಳೆಂಬ ವರವು ನಾವೀಗಾಗಲೇ ಕಂಡುಕೊಂಡಂತೆ ಸಭೆಯಲ್ಲಿ ಇಲ್ಲವಾಯಿತು. ಆದರೆ ಅದಕ್ಕೆ ಅನುಗುಣವಾದ ಕಾರ್ಯವೊಂದು ಸಭೆಯಲ್ಲಿನ ಎಲ್ಲಾ ಗಂಡಸರಿಗೂ ಹೆಂಗಸರಿಗೂ ಉಳಿದುಕೊಂಡಿದೆ. ಅದೇನೆಂದರೆ, ಕರ್ತನನ್ನು, ಸತ್ಯವನ್ನು ಮತ್ತು ಕ್ರಿಸ್ತನ ದೇಹವೆಂಬ ಸಭೆಯ ಸಹಸದಸ್ಯರ ಸೇವೆಯನ್ನು ಪ್ರತಿಯೊಬ್ಬರೂ ತಮ್ಮ ಸ್ವಾಭಾವಿಕ ಸಾಮರ್ಥ್ಯಕ್ಕನುಸಾರವಾಗಿ ಮಾಡುವುದು. ಆ ಸೂಚಕ

ಕಾರ್ಯಗಳು ಈಗ ನಿಂತು ಹೋಗಿರುವುದರಿಂದ ಸತ್ಯ ಮತ್ತು ಕರ್ತನ ಜ್ಞಾನ ಮತ್ತು ಆತ್ಮನ ಕೃಪೆಯ ಬಗ್ಗೆ ಶಿಕ್ಷಣವು ಅದರ ಜಾಗವನ್ನು ಪಡೆದಿದೆ. ಆದಾಗ್ಯೂ ಗುಣಪಡಿಸುವ, ವಾಣಿಗಳನ್ನಾಡುವ, ಅದರ ಅರ್ಥ ವಿವರಿಸುವ ಕೆಳಮಟ್ಟದ ವರವು ಇನ್ನೂ ಸಭೆಯಲ್ಲಿ ಉಳಿದಿತ್ತು. "ಉತ್ತಮ ವರಗಳಿಗಾಗಿ ಪ್ರಾಮಾಣಿಕವಾಗಿ ಬಯಸಿರಿ" ಎಂಬುದಾಗಿ ಅಪೋಸ್ತಲನು ಎಚ್ಚರಿಸುತ್ತಾನೆ.

ಅವರು ಯುಕ್ತವಾಗಿ ಅಪೋಸ್ತಲತನವನ್ನು ಬಯಸಲು ಅಥವಾ ನಿರೀಕ್ಷಿಸಲು ಸಾಧ್ಯವಿಲ್ಲ. ಯಾಕೆಂದರೆ, ಅಪೋಸ್ತಲರು ಹನ್ನೆರಡು ಮಂದಿ ಮಾತ್ರವೇ. ಅವರು ಪ್ರವಾದಿಗಳಾಗಲು (ಅರ್ಥವಿವರಿಸುವವರು) ಅಥವಾ ಬೋಧಕರಾಗಲು ನಿರೀಕ್ಷಿಸಬಹುದು ಅಥವಾ ಬಯಸಬಹುದು. "ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ" (ವ 31) ಎಂದು ಅಪೋಸ್ತಲನು ಹೇಳುತ್ತಾನೆ. ಸಭೆಯಲ್ಲಿನ ಈ ಎಲ್ಲಾ ವರಗಳು ಅಥವಾ ಸೇವೆಗಳಿಗಿಂತಲೂ ಬಹಳ ಹೆಚ್ಚಾಗಿ ದೇವರ ಆತ್ಮನ ವರವಾದ ಪ್ರೀತಿಯನ್ನು ಹೊಂದಿರುವುದು ಗೌರವಯುತವೆಂದು ಹೇಳುತ್ತಾನೆ (ಅಧ್ಯಾಯ 13). ಸಮರ್ಪಕವಾದ ಪ್ರೀತಿಯನ್ನು ಪಡಕೊಂಡಿರುವ ಸಭೆಯ ಅತ್ಯಂತ ದೀನ ಸದಸ್ಯನು ಕರ್ತನ ದೃಷ್ಟಿಯಲ್ಲಿ ಪ್ರೀತಿಯ ಕೃಪೆಯ ಕೊರತೆಯುಳ್ಳ ಒಬ್ಬ ಅಪೋಸ್ತಲ ಅಥವಾ ಪ್ರವಾದಿ ಅಥವಾ ಬೋಧಕನಿಗಿಂತ ಉತ್ತಮ ಹಾಗೂ ಶ್ರೇಷ್ಠ ಸ್ಥಾನದಲ್ಲಿರುವನೆಂದು ಆತನು ಸೂಚಿಸುತ್ತಾನೆ. ನಮಗೆ ಯಾವುದೇ ವರಗಳಿದ್ದರೂ ನಮಗೆ ಪ್ರೀತಿಯ ಕೊರತೆ ಇರುವುದಾದಲ್ಲಿ ಎಲ್ಲವೂ ಶೂನ್ಯ ಮತ್ತು ಅತೃಪ್ತಿಕರವೆಂದು ಆತನು ಪ್ರಕಟಿಸುತ್ತಾನೆ. ಸಮರ್ಪಕವಾದ ಪ್ರೀತಿಯನ್ನು ಹೊಂದಿರದೆ ಅಥವಾ ಅದಕ್ಕಾಗಿ ಬಯಸದೆ ಯಾರೊಬ್ಬರೂ ದೀರ್ಘಕಾಲ ಅಪೋಸ್ತಲರ ಅಥವಾ ಪ್ರವಾದಿಗಳ ಅಥವಾ ಬೋಧಕರ ಸ್ಥಾನದಲ್ಲಿ ಮುಂದುವರೆಯಲು ದೇವರ ಸಮ್ಮತಿ ಸಾಧ್ಯವಿಲ್ಲವೆಂಬುದು ನಮಗೆ ಖಚಿತವಾಗಿ ತಿಳಿದಿರತಕ್ಕದ್ದು. ಇಲ್ಲವಾದಲ್ಲಿ ಆತನು ಕತ್ತಲೆಗೆ ಜಾರಿ ಸತ್ಯಬೋಧಕನಾಗದೆ ಸುಳ್ಳು ಬೋಧಕನೂ ಸೈತಾನನ ದಾಸನೂ ಆಗಲು ಅನುಮತಿ ಹೊಂದುತ್ತಾನೆ.

ಎಫೆಸದವರಿಗೆ ಬರೆದ ಪತ್ರಿಕೆ (4:1–16)ಯಲ್ಲಿ ಅಪೋಸ್ತಲನು ಸಭೆಯ ಈ ಏಕತೆಯು ಯೇಸುಕ್ರಿಸ್ತನೆಂಬ ಶಿರಸ್ಸಿನ ಅಡಿಯಲ್ಲಿರುವ ಅನೇಕ ಅಂಗಗಳುಳ್ಳ ಒಂದೇ ದೇಹವಾಗಿದ್ದು ಪ್ರೀತಿಯ ಬಂಧನದಲ್ಲಿ ಅನ್ಯೋನ್ಯವಾಗಿದೆ ಎಂಬ ಪಾಠವನ್ನು ಪುನಃ ಹೇಳುವವನಾಗಿದ್ದಾನೆ. ಆತನು ಇದರ ಎಲ್ಲಾ ಸದಸ್ಯರೂ ದೀನತೆಯಿಂದ, ನಮ್ರತೆಯಿಂದ, ದೀರ್ಘ ಕಷ್ಟಾನುಭವದಿಂದ ತಮ್ಮ ಕರೆಗೆ ಯೋಗ್ಯರಾಗಿ ನಡಕೊಳ್ಳುವಂತೆ ಮತ್ತು ಶಾಂತಿಯ ಬಂಧನದಲ್ಲಿ ಆತ್ಮನ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳುವಂತೆ ಎಚ್ಚರಿಸುವವನಾಗಿದ್ದಾನೆ. ಈ ಅಧ್ಯಾಯದಲ್ಲಿ ಅಪೋಸ್ತಲನು ಸಭೆಯೆಂಬ ದೇಹದ ವಿವಿಧ ಅಂಗಗಳಿಗೆ ನೀಡಿರುವ ವಿಶೇಷ ಸೇವೆಗಳ ಬಗ್ಗೆ ಹೇಳುವವನಾಗಿ ಈ ವಿವಿಧ ಸೇವೆಯ ಉದ್ದೇಶಗಳನ್ನು ತಿಳಿಸುವವನಾಗಿದ್ದಾನೆ. "ಆತನು ಕೆಲವರನ್ನು ಅಪೋಸ್ತಲರನ್ನಾಗಿಯೂ, ಕೆಲವರನ್ನು ಸೌವಾರ್ತಿಕರನ್ನಾಗಿಯೂ, ಕೆಲವರನ್ನು ಸಭಾಪಾಲಕರನ್ನಾಗಿಯೂ, ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು" (ವ11) "ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ, ಸಭೆಯ ಸೇವೆಗೋಸ್ಕರವೂ (ಅವರನ್ನು ಮಹಿಮಾ ಸೇವೆಗೆ ಅಥವಾ ಧರ್ಮಯುಗ ರಾಜ್ಯದ ಸೇವೆಗಾಗಿ ಸಿದ್ಧಪಡಿಸುವಂತೆ) ಕ್ರಿಸ್ತನ ದೇಹವು ಅಭಿವೃದ್ಧಿ (ಕಟ್ಟಲ್ಪಡುವಂತೆ) ಯಾಗುವುದಕ್ಕೋಸ್ಕರವೂ ಇವರನ್ನು ಅನುಗ್ರಹಿಸಿದನು"(ವ 13) ; ನಾವೆಲ್ಲರೂ ವಿಶ್ವಾಸದ ಐಕ್ಯತೆಯನ್ನು ಸಾಧಿಸುವವರೆಗೆ, ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲು ಪೂರ್ಣಶಕ್ತರಾಗಿ ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾದ ಮನುಷ್ಯರಾಗಿ ಬೆಳೆಯುವವರೆಗೆ ನಾವು... "ಪ್ರೀತಿಯಿಂದ ಸತ್ಯವನ್ನು ಅನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು; ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ" (ಎಫೆಸ. 4:11–16).

ನಾವಿಲ್ಲಿ ಅಪೋಸ್ತಲನು ನಮಗಾಗಿ ಬಿಡಿಸಿದ ಚಿತ್ರಣವೊಂದನ್ನು ನೋಡುತ್ತೇವೆ – ಅದು ಮಾನವ ದೇಹ, ಎಳೆಯದು ಮತ್ತು ಅಪಕ್ವವಾದುದು. ಎಲ್ಲಾ ಅಂಗಗಳೂ ಪೂರ್ಣ ಪ್ರಮಾಣಕ್ಕೆ, ಪೂರ್ಣ ಶಕ್ತಿಗೆ, ಮಾನವತ್ವದ ನಿಲುವಿಗೆ ತಕ್ಕಂತೆ ಬೆಳೆಯುವುದು ದೇವರ ಚಿತ್ತಾನುಸಾರವಾದುದು ಎಂದು ಆತನು ನಮಗೆ ತಿಳಿಸುವವನಾಗಿದ್ದಾನೆ. ಈ ಚಿತ್ರಣವು ಸಭೆಯನ್ನು ಯಥಾಪ್ರಕಾರವಾಗಿ ಅದರ ಸಂಪೂರ್ಣ ಸ್ಥಿತಿಯನ್ನು ಬಿಂಬಿಸುವುದಾಗಿದೆ. ಈ ಚಿತ್ರಣವನ್ನು ಯುಗದ ಇಂದಿನವರೆಗೆ ಸಾಗಿಸುತ್ತಾ, ನಾವು ಪ್ರಥಮ ಪುನರುತ್ಥಾನದಲ್ಲಿನ ಧರ್ಮಯುಗದ ಮುಂಜಾನೆಯ ಭವ್ಯವಾದ ರಚನೆಗಾಗಿ ಕಾಯುತ್ತಾ ಒಬ್ಬರ ನಂತರ ಒಬ್ಬರು ನಿದ್ರೆಹೋಗುತ್ತಿರುವುದನ್ನು ನೋಡುತ್ತೇವೆ. ಕೆಲವೊಂದು ಸಮಯದಲ್ಲಿ ಒಬ್ಬ ಸದಸ್ಯನಲ್ಲಿ ಹೆಚ್ಚಿನ ಬಲಹೀನತೆಯು ಮತ್ತೊಬ್ಬನಲ್ಲಿ ಹೆಚ್ಚಿನ ಶಕ್ತಿಯು ಇರಬಹುದಾದರೂ ಸಭೆಯು ಎಂದೂ ಅಪೂರ್ಣ ವ್ಯವಸ್ಥೆಯಾಗಿರದಂತೆ ಈ ಸ್ಥಳಗಳಿಗೆ ನಿರಂತರವಾಗಿ ಸರಬರಾಜಾಗುತ್ತಿವೆ. ಆದರೆ ಪ್ರತಿ ಸಮಯದಲ್ಲಿಯೂ ಪ್ರತಿಯೋರ್ವ ಸದಸ್ಯನ ಪ್ರಯತ್ನವು ನಾವೆಲ್ಲರೂ ವಿಶ್ವಾಸದ ಅನ್ಯೋನ್ಯತೆಗೆ ಬರುವವರೆಗೆ ದೇಹದ ಅಭಿವೃದ್ಧಿಗಾಗಿ, ಸದಸ್ಯರನ್ನು ಬಲಪಡಿಸುವುದಕ್ಕಾಗಿ ಮತ್ತು ಆತ್ಮನ ಕೃಪೆಯಲ್ಲಿ ಅವರನ್ನು ಸಮರ್ಥರನ್ನಾಗಿ ಮಾಡುವಂತೆ ಇರತಕ್ಕದ್ದು.

ವಿಶ್ವಾಸದ ಅನ್ಯೋನ್ಯತೆಯು ಅಪೇಕ್ಷಿಸುವಂತಾದ್ದು, ಇದಕ್ಕಾಗಿ ಹೆಣಗಾಡತಕ್ಕದ್ದು. ಆದರೂ ಸಾಮಾನ್ಯವಾಗಿ ಗುರಿಯಿಡತಕ್ಕ ಅನ್ಯೋನ್ಯತೆ ಇದಲ್ಲ. ಈ ಅನ್ಯೋನ್ಯತೆಯು ದೇವಜನರಿಗೆ ಒಮ್ಮೆ ನೀಡಲ್ಪಟ್ಟಿರುವ ವಿಶ್ವಾಸಕ್ಕನುಸಾರವಾಗಿ ಅಂದರೆ ಆ ಶುದ್ಧತ್ವ ಮತ್ತು ನಿರಾಡಂಬರತೆಗೆ ತಕ್ಕಂತೆ ಇದು ಇರತಕ್ಕದ್ದು. ಪ್ರತಿಯೊಬ್ಬ ಸದಸ್ಯನಿಗೂ ಸಣ್ಣ ಪುಟ್ಟ ಅಂಶಗಳ ಬಗ್ಗೆ ವಿವಿಧ ದೃಷ್ಟಿಕೋನವನ್ನು ಹೊಂದಿರಲು ಪೂರ್ಣ ಸ್ವಾತಂತ್ರ್ಯವಿರತಕ್ಕದ್ದು. ಮಾನವ ಊಹಾಪೋಹಗಳ, ಸಿದ್ಧಾಂತ ಮುಂತಾದುವುಗಳ ಬಗ್ಗೆ ಯಾವುದೇ ಆದೇಶಗಳಿರಬಾರದು. ದೇವರ ವಾಕ್ಯದಲ್ಲಿನ ಅನ್ಯೋನ್ಯತೆಯ ಉದ್ದೇಶವು ಸುವಾರ್ತೆಯ ತಳಹದಿ ಸಿದ್ಧಾಂತಗಳ ಮೇಲಿದೆ. (1) ಅಮೂಲ್ಯ ರಕ್ತದ ಮೂಲಕ ನಮ್ಮ ವಿಮೋಚನೆ ಮತ್ತು ಅದರ ಮೇಲೆ ನಂಬಿಕೆಯ ಮೂಲಕ

ನೀತಿನಿರ್ಣಯ (2) ಕರ್ತನಿಗಾಗಿ ಪ್ರತ್ಯೇಕಿಸಿಕೊಂಡಿರುವ ನಮ್ಮ ಅಭಿಷೇಕ ಮತ್ತು ಪರಿಶುದ್ಧತೆ, ಸತ್ಯ ಮತ್ತು ಸಹೋದರ ಸೇವೆಯನ್ನೊಳಗೊಂಡ ಅದರ ಸೇವೆಗಳು (3) ಅನ್ಯೋನ್ಯತೆಯನ್ನು ಬಯಸುವ ಈ ಅಗತ್ಯತೆಗಳ ಒತ್ತಟ್ಟಿಗೆ ಬೇರೆ ಯಾವುದೇ ದೈವ ವಾಕ್ಯದ ಸಾಂಗತ್ಯವಿರುವುದಿಲ್ಲ – ಬೇರೆ ಪ್ರತಿಯೊಂದು ಆಂಶದ ಮೇಲೆ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಗ್ರಹಿಸಬೇಕು. ಆದಾಗ್ಯೂ, ನೋಡುವ ಅಪೇಕ್ಷೆ, ಇತರರು ನೋಡಲು ಮಾಡುವ ಸಹಾಯ ಇವುಗಳ ಪ್ರತಿಯೊಂದು ಲಕ್ಷಣದಲ್ಲಿಯೂ, ವಿವರಗಳಲ್ಲಿಯೂ ದೇವರ ಯೋಜನೆಯಿದೆ. ಈ ಕಾರಣದಿಂದ ಕ್ರಿಸ್ತನ ದೇಹವೆಂಬ ಸಭೆಯ ಪ್ರತಿಯೊಬ್ಬ ಸದಸ್ಯನೂ ತನ್ನ ವೈಯುಕ್ತಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುತ್ತಾನೆ, ಶಿರಸ್ಸಿಗೆ ಮತ್ತು ಬೇರೆಲ್ಲಾ ಸದಸ್ಯರಿಗೆ ಸಮಗ್ರವಾದ ಶ್ರದ್ಧೆಯುಳ್ಳವನಾಗಿ ರುತ್ತಾನೆ ಮತ್ತು ಅವರಿಗಾಗಿ ತನ್ನ ಪ್ರಾಣವನ್ನು ಸಹ ಸಮರ್ಪಿಸಲು ಸಂತೋಷಿಸುತ್ತಾನೆ.

ಅಪೋಸ್ತಲರ ವಿಶೇಷ ಕಾರ್ಯಗಳ ಬಗ್ಗೆ, ಅವರ ಸಂಖ್ಯೆಯು ಮಿತಿಯುಳ್ಳದ್ದಾಗಿತ್ತೆಂಬ ಸತ್ಯವನ್ನು ಮತ್ತು ಅವರು ಇನ್ನೂ ಸಹಾ ಸಭೆಯಲ್ಲಿ ದೇವರ ಬಾಯಿಯಂತೆ ಆತನ ಜನರೊಂದಿಗೆ ದೇವರ ವಾಕ್ಯಗಳ ಮೂಲಕ ಮಾತನಾಡುತ್ತಾ ತಮ್ಮ ಸೇವೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ ಎಂಬುದನ್ನು ನಾವೀಗಾಗಲೇ ಪರಿಗಣಿಸಿದ್ದೇವೆ. ನಾವೀಗ ಅಪೋಸ್ತಲರು ಕರ್ತನ ದೇಹವೆಂದು ಹೇಳಿರುವ ಸಭೆಯ ಇತರ ಸೇವೆಗಳ ಬಗ್ಗೆ ಪರಿಶೀಲಿಸೋಣ.

ಕರ್ತನು ತನ್ನ ಸಾಮಾನ್ಯ ದೇಹದ (ಸಭೆಯ) ಆಶೀರ್ವಾದಕ್ಕಾಗಿ ಮತ್ತು ಅದರ ಇಂದಿನ ಮತ್ತು ಸದಾಕಾಲದ ಕಾಲದ ಒಳಿತಿಗಾಗಿ ಅಪೋಸ್ತಲರನ್ನು, ಪ್ರವಾದಿಗಳನ್ನು, ಸುವಾರ್ತಿಕರನ್ನು, ಸಭಾ ಪಾಲಕರುಗಳನ್ನು, ಬೋಧಕರುಗಳನ್ನು ಒದಗಿಸಿದ್ದಾನೆ. ಕರ್ತನನ್ನು ತಮ್ಮ ಸಭೆಯ ಶಿರಸ್ಸು, ಶಿಕ್ಷಕ ಮತ್ತು ಮಾರ್ಗದರ್ಶಿಯೆಂದು ಯಾರು ನಿಷ್ಠೆಯಿಂದ ಆತು ಕೊಂಡಿದ್ದಾರೋ ಅವರಿಗೆ ಈ ಎಲ್ಲಾ ನಿರ್ದಿಷ್ಟತೆಗಳಲ್ಲಿ ವರಗಳನ್ನು ಅಪೇಕ್ಷಿಸಬಹುದು, ಹುಡುಕಬಹುದು ಮತ್ತು ಕಂಡುಕೊಳ್ಳಬಹುದು. ಮತ್ತು ಅವರಿಗೆ ವಾಗ್ದತ್ತ ಆಶೀರ್ವಾದವು ದೊರೆತಲ್ಲಿ ಅವುಗಳನ್ನು ಅಂಗೀಕರಿಸಿಕೊಂಡು ಉಪಯೋಗಿಸಬಹುದು. ಈ ವರಗಳು ಸಭೆಯ ಮೇಲೆ ಹೇರಲ್ಪಟ್ಟಿರುವುದಿಲ್ಲ. ಆದರೆ ಯಾರು ಅದನ್ನು ನಿರ್ಲಕ್ಷಿಸುತ್ತಾರೋ ಅವರಿಗೆ ಅನುಗುಣವಾದ ನಷ್ಟ ವುಂಟಾಗುವುದು. ದೇವರು ಇದನ್ನು ಸಭೆಯಲ್ಲಿ ಪ್ರಾರಂಭದಲ್ಲಿಯೇ ಸಿದ್ಧಿಗೆ ತಂದು ಒಂದು ಮಾದರಿಯ ಸಭಾ ವ್ಯವಸ್ಥೆಯನ್ನು ಒದಗಿಸಿದನು. ಇದನ್ನು ತನ್ನ ಜನರು ಅನುಸರಿಸಲು ಮತ್ತು ಸರಿ ಪ್ರಮಾಣದ ಆಶೀರ್ವಾದಗಳನ್ನು ಅವುಗಳಿಂದ ಹೊಂದುವಂತೆ ಅಥವಾ ಅದನ್ನು ನಿರ್ಲಕ್ಷಿಸಿ ಅದಕ್ಕೆ ತಕ್ಕ ಕಷ್ಟಗಳನ್ನು ಮತ್ತು ನಿರಾಶೆಯನ್ನು ಅನುಭವಿಸುವಂತೆ ಬಿಟ್ಟುಬಿಟ್ಟನು. ನಾವು ಕರ್ತನಿಂದ ನಡಿಸಲ್ಪಡಲು ಮತ್ತು ಕಲಿಸಲ್ಪಡಲು ಇಚ್ಛೆಯುಳ್ಳವರಂತೆ ಆತನು ಮೂಲದಲ್ಲಿ ಸದಸ್ಯರನ್ನು ಯಾವ ರೀತಿಯಲ್ಲಿ ವ್ಯವಸ್ಥೆಗೊಳಿಸಿದನು ಮತ್ತು ಈ ಜನರ ಮೇಲೆ ಎಂಥಹ ಆಶೀರ್ವಾದಗಳನ್ನು ಸುರಿಸಿದನು ಎಂಬುದನ್ನು ಕಲಿತುಕೊಳ್ಳಲು ಬಯಸಬೇಕು. ಮತ್ತು ನಾವು ನಮಗೆ ದಯಪಾಲಿಸಲಿರುವ ಈ ರೀತಿಯ ಯಾವುದೇ ಆಶೀರ್ವಾದಗಳನ್ನು ಮೆಚ್ಚಿಕೊಳ್ಳಬೇಕು ಹಾಗೂ ನಮ್ಮ ಮುಂದಿನ ದಿನಗಳಿಗಾಗಿ ಅವುಗಳನ್ನು ಆಸಕ್ತಿಯಿಂದ ಹೊಂದಿಕೊಳ್ಳಬೇಕು.

ದೇಹದಲ್ಲಿ ಯಾವುದೇ ಕುಂದುಗಳು ಇರಬಾರದೆಂಬುದು ಕರ್ತನ ಇಚ್ಛೆಯಾಗಿದೆ ಎಂಬುದಾಗಿ ಅಪೋಸ್ತಲನು ಪ್ರಕಟಿಸುತ್ತಾನೆ. ಯಾವುದೇ ಒಡಕುಗಳಾಗಲೀ, ಭಾಗವಾಗಲೀ ಇರಬಾರದು. ಮಾನವ ಪದ್ಧತಿಗಳಲ್ಲಿ ಈ ವಿಭಾಗಗಳು ಅನಿವಾರ್ಯವಾಗಿವೆ. ಆದರೆ ಪೋಪರ ಅಧಿಕಾರಾವಧಿಯು ವಿಜಯದ ಹಾದಿಯಲ್ಲಿದ್ದಾಗ ನಾಮಾಂಕಿತ ಪದ್ಧತಿಯು ಶಕ್ತಿಯುತವಾಗಿತ್ತು ಮತ್ತು ಸಂಪೂರ್ಣವಾಗಿ ಹೊಂದಿಕೆಯಾಗದ ಅನೇಕ ಉಗ್ರವಾದ ಹಿಂಸಾತ್ಮಕ ಕಾನೂನು ಕ್ರಮಗಳು ಜಾರಿಯಲ್ಲಿದ್ದವು. ಎಷ್ಟಾದರೂ ಇದು ಬಲವಂತವಾದ, ಕಡ್ಡಾಯವಾದ ಬಾಹ್ಯರೀತಿಯ, ಮನಃಪೂರ್ವಕವಲ್ಲದ ಅನ್ಯೋನ್ಯತೆಯಾಗಿತ್ತು. ಯಾರನ್ನು ಮಗನು ಸ್ವತಂತ್ರರನ್ನಾಗಿ ಮಾಡಿದ್ದನೋ ಅವರು ವೈಯಕ್ತಿಕ ಸ್ವಾತಂತ್ರ್ಯವು ಉಗ್ರವಾಗಿ ನಾಶವಾಗುತ್ತಿರುವ ಇಂತಹ ಅನ್ಯೋನ್ಯತೆಯಲ್ಲಿ ಹೃತ್ಪೂರ್ವಕವಾಗಿ ಎಂದಿಗೂ ಭಾಗವಹಿಸುತ್ತಿರಲಿಲ್ಲ. ಪ್ರೊಟೆಸ್ಟಾಂಟ್ ಬಣದಲ್ಲಿರುವ ತೊಂದರೆಯು ಅವರು ಮೀರಿದ ಸ್ವಾತಂತ್ರ್ಯ ಹೊಂದಿದ್ದು ಆ ಕಾರಣದಿಂದ ಅನೇಕ ಸಣ್ಣ ಪುಟ್ಟ ಪಂಗಡಗಳಾಗಲು ಕಾರಣವಾಗಿದೆ ಎಂಬುದಲ್ಲ ಆದರೆ ಅವರಲ್ಲಿ ಇನ್ನೂ ಮಾತೃ ಸಂಸ್ಥೆಯ ಅನೇಕ ಭಾವನೆಗಳನ್ನು ಉಳಿಸಿಕೊಂಡಿದ್ದಾರೆ ಮತ್ತು ಒಂದು ಕಾಲದಲ್ಲಿ ಆ ಭಾವನೆಗಳನ್ನು ಹತ್ತಿಕ್ಕಲು ಅವುಗಳ ವಿರುದ್ಧ ಹೋರಾಡಿದ ಶಕ್ತಿಯನ್ನು ಅವರು ಈಗ ಉಳಿಸಿಕೊಂಡಿಲ್ಲ. ವಿಭಾಗಗಳಿರುವುದಕ್ಕಿಂತ, ಇಂದು ಎಲ್ಲೆಡೆಗಳಲ್ಲಾಗುತ್ತಿರುವ ವಿಭಜನೆಗಳಿಗಿಂತ ಇಂದಿನ ಕ್ರಿಸ್ತನ ಸಭೆಯ ನಿಜವಾದ ಅಗತ್ಯತೆಯು ಇನ್ನೂ ಹೆಚ್ಚಿನ ಸ್ವಾತಂತ್ರ್ಯ – ಪ್ರತಿಯೊಬ್ಬನೂ ಮಾನವ ಬಂಧನಗಳಿಂದ, ವಿಶ್ವಾಸ ಸೂತ್ರಗಳಿಂದ, ತಪ್ಪೊಪ್ಪಿಗೆ ಮುಂತಾದವುಗಳಿಂದ ವಿಮುಕ್ತಿಯೆಂದು ನಾವು ಹೇಳಿದಲ್ಲಿ ನಿಸ್ಸಂದೇಹವಾಗಿ ಅನೇಕರು ಬಹಳಷ್ಟು ಆಶ್ಚರ್ಯಪಡುತ್ತಾರೆ. ಪ್ರತಿಯೊಬ್ಬ ಕ್ರೈಸ್ತನೂ ಕರ್ತನು ಆತನನ್ನು ವಿಮೋಚಿಸಿದ ಸ್ವಾತಂತ್ರ್ಯದಲ್ಲಿ (ಗಲಾ. 5:1; ಯೋಹಾನ 8:32) ಭದ್ರನಾಗಿದ್ದು ನಿಷ್ಠೆಯಲ್ಲಿ ಕ್ರಿಸ್ತನೊಂದಿಗೆ ಅನ್ಯೋನ್ಯವಾಗಿದ್ದಲ್ಲಿ ದೇವರ ವಾಕ್ಯದಲ್ಲಿ ಬೋಧಿಸಿರುವ ಮೂಲ ಐಕ್ಯತೆಯು ಬಹು ಬೇಗನೆ ಗ್ರಹಿಕೆಯಾಗುತ್ತದೆ ಮತ್ತು ಕ್ರಿಸ್ತನ ನಿಜವಾದ ಮಕ್ಕಳೆಲ್ಲರೂ, ನೂತನ ಸೃಷ್ಟಿಯ ಎಲ್ಲಾ ಸದಸ್ಯರುಗಳೂ ಮತ್ತೊಬ್ಬ ಜೊತೆಸದಸ್ಯನೊಂದಿಗೆ ಅದೇ ರೀತಿಯ ಸ್ವಾತಂತ್ರ್ಯದಲ್ಲಿ ಸೆಳೆಯಲ್ಪಡುತ್ತಾರೆ ಮತ್ತು ಒಬ್ಬರಿಗೊಬ್ಬರು ಐಹಿಕ ಸಮಾಜದ ಕಟ್ಟುಪಾಡಿನಲ್ಲಿ ಬಂಧಿಸಲ್ಪಟ್ಟವರಿಗಿಂತ ಹೆಚ್ಚಿನ ರೀತಿಯಲ್ಲಿ ಪ್ರೀತಿಯ ಬಂಧನದಲ್ಲಿ ಕಟ್ಟಲ್ಪಡುತ್ತಾರೆ. "ಕ್ರಿಸ್ತನ ಪ್ರೀತಿಯು ನಮಗೆ ಒತ್ತಾಯ ಮಾಡುತ್ತದೆ" (ನಮ್ಮನ್ನು ಒಟ್ಟಾಗಿ ಇಡುತ್ತದೆ) (2 ಕೊರಿ. 5:14).

ಆರೋನನ ವಂಶದ ಎಲ್ಲಾ ಸದಸ್ಯರುಗಳೂ ಯಾಜಕೋದ್ಯೋಗಕ್ಕೆ ಅರ್ಹರಾಗಿದ್ದರು; ಆದರೆ ಈ ಸೇವೆಗೆ ಕೆಲವು ಇತಿಮಿತಿಗಳೂ, ಅಡೆತಡೆಗಳೂ, ಅನರ್ಹತೆಗಳೂ

ಇದ್ದವು. ಅದರಂತೆ ಪ್ರತಿಛಾಯಾ ಯಾಜಕತ್ವದಲ್ಲಿಯೂ ಸಹಾ ಎಲ್ಲಾ ಯಾಜಕರೂ, ಅಭಿಷಕ್ತ ಕುಟುಂಬಕ್ಕೆ ಸೇರಿದವರು. ಈ ಅಭಿಷೇಕವು ಎಲ್ಲರಿಗೂ ಸುವಾರ್ತೆಯನ್ನು ಸಾರಲು ಮತ್ತು ಬೋಧಿಸಲು ಪೂರ್ಣ ಅಧಿಕಾರವನ್ನು ಸೂಚಿಸುತ್ತದೆ. "ಕರ್ತನ ಆತ್ಮವು ನನ್ನ ಮೇಲಿದೆ, ಯಾಕೆಂದರೆ, ಆತನು ನನ್ನನ್ನು ದೀನರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ, ಮುರಿದ ಹೃದಯಗಳನ್ನು ಕಟ್ಟುವುದಕ್ಕಾಗಿ ಅಭಿಷೇಕಿಸಿದ್ದಾನೆ" ಎಂದು ದೇವರ ವಾಕ್ಯವು ತಿಳಿಸುತ್ತದೆ. ಈ ಮಾತುಗಳು ಕ್ರಿಸ್ತನ ಶಿರಕ್ಕೆ, ನೂತನ ಸೃಷ್ಟಿಗೆ, ರಾಜವಂಶಸ್ಥ ಯಾಜಕತ್ವಕ್ಕೆ ಅನ್ವಯವಾಗುವಾಗ ಅವು ಎಲ್ಲಾ ಸದಸ್ಯರಿಗೂ ಅನ್ವಯವಾಗುತ್ತವೆ. ಯಾಕೆಂದರೆ, ಸಾಮಾನ್ಯ ಅರ್ಥದಲ್ಲಿ ಪ್ರತಿಯೊಬ್ಬ ಅಭಿಷಕ್ತ ಮಗುವೂ ಪವಿತ್ರಾತ್ಮನಿಂದ ಅಭಿಷೇಕ ಹೊಂದಿದ್ದು ದೇವರ ವಾಕ್ಯವನ್ನು ಸಾರಲು ಪೂರ್ಣ ಅಧಿಕಾರವನ್ನೂ, ನಿಯೋಗವನ್ನೂ ಪಡೆದಿದೆ " ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ" (1 ಪೇತ್ರ 2:9).

ಆದರ್ಶಭೂತ ಯಾಜಕರುಗಳು ಕೆಲವೊಂದು ಕುಂದುಗಳಿಂದ ಮುಕ್ತರಾಗಿದ್ದು, ನಿರ್ಧಿಷ್ಟ ವಯಸ್ಸಿನವರಾಗಿರ ಬೇಕಾಗುತ್ತದೆ, ಅದರಂತೆಯೇ ರಾಜ ವಂಶಸ್ಥರಾದ ಯಾಜಕ ಸದಸ್ಯರಲ್ಲಿ ಸಾರ್ವಜನಿಕ ಸೇವೆ ಮಾಡಲಿಕ್ಕೆ ಇತರರು ಹೊಂದಿರುವಂತ ಅರ್ಹತೆ ಕೆಲವರಿಗೆ ಇಲ್ಲದಿರುವುದು. ಪ್ರತಿಯೊಬ್ಬರೂ ಶಾಂತಚಿತ್ತರಾಗಿ ದೇವರಿಂದ ತಾವು ಹೊಂದಿರುವ ವರವನ್ನು ಬಯಸಬೇಕು. (ರೋಮಾ.12:3,6) ಅದರಂತೆ ಅವರ ಮನವಾರ್ತೆತನ ಮತ್ತು ಜವಾಬ್ದಾರಿಗಳನ್ನು ಸಹಾ. ಅದರಂತೆ ಪ್ರತಿಯೊಬ್ಬ ಸದಸ್ಯನೂ ಬೇರೆಯವರ ಸ್ವಾಭಾವಿಕ ಮತ್ತು ಆತ್ಮಿಕ ಅರ್ಹತೆಗಳ, ಪ್ರಾಪ್ತಿಗಳ ಅರಿವನ್ನು ಹೊಂದಿರಬೇಕು ಮತ್ತು ಅದರಂತೆ ದೇವರ ಚಿತ್ತವನ್ನು ನಿರ್ಣಯಿಸಬೇಕು. ಮಾದರಿಗಳಲ್ಲಿ ಪ್ರಾಯವು ಸಹಾ ಒಂದು ಅಂಶ. ಆದರೆ ಇದು ಪ್ರತಿರೂಪದ ಯಾಜಕರಲ್ಲಿ ಅನುಭವವನ್ನು, ಗುಣಲಕ್ಷಣಗಳ ಅಭಿವೃದ್ಧಿಯನ್ನು ಸೂಚಿಸುತ್ತದೆ, ನಮೂನೆಯಲ್ಲಿ ವಕ್ರ ದೃಷ್ಟಿಯುಳ್ಳವರನ್ನು ಪ್ರತಿಛಾಯ ಯಾಜಕವರ್ಗದಲ್ಲಿ ಒಳದೃಷ್ಟಿಯ ಕೊರತೆಯುಳ್ಳವರೆಂದೂ, ಆತ್ಮಿಕ ಸಂಗತಿಗಳ ಬಗ್ಗೆ ಅಂಧರೆಂದು ಸೂಚಿಸಲಾಗುತ್ತದೆ. ಇದು ಸಭೆಯಲ್ಲಿ ಸಾರ್ವಜನಿಕ ಸೇವೆಗೆ ಅಡ್ಡಿಯಾಗುತ್ತದೆ. ಇದರಂತೆ ಪ್ರತಿಛಾಯಾ ಯಾಜಕವರ್ಗದವರಿಗೆ ಅಡ್ಡಿಯಾಗಿರುವ ಎಲ್ಲಾ ಸಂಗತಿಗಳು ರಾಜ ವಂಶಸ್ಥ ಯಾಜಕರಲ್ಲಿ ವಿವಿಧ ರೀತಿಯ ನೀತಿ ಅಥವಾ ಬೌದ್ಧಿಕ ಕುಂದು ಕೊರತೆಗಳನ್ನು ಪ್ರತಿನಿಧಿಸುತ್ತವೆ.

ಆದರೂ ನಮೂನೆಯಲ್ಲಿನ ವಿಕೃತ ಯಾಜಕರುಗಳು ಇತರರ ಎಲ್ಲಾ ಸೌಕರ್ಯಗಳನ್ನು ತಾವು ಅನುಭವಿಸುತ್ತಾರೆ – ಹುಳಿ ಇಲ್ಲದ ರೊಟ್ಟಿಗಳನ್ನು, ಬಲಿಯಾದವುಗಳನ್ನು ತಿನ್ನುವುದು ಮುಂತಾಗಿ. ಹಾಗೆಯೇ ಪ್ರತಿರೂಪರಾದ ನಮಗೆ–ಈ ವಿಕೃತಗಳು ಕ್ರಿಸ್ತನ ಅಂಗಗಳಾದವರನ್ನು ಸಭೆಯ ಮತ್ತು ಸತ್ಯದ ಸಾರ್ವಜನಿಕ ಸೇವೆ ಮಾಡಲು, ಆತನ ಆತ್ಮೀಕ ಬೆಳವಣಿಗೆಗೆ ಹಾಗೂ ಮಾನ್ಯತೆಗೆ ಅಡಚಣೆಯಾಗಲಾರದು. ಯಾಕಂದರೆ ಅವರಿಗೆ ಕರ್ತನ ಆತ್ಮೀಕ ಮೇಜಿನಲ್ಲಿ ಮತ್ತು ಕೃಪಾಸನದಲ್ಲಿ ಪೂರ್ಣಾಧಿಕಾರವಿದೆ. ದೈಹಿಕವಾಗಿ ಕೊರತೆ ಇಲ್ಲದವರು ಮತ್ತು ಪ್ರಾಪ್ತ ವಯಸ್ಸಿನವರಲ್ಲದೆ ಬೇರೆ ಯಾರೂ ಮಹಾ ಯಾಜಕನ ಸ್ಥಾನವನ್ನು ಅಲಂಕರಿಸುವುದು ಸಾಧ್ಯವಿಲ್ಲದಿರುವಂತೆ, "ದೇವರವಾಕ್ಯ ಮತ್ತು ಸಿದ್ಧಾಂತ" ಗಳ ಸೇವೆ ಮಾಡುವವರೂ ಸಹಾ ಅನುಭವವಿಲ್ಲದವರಾಗಿರಬಾರದು. ಆದರೆ ತಮ್ಮ ಗುಣಲಕ್ಷಣಗಳಲ್ಲಿ ಪಕ್ವವಾಗಿರುವ ದೇಹದ ಸದಸ್ಯರುಗಳಿಗೆ ಅವರ ಅನುಭವ ಮತ್ತು ಆತ್ಮೀಕ ಫಲಗಳು ಅಂಥಹ ಸೇವೆಗೆ ಅವರನ್ನು ಅರ್ಹರನ್ನಾಗಿ ಮಾಡುತ್ತವೆ. ಅವರನ್ನು ಹಿರಿಯರೆಂದು ಗ್ರಹಿಸಬಹುದು – ಅವರು ಸ್ವಾಭಾವಿಕ ವಯಸ್ಸಿನಲ್ಲಿ ಹಿರಿಯರಾಗಿರಬೇಕೆಂದಿಲ್ಲ, ಆದರೆ ಸತ್ಯದ ವಿಷಯದಲ್ಲಿ ಹಿರಿಯರು ಅಥವಾ ಜೇಷ್ಠರು ಮತ್ತು ಸಮಾಲೋಚನೆ ಮಾಡಶಕ್ತರು ಮತ್ತು ಸಹೋದರರನ್ನು ದೇವರ ಮಾರ್ಗದಲ್ಲಿ ನಡೆಸುವವರೂ ಆಗಿರತಕ್ಕದ್ದು.

ಹಿರಿಯರು ಎಂಬ ಪದದ ಈ ಅರ್ಥದೊಡನೆ ನಾವು ದೇವರ ವಾಕ್ಯದ ಯುಕ್ತತೆಯನ್ನು ಗ್ರಹಿಸುವವರಾಗಿದ್ದು ಸತ್ಯವಾದ ಆತ್ಮೀಕ ಸೇವೆಮಾಡುವವರೆಲ್ಲರನ್ನು ಸಮರ್ಪಕವಾಗಿ "ಹಿರಿಯರು' ಎಂದು ಸಂಬೋಧಿಸಲಾಗುತ್ತದೆಂದು ಪ್ರಕಟಿಸುತ್ತೇವೆ. ಅವರು ಬೇರೆ ರೀತಿಯಲ್ಲಿ ಅಪೋಸ್ತಲರ ಅಥವಾ ಪ್ರವಾದಿಗಳ ಅಥವಾ ಸೌವಾರ್ತಿಕರ ಅಥವಾ ಸಭಾ ಪಾಲಕರುಗಳ ಅಥವಾ ಬೋಧಕರುಗಳ ಸೇವೆಯನ್ನುಮಾಡುತ್ತಿರಬಹುದು. ಈ ಯಾವುದೇ ಸೇವಾಸ್ಥಾನವನ್ನು ತುಂಬಲು ಒಬ್ಬರು ಸಭೆಯಲ್ಲಿ ಹಿರಿಯರೆಂಬ ಮಾನ್ಯತೆ ಪಡೆಯತಕ್ಕದ್ದು. ಈ ರೀತಿಯಲ್ಲಿ ಅಪೋಸ್ತಲರು ಅಂಥವರನ್ನು ಹಿರಿಯರೆಂದು ಪ್ರಕಟಿಸುತ್ತಾನೆ (1 ಪೇತ್ರ 5:1, 2 ಯೋಹಾನ 1). ಸಭೆಯ ಸೇವಕರ ಬಗ್ಗೆ ಮತ್ತು ಅವರ ಆಯ್ಕೆಯ ಬಗ್ಗೆ ಹೇಳುವಾಗ ಅವರನ್ನು ಸತ್ಯವೇದದ ಈ ಕೆಳಕಂಡ ಮೂರು ರೀತಿಗಳಲ್ಲಿ ಕರೆಯಲಾಗುತ್ತದೆ

## ಬಿಷೋಪರುಗಳು, ಸಭಾ ಪಾಲಕರುಗಳು ಮತ್ತು ಸಭಾ ಹಿರಿಯರು

### Bishops, Elders, Pastors

ಈ ಮೂರು ಪದಗಳೂ ವಿವಿಧ ಪಂಗಡಗಳ ಸಭೆಗಳಲ್ಲಿ ತಪ್ಪಾಗಿ ಅನ್ವಯಿಸುತ್ತಿರುವುದರಿಂದ ಹೇಗೂ ತಪ್ಪುದಾರಿಗೆಳೆ ಯುತ್ತಿವೆ. ಬಿಷೊಪ್ ಎಂಬ ಪದವು ಕೇವಲ ಮೇಲ್ವಿಚಾರಕ ಎಂದು ಸೂಚಿಸುವುದಾಗಿದೆ ಎಂದು ನಾವು ವಿವರಿಸಬೇಕಾಗಿದೆ. ಪ್ರತಿಯೊಬ್ಬ ನೇಮಿತ ಹಿರಿಯನೂ ತನಗೆ ಕೊಡಲ್ಪಟ್ಟ ಕಾರ್ಯವು ದೊಡ್ಡದಿರಲಿ ಸಣ್ಣದಿರಲಿ ಅದರ ಮೇಲ್ವಿಚಾರಕನಾಗಿರುತ್ತಾನೆ. ಈ ಪ್ರಕಾರ ಅಪೋಸ್ತಲನು ಒಮ್ಮೆ ಎಫೆಸ ಸಭೆಯ ಹಿರಿಯರನ್ನು ಸಂಧಿಸಿದನು ಮತ್ತು ಅವರಿಗೆ ವಿದಾಯದ ಬುದ್ಧಿವಾದ ಹೇಳುತ್ತಾ – "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" (ಅ.ಕೃ. 20:28) ಎಂದಿದ್ದಾನೆ.

ಹೇಗೂ ದೇವರ ಅನುಗ್ರಹದಿಂದ ಈ ಹಿರಿಯರಲ್ಲಿ ಕೆಲವರಿಗೆ ಸಭೆಯಲ್ಲಿ ವಿಶಾಲವಾದ ಪ್ರಭಾವದ ಅವಕಾಶಗಳು ದೊರೆತು ಅವರನ್ನು ಬಹುಶಃ ಆ ಕಾರಣದಿಂದ ಸರ್ವಸಾಮಾನ್ಯ ಮೇಲ್ವಿಚಾರಕನೆಂದು ಕರೆಯಲಾಯಿತು. ಅವರೆಲ್ಲರೂ ಅಪೋಸ್ತಲರಾಗಿದ್ದರು. ಪೌಲನಿಗೆ ಏಷ್ಯಾ ಮೈನರ್ ಮತ್ತು ದಕ್ಷಿಣ ಯೂರೋಪಿನಲ್ಲಿದ್ದ ಅನ್ಯಜನರ ಮಧ್ಯದಲ್ಲಿ ಸ್ಥಾಪಿಸಲ್ಪಟ್ಟ ಸಭೆಗಳ ಮೇಲ್ವಿಚಾರಕನಾಗುವ ಅವಕಾಶ ಒದಗಿ ಬಂತು. ಆದರೆ ಈ ರೀತಿಯ ಸರ್ವ ಸಾಮಾನ್ಯ ಮೇಲ್ವಿಚಾರಿಕೆಯು ಅಪೋಸ್ತಲರಿಗೆ ಮಾತ್ರವೇ ನಿರ್ಬಂಧವಾಗಿರಲಿಲ್ಲ. ದೇವರು ತನ್ನ ಅನುಗ್ರಹದಿಂದ ಆ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲು ಇನ್ನೂ ಅನೇಕರನ್ನು ಎಬ್ಬಿಸಿದನು – "ಅಶುದ್ಧವಾದ ಅರ್ಥಪ್ರಾಪ್ತಿಗಾಗಿ ಅಲ್ಲ, ಆದರೆ ಸಿದ್ಧವಾದ ಮನಸ್ಸಿಗಾಗಿ"– ಕರ್ತನನ್ನೂ ಸಹೋದರರನ್ನು ಸೇವಿಸುವ ಅಪೇಕ್ಷೆಯುಳ್ಳವರಿಗಾಗಿ. ಪ್ರಾಥಮಿಕವಾಗಿ, ತಿಮೋಥೆಯನು ಪೌಲನ ಸೂಚನೆಯ ಮೇರೆಗೆ ಈ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದನು ಮತ್ತು ಭಾಗಶಃ ಆತನ ಪ್ರತಿನಿಧಿಯಾಗಿದ್ದನು. ದೇವಜನರ ಅನೇಕ ಗುಂಪುಗಳು ಆತನ ವಶಕ್ಕೆ ಒಪ್ಪಿಸಲ್ಪಟ್ಟಿದ್ದವು. ದೇವರು ಅಂದು ಮತ್ತು ಇಂದು ಸಹಾ ತನ್ನ ಹಿಂಡನ್ನು ಪಾಲಿಸಲು ಮತ್ತು ಎಚ್ಚರಿಸಲು ಮೇಲ್ವಿಚಾರಕರುಗಳನ್ನು ಆರಿಸಿ ಕಳುಹಿಸಲು ಶಕ್ತನಾಗಿರುತ್ತಾನೆ. ದೇವಜನರಾದವರು ಅಂಥಹ ಮೇಲ್ವಿಚಾರಕರುಗಳು ನೀಡುವ ಬುದ್ಧಿವಾದಗಳು ಸರಿಯಾಗಿವೆಯೋ ಇಲ್ಲವೋ ಎಂದು ನಿರ್ಣಯಿಸಲು ಶಕ್ತರಿರಬೇಕು. ಇದು ದೈವಿಕ ಜೀವನ, ನಮ್ರ ನಡವಳಿಕೆ ಮತ್ತು ಸ್ವಾರ್ಥತ್ಯಾಗದ ಮನೋಭಾವಗಳಿಂದ ಪ್ರಮಾಣೀಕರಿಸಲ್ಪಡಬೇಕು; ಎಲ್ಲಾ ಒಳಸಂಚುಳ್ಳ ಕುತಂತ್ರತೆ ಮತ್ತು ಅಶುದ್ಧವಾದ ಅರ್ಥಪ್ರಾಪ್ತಿ ಇವುಗಳು ಕಂಡುಬರಬಾರದು. ಮಾತ್ರವಲ್ಲದೆ ಅವರುಗಳು ನೀಡುವ ಎಲ್ಲಾ ಬೋಧನೆಗಳು ಸತ್ಯವೇಧಾಧ್ಯಯನದ ಪರಿಶೀಲನೆಗೆ ನಿಲ್ಲುವಂತಾದ್ದಾಗಿರಬೇಕು. ಪ್ರತಿನಿತ್ಯವೂ ಅವರ ಹೇಳಿಕೆಗಳು ದೇವರವಾಕ್ಯಗಳಿಗನುಸಾರವಾಗಿವೆಯೋ ಎಂದು ಹುಡುಕಿ ಪರಿಶೀಲಿಸಬೇಕು. ಈ ರೀತಿಯಾಗಿ ಅಪೋಸ್ತಲರ ಬೋಧನೆಗಳ ಬಗ್ಗೆ ಮಾಡಿದ್ದನ್ನು ನಾವು ಅ.ಕೃ. ದಲ್ಲಿ ನೋಡುತ್ತೇವೆ –" ಆ ಸಭೆಯವರು... ಇವರು ಹೇಳುವ ಮಾತು ಹೌದೋ ಎನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು" (ಅ.ಕೃ. 17: 11).

ಆದಾಗ್ಯೂ, ನಾವೀಗ ಸಭಾಚರಿತ್ರೆಯ ಮೂಲಕ ನಿರ್ಣಯಿಸುವಂತೆ ಸಂಘರ್ಷ ಮತ್ತು ಗೌರವವನ್ನು ಪ್ರೀತಿಸುವ ಸ್ಪೂರ್ತಿಯು ತ್ವರಿತಗತಿಯಲ್ಲಿ ನಮ್ರ ಶ್ರದ್ಧೆ ಮತ್ತು ಸ್ವಾರ್ಥತ್ಯಾಗದ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಅದೇ ಸಮಯದಲ್ಲಿ ಸುಲಭವಾಗಿ ನಂಬುವಿಕೆ ಮತ್ತು ಮುಖಸ್ತುತಿ ಇವುಗಳು ಶಾಸ್ತ್ರಗ್ರಂಥಗಳ ಶೋಧನೆಯನ್ನು ಹಿಂದಕ್ಕೆ ಹಾಕಿದೆ. ಇದರ ಫಲವಾಗಿ ಮೇಲ್ವಿಚಾರಕರುಗಳು ಅಧಿಕಾರಶಾಹಿಗಳಂತೆ ವರ್ತಿಸುತ್ತಾ ಕ್ರಮೇಣವಾಗಿ ಅಪೋಸ್ತಲ ಮುಂತಾದವರ ಸಮಾನ ಸ್ಥಾನವನ್ನು ಕೇಳುವವರಾಗಿದ್ದಾರೆ. ಕಡೆಗೆ ಅವರಲ್ಲಿಯೇ ಕೆಲ ಸಂಘರ್ಷಣೆ ಉಂಟಾಗಿ ಕೆಲವರು ತಮ್ಮನ್ನು ಪ್ರಧಾನ ಬಿಷೋಪರೆಂದು ಕರೆದುಕೊಂಡು ಕ್ರಮೇಣವಾಗಿ ಈ ಪ್ರಧಾನ ಬಿಷೋಪರುಗಳಲ್ಲಿಯೇ ಸಂಘರ್ಷವುಂಟಾಗಿ ಅವರಲ್ಲಿ ಒಬ್ಬರು ಪೋಪರ ಸ್ಥಾನಕ್ಕೆ ಏರುತ್ತಾರೆ. ಇದೇ ರೀತಿಯ ಉತ್ಸಾಹವು ಪೋಪರಲ್ಲಿ ಮಾತ್ರವಲ್ಲ ಅವರಿಂದ ತಪ್ಪು ಮಾರ್ಗಕ್ಕೆ ಎಳೆಯಲ್ಪಟ್ಟವರಲ್ಲಿಯೂ ಹೆಚ್ಚಿನ ಅಥವಾ ಕಡಿಮೆ ಪ್ರಮಾಣದಲ್ಲಿ ಉಂಟಾಗುತ್ತಿದ್ದು ಮೂಲರೂಪದ ಸರಳ ವ್ಯವಸ್ಥೆಯು ಮಾಯವಾಗಿದೆ. ಇದರ ಪರಿಣಾಮವಾಗಿ ನಾವು ಇಂದು ಮೂಲ ಸಭೆಯಲ್ಲಿ ಕಂಡುಬಂದ ವ್ಯವಸ್ಥೆಯನ್ನು–ಅಂದರೆ ಯಾವುದೇ ಪಂಥದ ಹೆಸರಿಲ್ಲದೆ, ಕೆಲವರಿಂದ ಹಲವರ ಮೇಲೆ ಯಾವುದೇ ವೈಭವ, ಗೌರವ ಮತ್ತು ಅಧಿಕಾರವಿಲ್ಲದೆ, ಯಾಜಕ ಮತ್ತು ಸಾಮಾನ್ಯನೆಂಬ ವಿಭಾಗಗಳಿಲ್ಲದೆ ಇದ್ದ ರಚನೆಯನ್ನು ಇಂದು ಅದು ಒಂದು ವ್ಯವಸ್ಥೆಯೇ ಆಗಿರಲಿಲ್ಲವೆಂದು ಪರಿಗಣಿಸಲಾಗುತ್ತಿದೆ. ನಾವು ಈ ಗೌರವಾನ್ವಿತವಲ್ಲದವರೊಡನೆ ನಮ್ಮ ಸ್ಥಾನವನ್ನು ಗುರುತಿಸಿಕೊಳ್ಳಲು, ಆದಿಸಭೆಯ ಉದಾಹರಣೆಯನ್ನು ನಕಲು ಮಾಡಲು ಮತ್ತು ಅದೇ ರೀತಿಯ ಸ್ವಾತಂತ್ರ್ಯ ಮತ್ತು ಆಶೀರ್ವಾದಗಳನ್ನು ಪಡಕೊಳ್ಳಲು ಸಂತೋಷಿಸುತ್ತೇವೆ.

ಸಭಾ ಹಿರಿಯರಾಗಿ ಎಲ್ಲಾ ಮೇಲ್ವಿಚಾರಕರುಗಳು, ಪರಿಪಾಲಕರುಗಳು, ಚಿಂರೋನಿನ ಶ್ರೇಯಸ್ಸನ್ನು ಕಾದುಕೊಂಡಿರುವರು. ಕೆಲವರು ಸ್ಥಳೀಯರಾಗಿ, ಮತ್ತೆ ಕೆಲವರು ವಿಶಾಲವಾದ ಅರ್ಥದಲ್ಲಿ, ಪ್ರತಿಯೊಬ್ಬರೂ ತಮ್ಮ ತಮ್ಮ ತಲಾಂತು ಮತ್ತು ಸಾಮರ್ಥ್ಯಕ್ಕನುಸಾರವಾಗಿ ದೇವರ ಹಿಂಡಿನ ಸುವಾರ್ತಿಕರಾಗಿ ಸೇವೆ ಸಲ್ಲಿಸಬಹುದು. ಅವರ ವಿದ್ಯಾರ್ಹತೆ ಅವರಿಗೆ ಅನುಕೂಲಕರವಾಗಿದ್ದು, ಪರಿಸ್ಥಿತಿಗಳು ಅನುಮತಿಸುವುದಾದಲ್ಲಿ ಅವರು ಸತ್ಯವನ್ನು ಹೊಸದಾಗಿ ಕಲಿಯಲು ಪ್ರಾರಂಭಿಸಿರುವಂತವರಿಗೆ ಬೋಧಿಸಬಹುದು,ಸುವಾರ್ತೆಯನ್ನು ಕೇಳುವ ಕಿವಿಯುಳ್ಳವರನ್ನು ಕಂಡುಕೊಳ್ಳಬಹುದು. ಕೆಲವರು ಸಾಮಾಜಿಕ ರೀತಿಯ ವಿಶೇಷ ಅರ್ಹತೆಯುಳ್ಳವರಾಗಿದ್ದು ಸಭಾಪಾಲಕರಂತೆ (ಕುರುಬರಂತೆ) ಹಿಂಡಿನ ಸೇವೆ ಮಾಡಬಹುದು. ಅವರು ದೇವಜನರ ಹಿತವನ್ನು ಕಾಪಾಡುವಂತೆ ವೈಯುಕ್ತಿಕವಾಗಿ, ವ್ಯಕ್ತಿಗತವಾಗಿ ಅವರ ಮನೆಗಳನ್ನು ಸಂದರ್ಶಿಸುವುದರ ಮೂಲಕ ಅವರನ್ನು ಹುರಿದುಂಬಿಸುವುದರ ಮೂಲಕ, ಬಲಪಡಿಸುವುದರ ಮೂಲಕ ಕುರಿವೇಷದ ತೋಳಗಳಿಂದ ಅವರನ್ನು ರಕ್ಷಿಸುವುದಕ್ಕಾಗಿ ಅವರನ್ನು ಒಂದಾಗಿ ಇಡಬಹುದು. ಇಲ್ಲವಾದಲ್ಲಿ ಆ ಕುರಿವೇಷದ ತೋಳಗಳು ಅವರನ್ನು ಕಚ್ಚಿ ನಾಶಪಡಿಸುವುದು. ಪ್ರವಾದಿಗಳಿಗೂ ಸಹಾ ಸೇವೆ ಮಾಡಲು ವಿಶೇಷ ಅರ್ಹತೆಗಳಿದ್ದವು.

"ಪ್ರವಾದಿ' ಎಂಬ ಪದವನ್ನು ಇಂದು ಸಾಮಾನ್ಯವಾಗಿ ಮೊದಲಿನಂತೆ ವಿಶಾಲವಾದ ಅರ್ಥದಲ್ಲಿ ಉಪಯೋಗಿಸುತ್ತಿಲ್ಲ. ನಿಜವಾಗಿ ಹೇಳುವುದಾದರೆ ಇದನ್ನು "ದಿವ್ಯಜ್ಞಾನಿ' ಅಥವಾ "ಕಾಲಜ್ಞಾನಿ' ಎಂಬಂತೆ ಅರ್ಥೈಸಲಾಗಿದೆ. ಪ್ರವಾದಿ ಎಂಬ ಪದವು "ಸಾರ್ವಜನಿಕ ವಕ್ತಾರ' ಅಥವಾ "ವಾಗ್ಮಿ' ಎಂಬ ಅರ್ಥವನ್ನು ಕಟ್ಟುನಿಟ್ಟಾಗಿ ಸೂಚಿಸುತ್ತದೆ. ದರ್ಶನಗಳ ದಿವ್ಯಜ್ಞಾನಿ ಅಥವಾ ಪ್ರಕಟನೆಗಳನ್ನು ಸ್ವೀಕರಿಸುವಾತನು ಸಹಾ ಅದನ್ನು ಸಾರಿಹೇಳುವವನೆಂಬ ಅರ್ಥದಲ್ಲಿ ಪ್ರವಾದಿಯೆನಿಸಬಹುದು. ಆದರೆ ಈ ಎರಡೂ ಅಲೋಚನೆಗಳು ವಿಭಿನ್ನವಾಗಿವೆ. ಮೋಶೆ ಮತ್ತು ಆರೋನರ ವಿಷಯದಲ್ಲಿ, ಮೋಶೆಯು ದೇವರ

ಪ್ರತಿನಿಧಿಯಾಗಿ ಹೆಚ್ಚಿನವನಾಗಿದ್ದನು. ಕರ್ತನು ಆತನಿಗೆ– "ನಿನ್ನನ್ನು ಫರೋಹನಿಗೆ ದೇವರಸ್ಥಾನದಲ್ಲಿ (ಶಕ್ತಿವಂತನನ್ನಾಗಿ, ಶ್ರೇಷ್ಟನನ್ನಾಗಿ) ನೇಮಿಸಿದ್ದೇನೆ. ನಿನ್ನ ಅಣ್ಣನಾದ ಆರೋನನು ನಿನಗೋಸ್ಕರ ಪ್ರವಾದಿಯಾಗಿರುವನು" (ವಿಮೋ.7:1) ಎನ್ನುತ್ತಾನೆ. ನಾವೀಗಾಗಲೆ ಹಲವು ಅಪೋಸ್ತಲರಿಗೆ ಮುಂದೆ ಸಂಭವಿಸಲಿರುವ ಸಂಗತಿಗಳು ತಿಳಿಸಲ್ಪಡುತ್ತಿದ್ದವೆಂಬ ಅರ್ಥದಲ್ಲಿ ಅವರು ಸಹಾ ದಿವ್ಯಜ್ಞಾನಿಗಳಾಗಿದ್ದರು ಎಂದು ನೋಡಿದ್ದೇವೆ. ಅವರೆಲ್ಲರೂ ಪ್ರವಾದಿಗಳ ಸಮೀಪ ಸ್ಥಾನದಲ್ಲಿದ್ದವರು ಎಂದು ನಾವೀಗ ಅಭಿಪ್ರಾಯ ಪಡುತ್ತೇವೆ.ಅಂದರೆ ಅವರು–ಮುಖ್ಯವಾಗಿ ಪೇತ್ರ ಯೋಹಾನರು ಸಾರ್ವಜನಿಕ ವಾಗ್ಮಿಗಳು. ಆದರೆ ಹಲವು ಸಾರ್ವಜನಿಕ ವಕ್ತಾರರುಗಳು ಅಥವಾ ಪ್ರವಾದಿಗಳು ಸಹಾ ಇದ್ದರು. ಉದಾಹರಣೆಗೆ ಬಾರ್ನಬನು ಇವರಲ್ಲಿ ಒಬ್ಬನು. "ಯೂದನೂ ಮತ್ತು ಸೀಲನೂ ತಾವೇ ಪ್ರವಾದಿಗಳಾಗಿದ್ದರಿಂದ ಸಹೋದರರನ್ನು ಅನೇಕ ಮಾತುಗಳಿಂದ ಪ್ರಭೋಧಿಸಿ ಧೃಢಪಡಿಸಿದರು " (ಅ. ಕೃ. 15:32) ಎಂದು ಬರೆದದೆ.

ಯಾವ ವ್ಯಕ್ತಿಯಾದರೂ ತಾನು ಮಾಡಬೇಕಾದ ಕಾರ್ಯಕ್ಕೆ ವಿಶೇಷವಾಗಿ ಹೊಂದಿಕೊಳ್ಳುವ ಕೊರತೆಯವನಾಗಿದ್ದು ಅನರ್ಹಗೊಳ್ಳುತ್ತಾನೋ ಆತನು ಆ ಸ್ಥಾನಕ್ಕೆ ದೇವರಿಂದಲೇ ನೇಮಕಗೊಂಡಿದ್ದನೆಂಬ ಬಗ್ಗೆ ದೇವರ ಗ್ರಂಥದಲ್ಲಿ ಎಲ್ಲಿಯೂ ಹೇಳಿರುವುದಿಲ್ಲ. ಆದರೆ ನಿಜವಾಗಿಯೂ ಕ್ರಿಸ್ತನ ದೇಹದಲ್ಲಿ ಪ್ರತಿಯೊಬ್ಬ ಸದಸ್ಯನೂ ಇತರರನ್ನು ತನ್ನ ಮೇಧಾಶಕ್ತಿಗನುಸಾರ, ತನ್ನ ಯೋಗ್ಯತೆಗನುಸಾರ ಸೇವೆಮಾಡುವುದು ಆತನ ಕರ್ತವ್ಯವಾಗಿದೆ. ಪ್ರತಿಯೊಬ್ಬನೂ ತಕ್ಕಷ್ಟು ಸಭ್ಯನೂ, ತಕ್ಕಷ್ಟು ವಿನಯಶೀಲವುಳ್ಳವನೂ ಆಗಿದ್ದು "ತನ್ನ ಬಗ್ಗೆ ಎಷ್ಟು ಯೋಚಿಸಬೇಕೋ ಅದಕ್ಕಿಂತ ಹೆಚ್ಚಾಗಿ ಆಲೋಚಿಸದೆ" ದೇವರು ತನಗೆ ಅನುಗ್ರಹಿಸಿದ ಮೇಧಾಶಕ್ತಿಯ ಮೌಲ್ಯಕ್ಕನುಸಾರವಾಗಿ ನಿಧಾನಸ್ಥನಾಗಿ ಚಿಂತಿಸುವವನಾಗಿರಬೇಕು. ಸಭೆಯು ಸಹಾ ಈ ದೆಸೆಯಿಂದ ತಾವು ಅತ್ಯಂತ ಶ್ರೇಷ್ಟರೆಂದೆಣಿಸಿಕೊಳ್ಳುವವರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಬಾರದು. ಇದಕ್ಕೆ ವ್ಯತಿರಿಕ್ತವಾಗಿ, ಅವರು ನಮ್ರತೆಯ ದೃಷ್ಟಿಯನ್ನು ಹಿರಿಯತನದ ಅಥವಾ ಯಾವುದೇ ಶಾಖೆಯಲ್ಲಿ ಸೇವೆಮಾಡಬಲ್ಲ ಅವಶ್ಯಕ ಅರ್ಹತೆ ಎಂದು ಪರಿಗಣಿಸಬೇಕು. ಈ ಕಾರಣದಿಂದ ಯಾರಾದರೂ ಇಬ್ಬರು ಸಹೋದರರಿಗೆ ಸಮವಾದ ಮೇಧಾಶಕ್ತಿ ಇದ್ದಲ್ಲಿ ಒಬ್ಬನು ಅದರಲ್ಲಿ ಮಹತ್ವಾಕಾಂಕ್ಷಿಯೂ, ಉತ್ಸಾಹ ಭರಿತನೂ ಆಗಿದ್ದು ಮತ್ತೊಬ್ಬನು ನಮ್ರರೂ, ಮಂದಗಾಮಿಯೂ ಆಗಿದ್ದಲ್ಲಿ ವಿವೇಕದ ಚೈತನ್ಯವಾಗಿರುವ ದೇವರ ಆತ್ಮನು ಮತ್ತು ದೃಢ ಮನಸ್ಸು ನಮ್ರ ಮನಸ್ಸಿನ ಸಹೋದರನನ್ನು ಮೆಚ್ಚಿಕೊಂಡು ಆತನನ್ನು ದೇವರ ಸೇವೆಯ ಪ್ರಮುಖಸ್ಥಾನದಲ್ಲಿಡುವಂತೆ ದೇವಜನರಿಗೆ ಕಲಿಸುತ್ತದೆ.

ದೇವರ ಹಿಂಡಿನಲ್ಲಿರುವ ಆಡು ಮತ್ತು ಆಡಿನಂತಿರುವ ಕುರಿಯು ಒಡೆಯನ ಸ್ವರಕ್ಕೆ ಕಿವಿಗೊಡುವ, ನಿಜವಾದ ಕುರಿಗಿಂತ ಹೆಚ್ಚಾಗಿ ನಾಯಕತ್ವವಹಿಸಲು ಹಂಬಲಿಸ ುವುದೆಂಬುದು ಕಡಿಮೆ ಗಮನಾರ್ಹ ಸಂಗತಿಯಾಗಿದೆ. ನಿಜವಾದ ಕುರಿಯು ದೇವರ ಚೈತನ್ಯವನ್ನು ತಿಳಿದಿದ್ದು ಆತನ ಮಾತುಗಳನ್ನು ನೆರವೇರಿಸಲು ಬಯಸುತ್ತವೆ. ಆದರೆ ತಮ್ಮ ನಮ್ರತೆಯ ದೆಸೆಯಿಂದ ಆಡು ಅಥವಾ ಆಡಿನಂತಿರುವ ಕುರಿಗೆ ನಾಯಕತ್ವವನ್ನು ಬಿಟ್ಟುಕೊಡುತ್ತವೆ. ನಾವು ಎಲ್ಲರೊಡನೆ ಸಮಾಧಾನದಿಂದಿರುವುದು ಒಳ್ಳೆಯದೇ. ಆದರೆ ನಾವು ಯಾವಾಗ ಸಮಾಧಾನಕ್ಕೋಸ್ಕರ ಕರ್ತನ ಮಾತು ಮತ್ತು ಚೈತನ್ಯವನ್ನು ಅಲಕ್ಷಿಸುತ್ತೇವೋ ಆಗ ಖಂಡಿತವಾಗಿಯೂ ಹೆಚ್ಚಿನ ಅಥವಾ ಸ್ವಲ್ಪಮಟ್ಟಿನ ಹಾನಿ ಉಂಟಾಗುತ್ತದೆ. ಎಲ್ಲರಲ್ಲಿಯೂ ನಮ್ರತೆ ಮತ್ತು ಕುರಿಯ ಸ್ವಭಾವ ಇರುವುದು ಒಳ್ಳೆಯದು. ಆದರೆ ಕುರಿಯಲ್ಲಿ ಒಳ್ಳೆಯ ಗುಣಲಕ್ಷಣಗಳಿರುವುದು ಅಗತ್ಯ ಇಲ್ಲವಾದರೆ ಅವುಗಳು ಜಯಶಾಲಿಗಳಾಗಲಾರವು. ಅವುಗಳಲ್ಲಿ ಒಳ್ಳೆಯ ಗುಣಲಕ್ಷಣಗಳಿರುವುದಾದಲ್ಲಿ ಅವು ಪ್ರಧಾನ ಕುರುಬನ ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತವೆ–"ಅವು ಅನ್ಯರ ಸ್ವರವನ್ನು ತಿಳಿಯುವುದಿಲ್ಲ, ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ" ಮತ್ತು " ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ (ಅವುಗಳಿಗೆ ವಿಧೇಯವಾಗುತ್ತವೆ); ನಾನು ಅವುಗಳನ್ನು ಬಲ್ಲೆನು" ; (ಯೋಹಾನ 10:5, 27). ಈ ಸಂದೇಶದ ಸೂಚನೆಯನ್ನು ಮತ್ತು ಪ್ರತಿ ಸಹೋದರನಿಗೆ ಸ್ಥಳೀಯ ಅಥವಾ ಸಾಮಾನ್ಯ ಮೇಲ್ವಿಚಾರಿಕೆಯನ್ನು ವಹಿಸುವ ಮೊದಲು ಆತನ ನಡವಳಿಕೆಯನ್ನು ವಿಶೇಷವಾಗಿ ಗಮನಿಸುವುದು ಪ್ರತಿಯೊಂದು ಕುರಿಯ ಕರ್ತವ್ಯ. ಆತನಲ್ಲಿ ಸಭೆಯ ಹಿರಿಯನಾಗುವ ನಿಜವಾದ ಅರ್ಹತೆ ಇದೆ, ಆತನು ಸುವಾರ್ತೆಗಳ ಪ್ರಾಥಮಿಕ ಸಿದ್ಧಾಂತಗಳಾದ ಪಾಪನಿವೃತ್ತಿ ಮತ್ತು ಕ್ರಿಸ್ತನ ಅಮೂಲ್ಯ ರಕ್ತಧಾರೆಯ ಮೂಲಕ ವಿಮೋಚನೆ, ಆತನ ಸಂದೇಶಗಳಿಗೆ ಆತನ ಸಹೋದರರಿಗೆ ಸಂಪೂರ್ಣವಾದ ಸಮರ್ಪಣೆ ಮುಂತಾದ ದೃಢವಾದ ಅಭಿಪ್ರಾಯಗಳನ್ನು ಹೊಂದಿದವನಾಗಿದ್ದಾನೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಬಲಹೀನ ಮತ್ತು ಮಾನಸಿಕ ಮತ್ತು ನೈತಿಕವಾಗಿ ಕುಂಠಿತವಾಗಿರುವ ಎಲ್ಲಾ ಕುರಿಮರಿಗಳ ಮೇಲೆ ಅವರಿಗೆ ದಯಾಧರ್ಮ ಮತ್ತು ಅನುಕಂಪಗಳಿರಬೇಕು; ಆದರೆ ಅಂಥವರನ್ನು ಅವರ ನಾಯಕರು ಅಥವಾ ಹಿರಿಯರನ್ನಾಗಿ ಮಾಡಿದಲ್ಲಿ ಅವರು ದೈವಿಕ ವ್ಯವಸ್ಥೆಗೆ ದ್ರೋಹ ಮಾಡುವವರಾಗುತ್ತಾರೆ. ಸಭೆಯಲ್ಲಿ ಅಧಿಕಾರ ಸ್ಥಾನಕ್ಕಾಗಿ ತ್ವರೆಪಡುವ ಆಡುಗಳ ಮೇಲೆಯಾಗಲೀ, ಕುರಿವೇಷದ ತೋಳಗಳ ಮೇಲೆಯಾಗಲೀ ಅವರಿಗೆ ಯಾವ ಅನುಕಂಪವೂ ಇರಬಾರದು.

ಚಿನ್ನದ ನಾಲಿಗೆಯುಳ್ಳ ಆಡುಗಳಿರುವುದಕ್ಕಿಂತ ಯಾವುದೇ ಸಾರ್ವಜನಿಕ ಸೇವಕರಿಲ್ಲದ ದೇವ ಸಭೆಯು ಬಹಳಷ್ಟು ಉತ್ತಮವಾಗಿರುತ್ತದೆಂಬುದನ್ನು ಗುರುತಿಸಬೇಕು. ಚಿನ್ನದ ನಾಲಿಗೆಯುಳ್ಳ ನಾಯಕರು ಖಂಡಿತವಾಗಿಯೂ ಮನಸ್ಸನ್ನು ದೇವರ ಪ್ರೀತಿಯಕಡೆ ತಿರುಗಿಸದೆ ತಪ್ಪು ಮಾರ್ಗಗಳ (wrong channels) ದುರ್ಮಾರ್ಗಕ್ಕೆ ಸೆಳೆಯುತ್ತಾರೆ. ಇವರುಗಳ ಬಗ್ಗೆ ನಮ್ಮ ಕರ್ತನು ಮುನ್ನೆಚ್ಚರಿಸಿದ್ದಾನೆ. ಅಪೋಸ್ತಲರು ಇದನ್ನು ವಿವರಿಸುತ್ತಾ – "ನಿಮ್ಮಲ್ಲಿ ಕೆಲವರು ಎದ್ದು ವ್ಯತ್ಯಾಸ (ತಪ್ಪಾದ ಸುಳ್ಳು ಸಿದ್ಧಾಂತಗಳನ್ನೊಳಗೊಂಡ) ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು" (ಅ,ಕೃ. 20:30) ಮತ್ತು "ಅವರ ನಿರ್ಲಜ್ಜಾ ಕೃತ್ಯಗಳನ್ನು ಅನೇಕರು ಅನುಸರಿಸುವರು; ಅವರ ನಿಮಿತ್ತ ಸತ್ಯ ಮಾರ್ಗಕ್ಕೆ ದೂಷಣೆ ಉಂಟಾಗುವುದು" (2 ಪೇತ್ರ 2:2) ಎಂದಿದ್ದಾರೆ.

ಅದರಂತೆ ನಾವು ಇಂದು ನೋಡುವವರಾಗಿದ್ದೇವೆ. ಅನೇಕರು. ದೇವರ ರಾಜ್ಯದ ಬಗ್ಗೆ ಸುವಾರ್ತೆಯನ್ನು ಪ್ರಸಂಗಿಸುವ ಬದಲು ತಮ್ಮನ್ನೇ ಪ್ರಚಾರಮಾಡುವವರಾಗಿದ್ದಾರೆ. ಅವರು ಕರ್ತನ ಕಡೆಗೆ ಜನರನ್ನು ಆಕರ್ಷಿಸಿ ಅವರನ್ನು ಆತನ ದೇಹದ ಅಂಗಗಳಾಗಿ ಒಗ್ಗೂಡಿಸಲು ಪ್ರಯತ್ನಿಸದೆ ತಮ್ಮೆಡೆಗೆ ಮತ್ತು ತಮ್ಮ ಪಂಗಡದ ಕಡೆಗೆ ಶಿಷ್ಯರನ್ನು ಸೆಳೆಯುವವರಾಗಿದ್ದಾರೆ. ಅವರು ಎಲ್ಲಾ ಜನರು ನೇರವಾಗಿ ಕರ್ತನನ್ನೇ ಸಭೆಯೆಂಬ ಶರೀರದ ಶಿರಸ್ಸಾಗಿ ಕಾಣುವಂತೆ ಮಾಡದೆ ತಮ್ಮನ್ನೇ ಆ ಶಿರಸ್ಸಾಗಿ ಮಾಡಿಕೊಳ್ಳ ಬಯಸುವವರಾಗಿದ್ದಾರೆ. ಅವುಗಳೆಲ್ಲವುಗಳಿಗೆ ನಾವು ವಿಮುಖರಾಗಬೇಕು – ನಿಜವಾದ ಕುರಿಗಳು ಅವರ ಈ ತಪ್ಪು ಕೆಲಸಗಳಿಗೆ ಪ್ರಾತಿನಿಧ್ಯ ನೀಡಬಾರದು. ಇವರುಗಳಲ್ಲಿ ಭಕ್ತಿಯ ವೇಷವಿದ್ದರೂ ಅದರ ಬಲವನ್ನು ಅಲ್ಲಗಳೆಯುವವರಾಗಿದ್ದಾರೆ (2 ತಿಮೋ. 3:5 ನೋಡಿರಿ) ಎಂದು ಅಪೋಸ್ತಲನು ಹೇಳುತ್ತಾನೆ. ಇಂಥವರು ತಮ್ಮ ದಿನ, ಆಕೃತಿ, ಸಮಾರಂಭಗಳು ಮತ್ತು ಸಭೆಯ ಅಧಿಕಾರ ಮುಂತಾದವುಗಳ ಬಗ್ಗೆ ಛಲವಾದಿಗಳಾಗಿದ್ದು ಜನರಲ್ಲಿ ಮನ್ನಣೆಗೆ ಪಾತ್ರರಾಗಿದ್ದರೂ ಕರ್ತನ ದೃಷ್ಟಿಯಲ್ಲಿ ಅಸಹ್ಯರಾಗಿದ್ದಾರೆ ಎಂದು ಅಪೋಸ್ತಲನು ಹೇಳುವವನಾಗಿದ್ದಾನೆ. ನಿಜವಾದ ಕುರಿಗಳು ತಮ್ಮ ಪ್ರಾಮಾಣಿಕ ಕುರುಬನ ಸ್ವರವನ್ನು ಗ್ರಹಿಸುವುದರಲ್ಲಿ ಮತ್ತು ಆತನನ್ನು ಅನುಸರಿಸುವಲ್ಲಿ ಎಚ್ಚರಿಕೆಯಿಂದಿದ್ದರೆ ಸಾಲದು ಆದರೆ ಅವರು ಸ್ವಾರ್ಥವನ್ನು ಬಯಸುವವರನ್ನು ಅನುಸರಿಸಬಾರದು, ಬೆಂಬಲಿಸಬಾರದು ಮತ್ತು ಪ್ರೋತ್ಸಾಹಿಸಬಾರದು ಎಂಬುದನ್ನು ನೆನಪಿನಲ್ಲಿಟ್ಟು ಕೊಳ್ಳತಕ್ಕದ್ದು. ಸಭೆಯಲ್ಲಿ ಹಿರಿಯರಾಗಲು ಅರ್ಹರೆಂದು ಪರಿಗಣಿಸುವ ಪ್ರತಿಯೊಬ್ಬರೂ ಅಂಥಹ ಆತ್ಮವಿಶ್ವಾಸ ವನ್ನು ಸಮರ್ಥಿಸಿಕೊಳ್ಳಲು ಪೂರ್ವಭಾವಿಯಾಗಿ ತಿಳಿದಿರಬೇಕು; ಆದುದರಿಂದ ಅಪೋಸ್ತಲನು ಅನನುಭವಿಗಳಾಗದಿರ್ರಿ ಎಂದಿದ್ದಾನೆ. ಅನುಭವವಿಲ್ಲದಿರುವುದು ಸಭೆಗೆ ಅಪಕಾರಿಯಾಗಿರುವುದಲ್ಲದೆ ಒಬ್ಬರನ್ನು ಉಬ್ಬಿಸಿ, ಕರ್ತನ ಮಾರ್ಗದಿಂದ, ಸರಿಯಾದ ಚೈತನ್ಯದಿಂದ, ದೇವರ ರಾಜ್ಯದ ಇಕ್ಕಟ್ಟಾದ ಹಾದಿಯಿಂದ ತಪ್ಪಿಸಿ ಅವರಿಗೆ ಅಪಾಯಕಾರಿಯಾಗಬಲ್ಲದು.

ಯಾರನ್ನು ಸಭಾ ಹಿರಿಯರನ್ನಾಗಿ ಗ್ರಹಿಸಬೇಕೆಂಬುದಕ್ಕೆ ಅಪೋಸ್ತಲನಾದ ಪೌಲನು ಒಂದು ಕೂಲಂಕುಶವಾದ ಬುದ್ಧಿವಾದವನ್ನು ನೀಡುವವನಾಗಿದ್ದಾನೆ (1 ತಿಮೋ. 3:2, 5:17, 1ಥೆಸ. 5:12, ಯಾಕೋಬ 5:14) ಮತ್ತು ಅವರ ಗುಣಲಕ್ಷಣಗಳು ಯಾವರೀತಿಯುಲ್ಲಿರಬೇಕೆಂಬಿತ್ಯಾದಿ ವಿವರಣೆಯನ್ನು ನೀಡುವವನಾಗಿದ್ದಾನೆ. ತಿಮೋಥೆಯನಿಗೆ ಆತನು ಬರೆದ ಪತ್ರಿಕೆಯಲ್ಲಿ (1 ತಿಮೋ. 3: 1–7 ನೋಡಿರಿ) ಅದನ್ನೇ ಸ್ವಲ್ಪ ಭಿನ್ನವಾದ ಧಾಟಿಯಲ್ಲಿ ಪುನರುಚ್ಚರಿಸುವವನಾಗಿದ್ದಾನೆ. ನಿಶ್ಚಯವಾಗಿ ಓರ್ವ ಸಾಮಾನ್ಯ ಮೇಲ್ವಿಚಾರಕನಾಗಿದ್ದ ತೀತನನ್ನು ಉದ್ದೇಶಿಸಿ ಆತನ ಸಭೆಯ ಬಗ್ಗೆ ಸಭಾ ಹಿರಿಯರ ಕರ್ತವ್ಯಗಳ ಬಗ್ಗೆ ಹೇಳುವವನಾಗಿದ್ದಾನೆ (ತೀತ 1:5–11 ನೋಡಿರಿ). ಅಪೋಸ್ತಲನಾದ ಪೇತ್ರನು ಈ ಬಗ್ಗೆ ಪ್ರಸ್ತಾಪಿಸುತ್ತಾ "ಸಭೆಯ ಹಿರಿಯರೇ, ಜೊತೆ ಹಿರಿಯವನಾದ ನಾನು... ನಿಮ್ಮನ್ನು ಎಚ್ಚರಿಸಿ ಹೇಳುವುದೇನೆಂದರೆ – ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ... ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಿರಿ" (1ಪೇತ್ರ 5:1–3).

ಅವರು ಉದಾರಿಗಳೂ, ಪರಿಶುದ್ಧ ಜೀವಿತದಲ್ಲಿ ಜೀವಿಸುವವರೂ, ಒಬ್ಬಳಿಗಿಂತ ಹೆಚ್ಚು ಪತ್ನಿ ಇಲ್ಲದವರೂ ಆಗಿರಬೇಕು. ಅವರಿಗೆ ಮಕ್ಕಳಿರುವುದಾದಲ್ಲಿ ಅವರು ತಮ್ಮ ಕುಟುಂಬದಲ್ಲಿ ಎಷ್ಟರಮಟ್ಟಿಗೆ ಪ್ರಭಾವ ಬೀರಿದ್ದಾರೆ, ಅವರು ತಮ್ಮ ಮಕ್ಕಳ ಬಗ್ಗೆ ಇರುವ ಕರ್ತವ್ಯಗಳನ್ನು ತೊರೆದುಬಿಟ್ಟಿದ್ದಾರೋ ಎಂಬಿತ್ಯಾದಿಗಳನ್ನು ಗಮನಿಸಬೇಕು. ಅವರು ಮಕ್ಕಳ ಬಗ್ಗೆ ತಮ್ಮ ಕರ್ತವ್ಯಗಳನ್ನು ತೊರೆದುಬಿಟ್ಟಿರುವುದಾದರೆ ಬಹುಶಃ ಸಭೆಯ ಮಕ್ಕಳ ಬಗ್ಗೆಯೂ ಹಾಗೆಯೇ ಮಾಡಬಹುದಾಗಿದೆ. ಅವರು ಎರಡು ಮಾತಿನವರು ಅಥವಾ ವಂಚಿಸುವವರು ಆಗಿರಬಾರದು. ಅವರು ಜಗಳಗಂಟರಾಗಲೀ ಅಥವಾ ವಾದಗ್ರಸ್ತರಾಗಲೀ ಆಗಿರ ಕೂಡದು. ಸಭೆಯ ಹೊರಗಿನವರಲ್ಲಿ ಆತನು ಒಳ್ಳೆಯ ಹೆಸರು ಹೊಂದಿದವನಾಗಿರಬೇಕು. ಲೋಕವು ಸಂತರನ್ನು ಸದಾ ಪ್ರೀತಿಸುತ್ತದೆ ಮತ್ತು ಮೆಚ್ಚಿಕೊಳ್ಳುತ್ತದೆ ಎಂಬುದಲ್ಲ, ಆದರೆ ಲೋಕದವರಿಗೆ ಅವರ ಗುಣನಡತೆಯ ಬಗ್ಗೆ ಪ್ರಾಮಾಣಿಕತೆ, ಸತ್ಯತೆ, ನೀತಿಯ ಬಗ್ಗೆ ಹೀನಾಯವಾದದನ್ನು ಕಾಣಲು ಆಸ್ಪದವಾಗಕೂಡದು. ಸಭೆಯ ಹಿರಿಯರ ಸಂಖ್ಯೆಯ ಬಗ್ಗೆ ಯಾವ ಮಿತಿಯನ್ನೂ ಮಾಡಲಾಗಿಲ್ಲ.

ಈ ಮೊದಲಿನ ಮಿತಿಯೊಂದಿಗೆ, ಹಿರಿಯನಾದವನು "ಕಲಿಸುವ ಪ್ರವೃತ್ತಿಯುಳ್ಳವನಾಗಿರತಕ್ಕದ್ದು". ಅಂದರೆ ಆತನಿಗೆ ಬೋಧಿಸುವ, ದೇವರ ಯೋಜನೆಗಳನ್ನು ವಿವರಿಸಿಹೇಳುವ ಮತ್ತು ವ್ಯಾಖ್ಯಾನಿಸುವ ಸಾಮರ್ಥ್ಯವಿರಬೇಕು. ಈ ರೀತಿಯಲ್ಲಿ ಆತನು ದೇವರ ಹಿಂಡಿಗೆ ಆತನ ವಾಕ್ಯ ಮತ್ತು ಸಿದ್ಧಾಂತಗಳ ಬಗ್ಗೆ ನೆರವಾಗಬೇಕಾಗುತ್ತದೆ. ಹಿರಿಯತ್ವಕ್ಕೆ "ಪ್ರವಾದಿಯ" ಅಥವಾ ಸಾರ್ವಜನಿಕ ವಕ್ತಾರನ ಮೇಧಾಶಕ್ತಿಯಾಗಲೀ, ಅರ್ಹತೆಯಾಗಲೀ ಅಗತ್ಯವಿಲ್ಲ – ಒಂದೇ ಸಭೆಯಲ್ಲಿ ಅನೇಕರಿಗೆ ಹಿರಿಯರ ಬೋಧಿಸುವ ಮತ್ತು ಪಾಲಿಸುವ ಸಾಮರ್ಥ್ಯ ಇದ್ದಿರಬಹುದು. ಆದರೂ ಇವರಲ್ಲಿ ಯಾರಿಗೂ ಸಾರ್ವಜನಿಕ ವಕ್ತಾರನ ಅಥವಾ ದೇವರ ಯೋಜನೆಗಳ ಬಗ್ಗೆ ಪ್ರತಿವಾದ ಮಾಡುವ ಸಾಮರ್ಥ್ಯವಿಲ್ಲದಿರಬಹುದು. ಅಂತಹ ಸೇವಕರುಗಳ ಅಗತ್ಯತೆಗಳನ್ನು ತಿಳಿದು ಕರ್ತನು ಅವರನ್ನು ಎಬ್ಬಿಸುತ್ತಾನೆಂಬ ನಂಬಿಕೆ ನಮಗಿರಬೇಕು. ಯಾರನ್ನೂ ಒದಗಿಸಿದೇ ಹೋದಲ್ಲಿ ಅಗತ್ಯತೆಯನ್ನೇ ಶಂಕಿಸಬೇಕಾಗುತ್ತದೆ. ನಾವು ಇಲ್ಲಿ ಅಭಿಪ್ರಾಯ ಪಡಬಹುದೇನೆಂದರೆ ಕೆಲವು ಯಶಸ್ವಿ ಸಭೆಗಳಲ್ಲಿ, ಗುಂಪುಗಳಲ್ಲಿ ಕೆಲವಕ್ಕೆ ಸಾರ್ವಜನಿಕ ಮಾತುಗಾರಿಕೆಯ ಮೇಧಾಶಕ್ತಿ ಇರುವುದಿಲ್ಲ ಮತ್ತು ಇದರ ಪರಿಣಾಮವಾಗಿ ಸತ್ಯವೇದಾಧ್ಯಯನವು ಒಂದು ನಿಯಮವೇ ಹೊರತು ಅಪವಾದವಲ್ಲ. ಆದಿ ಸಭೆಗಳಲ್ಲಿ ಸಹಾ ಇದೊಂದು ಸಂಪ್ರದಾಯವಾಗಿತ್ತೆಂದು ನಮಗೆ ದೈವ ಗ್ರಂಥಗಳಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅವರುಗಳು ಕೂಡಿ ಬಂದಾಗ

*ಈ ಸಂಪುಟದ ಕಡೆಯಲ್ಲಿ ಕೊಟ್ಟಿರುವ ಪ್ರಶ್ನೆ ಮಾಲಿಕೆಯು ವೈಯುಕ್ತಿಕ ಮತ್ತು ಗುಂಪುಗೂಡಿದ ಸತ್ಯವೇದಾಧ್ಯಯನಕ್ಕೆ ಬಹಳ ಸಹಾಯಕವಾಗಿವೆ. ನಾವು ಅದನ್ನು ಉಪಯೋಗಿಸುವಂತೆ ಶಿಫಾರಾಸು ಮಾಡುತ್ತೇವೆ – ಪ್ರಕಾಶಕರು.

ಪ್ರತಿಯೊಬ್ಬರಿಗೂ ಅವರಲ್ಲಿರುವ ವಿವಿಧ ಮೇಧಾಶಕ್ತಿಗಳನ್ನು ತೋರ್ಪಡಿಸುವ ಅವಕಾಶ ನೀಡಲಾಗುತ್ತಿತ್ತು ಒಬ್ಬರಿಗೆ ಮಾತನಾಡಲು, ಮತ್ತೊಬ್ಬರಿಗೆ ಪ್ರಾರ್ಥನೆಮಾಡಲು, ಎಲ್ಲರೂ ಅಲ್ಲವಾದರೂ ಕೆಲವರಿಗೆ ಹಾಡಲು ಈ ರೀತಿಯಾಗಿ. ಈ ನಿಯಮವನ್ನು ನಿಕಟವಾಗಿ ಪಾಲಿಸಿದ ದೇವಜನರ ಆ ಗುಂಪುಗಳು ಹೆಚ್ಚಾದ ಆಶೀರ್ವಾದಗಳನ್ನು ಪಡೆದವರಾಗಿ ಅತ್ಯಂತ ಪ್ರಬಲವಾದ ಗುಣನಡತೆಗಳನ್ನು ಬೆಳೆಸಿಕೊಂಡರು ಎಂದು ಅನುಭವ ಪೂರ್ವಕವಾಗಿ ತೋರಿಬರುತ್ತದೆ. ಕೇವಲ ಕಿವಿಯಿಂದ ಕೇಳಿದ್ದು, ಎಷ್ಟೇ ಉತ್ತಮವಾಗಿ ಹೇಳಲ್ಪಟ್ಟಿದ್ದರೂ, ಎಷ್ಟೇ ಒಳ್ಳೆಯದಾಗಿದ್ದರೂ ವ್ಯಕ್ತಿಯು ತನ್ನ ಮನಸ್ಸನ್ನು ಕಾರ್ಯಾಚರಣೆಗೊಳಿಸದಿದ್ದರೆ ಆತನ ಹೃದಯಕ್ಕೆ ಸಾದ್ಯಂತವಾಗಿ ಆಳವಾದ ಪರಿಣಾಮ ಬೀರಲಾರದು. ಆದರೆ ಎಲ್ಲರೂ ಸಮರ್ಪಕ ರೀತಿಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಸರಿಯಾದ ರೀತಿಯಲ್ಲಿ ನಡೆಸಿದ ಸತ್ಯವೇದಾಧ್ಯಯನವು ಖಚಿತವಾದ ಪರಿಣಾಮವನ್ನು ಬಿತ್ತಬಲ್ಲದು*

ಕಲಿಸಲು ಸಾಮರ್ಥ್ಯವಿಲ್ಲದ ಉಳಿದ ಹಿರಿಯರು, ತಮಗೆ ಅನುಕೂಲವಾದ ಪ್ರಾರ್ಥನೆ ಅಥವಾ ಸಾಕ್ಷಿಯ ಸಭೆಗಳಲ್ಲಿ ಭಾಗವಹಿಸಬಹುದು. ಇದು ದೇವಜನರ ಅನೇಕ ಕೂಟಗಳ ವೈಶಿಷ್ಟವಾಗಿದೆ. ಪ್ರಬೋಧಿಸುವ ಉತ್ತಮ ಮೇಧಾಶಕ್ತಿಯನ್ನು ಹೊಂದಿದವನು ಅದನ್ನು ಬಚ್ಚಿಟ್ಟುಕೊಂಡು ತನಗಿಲ್ಲದ ತಲಾಂತುಗಳನ್ನು ಪ್ರದರ್ಶಿಸಲು ಸಾಹಸ ಪಡುವ ಬದಲು ತನಗೆ ದಯಪಾಲಿಸಲ್ಪಟ್ಟಿರುವ ಈ ಮೇಧಾ ಶಕ್ತಿಯನ್ನು ಕಾರ್ಯರೂಪಕ್ಕೆ ತರಬೇಕು. ಬೋಧಿಸುವವನು ತನ್ನ ಬೋಧನಾಶಕ್ತಿಯನ್ನು ಕಾದುಕೊಂಡಿರಲಿ ಎಂದು ಅಪೋಸ್ತಲನು ಹೇಳುತ್ತಾನೆ. ಆತನು ತನ್ನ ಸಾಮರ್ಥ್ಯ ಮತ್ತು ಸೇವೆಯನ್ನು ಆ ದೆಸೆಯಲ್ಲಿಯೇ ನೀಡಲಿ. "ಬೋಧಿಸುವವನು ಬೋಧಿಸುವುದರಲ್ಲಿ ನಿರತನಾಗಿರಲಿ" (ರೋಮಾ. 12:8 ನೋಡಿರಿ).

ಬಿಷೋಪ್ ಅಥವಾ ಮೇಲ್ವಿಚಾರಕ ಎಂಬ ಪದಕ್ಕೆ ವಿಶಾಲವಾದ ಅರ್ಥಗಳಿರುವಂತೆ ಸಭಾಪಾಲಕ ಎಂಬ ಪದಕ್ಕೂ ಇದೆ. ಹಿರಿಯನಲ್ಲದೆ ಬೇರೆ ಯಾರೂ ಪಾಲಕ ಅಥವಾ ಮೇಲ್ವಿಚಾರಕ ಅಥವಾ ಕುರುಬನಾಗಲು ಯೋಗ್ಯರಲ್ಲ. ಸಭಾಪಾಲಕ ಅಥವಾ ಒಂದು ಮಂದೆಯ ಕುರುಬನು ಆ ಮಂದೆಯ ಮೇಲ್ವಿಚಾರಕನು; ಈ ಎರಡು ಪದಗಳೂ ವ್ಯವಹಾರಿಕವಾಗಿ ಸಮಾನಾರ್ಥಕ ಪದಗಳಾಗಿವೆ. ಪಾಲಕನು ಅಥವಾ ಕುರುಬನು ಎಂಬ ಪದದ ವಿಶಾಲಾರ್ಥದಲ್ಲಿ ನಮ್ಮ ಕರ್ತನಾದ ಯೆಹೋವನು ತಾನೇ ಆಗಿದ್ದಾನೆ (ಕೀರ್ತನೆ 23:1 ನೋಡಿರಿ) ಆತನ ಒಬ್ಬನೇ ಮಗನಾಗಿರುವ ಯೇಸುಕ್ರಿಸ್ತನು ಸಹಾ ನಮ್ಮ ಆತ್ಮಗಳ ಮಹಾ ಕುರುಬನು ಅಥವಾ ಬಿಷೋಪನು (ಮೇಲ್ವಿಚಾರಕನು) – ಎಲ್ಲೆಡೆಯಲ್ಲಿರುವ ಎಲ್ಲಾ ಹಿಂಡುಗಳಿಗೆ ಸಾಮಾನ್ಯ ಮೇಲ್ವಿಚಾರಕರು ಮತ್ತು ಯಾತ್ರಿಗಳು. ಎಲ್ಲಾ ಕುರುಬರು ಅಥವಾ ಸಭಾಪಾಲಕರುಗಳು ಸರ್ವಸಾಮಾನ್ಯ ಹಿಂಡಿನ ಹಿತವನ್ನು ಕಾಪಾಡುವವರಾಗಿದ್ದಾರೆ; ಮತ್ತು ಎಲ್ಲಾ ಸ್ಥಳೀಯ ಹಿರಿಯರೂ ತಮ್ಮ ತಮ್ಮ ಸ್ಥಳಗಳಲ್ಲಿ ಪಾಲಕರೂ, ಕುರುಬರೂ ಮತ್ತು ಮೇಲ್ವಿಚಾರಕರೂ ಆಗಿದ್ದಾರೆ. ಆದುದರಿಂದ ಸಭೆಯಲ್ಲಿನ ಹಿರಿಯರು ಹಿರಿತನಕ್ಕೆ ಬೇಕಾದ ಸಾಮಾನ್ಯ ಅರ್ಹತೆಗಳನ್ನು ಪಡೆದವರಾಗಿರಬೇಕು. ಎರಡನೆಯದಾಗಿ ಅವರ ವಿಶೇಷವಾದ ಸ್ವಾಭಾವಿಕ ಅರ್ಹತೆಗಳು ಅವರು ಸೇವೆಯ ಯಾವ ಭಾಗದಲ್ಲಿ ಕರ್ತನಿಗಾಗಿ ಉತ್ತಮವಾದ ಸೇವೆ ಮಾಡಬಲ್ಲರೆಂಬುದನ್ನು ನಿರ್ಧರಿಸುತ್ತದೆ. ಕೆಲವರು ಸುವಾರ್ತಾ ಕಾರ್ಯಗಳ ಸಂಬಂಧವಾಗಿ, ಮತ್ತೆ ಕೆಲವರು ಸುವಾರ್ತೆಯನ್ನು ಪಡೆದವರ ಮತ್ತು ಪ್ರತಿಷ್ಠೆ ಹೊಂದಿ ಈಗಾಗಲೇ ವಶದಲ್ಲಿರುವವರ ಸಭಾಪಾಲನೆ ಕಾರ್ಯಗಳ ಸಂಬಂಧವಾಗಿ ಕೆಲವರು ಸ್ಥಳೀಯವಾಗಿ, ಮತ್ತೆ ಕೆಲವರು ವಿಶಾಲ ಕ್ಷೇತ್ರಗಳಲ್ಲಿ ಸೇವೆಯ ನಿರ್ಧಾರವಾಗುತ್ತದೆ.

"ಚೆನ್ನಾಗಿ ಅಧಿಕಾರ ನಡೆಸುವ ಸಭೆಯ ಹಿರಿಯರನ್ನು, ಅವರೊಳಗೆ ವಿಶೇಷವಾಗಿ ಪ್ರಸಂಗದಲ್ಲಿಯೂ ಉಪದೇಶ ದಲ್ಲಿಯೂ ಕಷ್ಟಪಡುವವರನ್ನು ಇಮ್ಮಡಿಯಾದ ಮಾನ್ಯಕ್ಕೆ ಯೋಗ್ಯರೆಂದು ಎಣಿಸಬೇಕು" (1 ತಿಮೋ. 5:17,18) ಎಂದು ನಾವು ಓದುತ್ತೇವೆ. ಈ ಮಾತುಗಳ ಶಕ್ತಿಯ ಮೇಲೆ ನಾಮ ಮಾತ್ರದ ಸಭೆಯು ಅಧಿಕಾರಯುಕ್ತ ಹಿರಿಯರ ವರ್ಗವನ್ನು ರಚಿಸಿದೆ; ಮತ್ತು ಸಹೋದರರಲ್ಲಿ ಒಂದು ಆಡಳಿತಕಾರಿ ಅಥವಾ ಅಧಿಕಾರಯುಕ್ತವಾದ, ಬಹುಶಃ ಅಧಿಕಾರಶಾಹಿಯಲ್ಲದ ಹಿರಿಯತನಕ್ಕೆ ಕರೆನೀಡುತ್ತದೆ. "ಆಡಳಿತ" ಎಂಬುವ ಅಂಥಾ ಅರ್ಥವಿವರಣೆಯು ಈ ಸಂಬಂಧವಾದ ಎಲ್ಲಾ ದೇವರವಾಕ್ಯಗಳಿಗೆ ವಿರೋಧವಾಗಿದೆ. ಸಾಮಾನ್ಯ ಮೇಲ್ವಿಚಾರಕನ ಸ್ಥಾನದಲ್ಲಿದ್ದ ತಿಮೋಥೆಯನಿಗೆ ಅಪೋಸ್ತಲನು "ವೃದ್ಧನನ್ನು ಗದರಿಸದೆ ತಂದೆಯೆಂದು ಭಾವಿಸಿ ಬುದ್ಧಿಹೇಳು" "ಎಲ್ಲಾ ಜನರ ವಿಷಯದಲ್ಲಿ ಸಭ್ಯರಾಗಿರ್ರಿ" ಎಂಬಿತ್ಯಾದಿಯಾಗಿ ಸೂಚಿಸುತ್ತಾನೆ. ಇಲ್ಲಿ ಯಾವುದೂ ನಿರಂಕುಶಾಡಳಿತವನ್ನು ಅಥವಾ ನಿರಂಕುಶಾವರ್ತನೆಯನ್ನು ಅನುಮೋದಿಸುವುದಿಲ್ಲ. ಸಾಧುತ್ವ, ಮೃದುತ್ವ, ದೀರ್ಘಸಹನೆ, ಸಹೋದರ ಸೌಜನ್ಯ, ಪ್ರೀತಿ ಇವುಗಳು ಹಿರಿಯರನ್ನಾಗಿ ಮಾನ್ಯತೆ ಪಡೆದವರಲ್ಲಿ ಇರಬೇಕಾದ ಪ್ರಮುಖ ಅರ್ಹತೆಗಳಾಗಿವೆ. ಅವರು ಎಲ್ಲಾ ರೀತಿಯಲ್ಲಿಯೂ ಹಿಂಡಿಗೆ ಮಾದರಿಯಾಗಿರಬೇಕು. ಆದುದರಿಂದ, ಅವರು ನಿರಂಕುಶ ಪ್ರವೃತ್ತಿಯವರಾಗಿದ್ದರೆ ಹಿಂಡಿಗೆ ನೀಡುವ ಮೇಲ್ಪಂಕ್ತಿ ಎಲ್ಲರೂ ನಿರಂಕುಶರಾಗಿರಬೇಕು ಎಂಬುದೇ. ಅವರು ಸಾಧುಗಳು, ಮೃದು ಸ್ವಭಾವದವರು, ದೀರ್ಘ ಸಹನೆಯುಳ್ಳವರು, ಸಹೋದರ ಸೌಜನ್ಯ ಮತ್ತು ಪ್ರೀತಿಯುಳ್ಳವರಾಗಿದ್ದರೆ ಎಲ್ಲರಿಗೂ ಅದೇ ಸ್ವಭಾವಗಳ ಮಾದರಿಯಾಗುತ್ತಾರೆ. ನಾವು ಈಗ ಪರಿಗಣಿಸುತ್ತಿರುವ ಪರಿಚ್ಛೇಧದ ಹೆಚ್ಚಾದ ಅಕ್ಷರಶಃ ಸಮರ್ಪಣೆಯು ಹಿರಿಯರಿಗೆ ಅವರು ವಹಿಸಿಕೊಂಡಿರುವ ಜವಾಬ್ದಾರಿಗೆ ತೋರುವ ಪ್ರಾಮಾಣಿಕತೆಗೆ ಅನುಸಾರವಾಗಿ ಪ್ರಮಾಣಬದ್ಧವಾದ ಗೌರವವನ್ನು ನೀಡತಕ್ಕದ್ದು. ಆದುದರಿಂದ ನಾವು ಈ ಪರಿಚ್ಛೇದವನ್ನು – ಪ್ರಮುಖರಾದ ಹಿರಿಯರು ವಿಶಿಷ್ಟವಾಗಿ ಬೋಧನೆ ಮತ್ತು ಶಿಕ್ಷಣಗಳ ಕಠಿಣ ಕಾರ್ಯಕ್ಕೆ ಮಣಿದವರಾಗಿ ತಮಗೆ ದೊರೆಯುವ ದುಪ್ಪಟ್ಟು ಗೌರವಕ್ಕೆ ತಾವು ಅರ್ಹರೆಂದು ಪರಿಗಣಿಸಬಹುದು.

## ಡೀಕನ್‌ಗಳು (ಧರ್ಮಾಧಿಕಾರಿಗಳು,) ಪಾದ್ರಿಗಳು, ಸೇವಕರು

### Deacons, Ministers, Servants

ಬಿಷೋಪ್ ಎಂಬ ಪದವು ಕೇವಲ ಮೇಲ್ವಿಚಾರಕ ಎಂಬುದನ್ನು ಸೂಚಿಸುವುದಾಗಿದ್ದು ಇದು ಕ್ರಮೇಣವಾಗಿ ಜನರಿಂದ ತಪ್ಪಾಗಿ ಅರ್ಥಮಾಡಿಕೊಂಡಿರುವಂತೆ ಯಾವುದೇ ಅರ್ಥದಲ್ಲಿ ಒಡೆಯ ಅಥವಾ ಮಾಲಿಕ ಎಂಬುದಾಗಿ ಸೂಚಿಸುವುದಿಲ್ಲ. ಅದರಂತೆ ಡೀಕನ್ ಎಂಬುದು ಸಹಾ. ಇದು ಅಕ್ಷರಶಃ ಸೇವಕ ಎಂಬುದನ್ನು ಸೂಚಿಸುತ್ತದೆ. ಅಪೋಸ್ತಲನು ತನ್ನನ್ನೂ ತಿಮೋಥೆಯನ್ನು 'ದಾಸ'ರೆಂದು ಕರೆದುಕೊಂಡಿದ್ದಾನೆ (2ಕೊರಿ. 6:4 ನೋಡಿರಿ). ಇಲ್ಲಿ ಅನುವಾದ ಮಾಡಿರುವ ಪದವು "Diakonos" ಎಂಬ ಗ್ರೀಕ್ ಪದವಾಗಿದ್ದು ಅದು ದಾಸ ಅಥವಾ ಸೇವಕರನ್ನು ಸೂಚಿಸುತ್ತದೆ. ಅಪೊಸ್ತಲನು ಪುನಃ "ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು. ಆತನು ಹೊಸ ಒಡಂಬಡಿಕೆಗೆ ಸೇವಕರಾಗಿರುವ ಸಾಮರ್ಥ್ಯವನ್ನು ನಮಗೆ ಅನುಗ್ರಹಿಸಿದ್ದಾನೆ"(2 ಕೊರಿ. 3: 5,6) ಇಲ್ಲಿ ಸಹಾ ಈ ಗ್ರೀಕ್ ಪದವು ಸೇವಕ ಎಂಬುದನ್ನು ಸೂಚಿಸುತ್ತದೆ. ನಿಜವಾಗಿಯೂ ಅಪೋಸ್ತಲನು ತಾನು ಮತ್ತು ತಿಮೋಥೆಯನು ಹೊಸ ಒಡಂಬಡಿಕೆಯ ದಾಸರೆಂದು ಹೇಳಿಕೊಳ್ಳುತ್ತಾನೆ. ಇದರಂತೆ ನಾವು ಸಭೆಯ ಎಲ್ಲಾ ನಿಜವಾದ ಹಿರಿಯರೂ ದಾಸರಾಗಿದ್ದಾರೆಂದು ತಿಳಿಯಬಹುದು. ಯಾಕೆಂದರೆ, ಅವರು ದೇವರ, ಸತ್ಯದ ಹಾಗೂ ಸಭೆಯ ಸೇವಕರು. ಇಲ್ಲವಾದಲ್ಲಿ ಅವರನ್ನು ಹಿರಿಯರೆಂದು ಮಾನ್ಯ ಮಾಡಲೇಬಾರದು.

ಆದಿ ಸಭೆಯಲ್ಲಿ ಸೇವೆಯ ಬಗ್ಗೆ ಯಾವ ವಿಶೇಷ ಲಕ್ಷಣಗಳೂ ಪ್ರಚಲಿತವಿದ್ದಿರಲಿಲ್ಲವೆಂಬ ಕಲ್ಪನೆಯನ್ನು ನಾವು ನೀಡ ಬಯಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಾವು ಹೇಳುವ ಅಂಶವೇನೆಂದರೆ, ಸಭೆಯ ಹಿರಿಯರುಗಳಾಗಿದ್ದ ಅಪೋಸ್ತಲರುಗಳು ಮತ್ತು ಪ್ರವಾದಿಗಳು ಸಹಾ ದೇವರ ಸೇವಕರುಗಳು ಅಥವಾ ದಾಸರು. ತಮ್ಮ ಕರ್ತನು ಸಹಾ "ನಿಮ್ಮಲ್ಲಿ ಹೆಚ್ಚಿನವನು ನಿಮ್ಮ ಸೇವಕನಾಗಬೇಕು" (ಮತ್ತಾಯ 23:11) ಎಂದು ಹೇಳಿದ್ದಾನೆ. ಸೇವಕನ ಗುಣನಡತೆ ಮತ್ತು ಪ್ರಾಮಾಣಿಕತೆಗಳು ಗೌರವ ಮತ್ತು ಘನತೆಯ ಮಟ್ಟವನ್ನು ತಲುಪಬೇಕು ಮತ್ತು ಇದು ನೂತನ ಸೃಷ್ಟಿಯ ಯಾವುದಾದರೂ ಒಂದು ದೈವ ಸಭೆಗೆ ಸಮರ್ಪಿತವಾಗಬೇಕು. ಹೆಚ್ಚು ಕಲಿಸಲು ಬಾರದೆ ಅಥವಾ ಅನುಭವವಿಲ್ಲದೆ ಹಿರಿಯರೆಂದು ಮಾನ್ಯತೆಮಾಡಲು ಮೇಧಾಶಕ್ತಿಯಿಲ್ಲದ ಸೇವಕರುಗಳು ಸಭೆಯಲ್ಲಿ ಇರಬಹುದಾಗಿರುವುದರಿಂದ ಸಭೆಯು ಅಂತಹವರನ್ನು ಯಾವುದಾದರೂ ಒಂದು ಕೆಲಸಕ್ಕೆ ನೇಮಿಸುವ ಮುನ್ನ ಅಪೋಸ್ತಲರುಗಳು ಅಥವಾ ಪ್ರವಾದಿಗಳು ಅವರನ್ನು ತಮ್ಮ ಸಹಾಯಕ್ಕಾಗಿ ಕೆಲವರನ್ನು ಸೇವಕರನ್ನಾಗಿಯೂ ಆರಿಸಿಕೊಳ್ಳುತ್ತಿದ್ದರು. ಉದಾಹರಣೆಗಾಗಿ ಪೌಲ ಮತ್ತು ಬಾರ್ನಬರು ಜೊತೆಯಾಗಿದ್ದಾಗ ಅವರು ಜಾನ್‌ಮಾರ್ಕ್ (ಮಾರ್ಕನೆನಿಕೊಳ್ಳುವ ಯೋಹಾನ) ಎಂಬುವವನನ್ನು ಕೆಲವು ಸಮಯ ತಮ್ಮ ಸೇವಕ ಅಥವಾ ಸಹಾಯಕನನ್ನಾಗಿ ನೇಮಿಸಿಕೊಂಡಿದ್ದರು. ನಂತರದಲ್ಲಿ ಪೌಲ ಮತ್ತು ಬಾರ್ನಬರು ಬೇರ್ಪಟ್ಟಾಗ ಬಾರ್ನಬನು ಯೋಹಾನನನ್ನು ಆತನೊಡನೆ ಕರಕೊಂಡು ಹೋದನು, ಪೌಲ, ಸೀಲರು ತಮ್ಮೊಡನೆ ಲೂಕನನ್ನು ಸೇವಕನನ್ನಾಗಿ, ಸಹಾಯಕನನ್ನಾಗಿ ಕೊಂಡೊಯ್ದರು. ಈ ಸೇವಕರುಗಳು ತಮ್ಮನ್ನು ಅಪೋಸ್ತಲರಿಗೆ ಅಥವಾ ಇತರ ಹೆಚ್ಚು ಮೇಧಾವಿ ಮತ್ತು ಅನುಭವಿಗಳೊಂದಿಗೆ ಸಮಾನರೆಂದು ಪರಿಗಣಿಸಿಕೊಳ್ಳುತ್ತಿರಲಿಲ್ಲ. ಆದರೆ ತಾವು ದೇವರ ಮತ್ತು ಸತ್ಯದ ಸೇವಕರೆಂದು ಯಾರನ್ನು ಭಾವಿಸಿದ್ದರೋ ಅವರ ನೇತೃತ್ವದಲ್ಲಿ ಸೇವೆ ಮಾಡುವ ಹಾಗೂ ಸಹಾಯಕರಾಗುವ ಸೌಭಾಗ್ಯಕ್ಕಾಗಿ ಸಂತೋಷಿಸುತ್ತಿದ್ದರು. ಅಪೋಸ್ತಲರ ಸೇವೆಮಾಡುವುದಕ್ಕೋಸ್ಕರ ಯಾವ ಸಭೆಯೂ ತಮ್ಮನ್ನು ಆರಿಸುವ ಅಗತ್ಯತೆ ಅವರಿಗೆ ಕಂಡುಬರಲಿಲ್ಲ. ಸಭೆಯು ತನ್ನ ಸೇವಕರನ್ನು ಅಥವಾ ಸಹಾಯಕರನ್ನು ಆರಿಸಿಕೊಳ್ಳುವಂತೆ ಅಪೋಸ್ತಲರು ತಮ್ಮಷ್ಟಕ್ಕೇ ತಾವೇ ಅವರನ್ನು ಆರಿಸಿಕೊಂಡರು. ಇದು ಬಲಾತ್ಕಾರದ ವಿಷಯವಾಗಿರಲಿಲ್ಲ ಆದರೆ ಒಂದು ಐಚ್ಛಿಕ ವಿಷಯವಾಗಿತ್ತು. ಲೂಕ ಮತ್ತು ಯೋಹಾನರು ಬಹುಶಃ ತಾವು ಈ ರೀತಿಯಲ್ಲಿ ತಮ್ಮ ಕರ್ತನಿಗೆ ಇನ್ನಿತರ ಎಲ್ಲಾ ರೀತಿಯಿಂದಲೂ ಉತ್ತಮವಾದ ಸೇವೆಮಾಡಬಹುದೆಂದು ಭಾವಿಸಿದ್ದಿರಬಹುದು. ಆದುದರಿಂದ ಅವರು ಸ್ವಲ್ಪವೂ ಬಲಾತ್ಕಾರವಿಲ್ಲದ ಸ್ವಯಿಚ್ಛೆಯಿಂದಲೇ ತಮ್ಮನ್ನು ಈ ಸೇವೆಯಲ್ಲಿ ತೊಡಗಿಸಿಕೊಂಡರು. ತಾವು ತಮ್ಮ ತಲಾಂತುಗಳನ್ನು ಬೇರೆ ರೀತಿಯಲ್ಲಿ ಪ್ರಾಮಾಣಿಕ ರೀತಿಯಲ್ಲಿ ಇನ್ನೂ ಉತ್ತಮವಾಗಿ ಬಳಸಿಕೊಳ್ಳಬಹುದು ಎಂದು ಅವರು ಭಾವಿಸಿದ್ದರೆ ಬಹುಶಃ ಅವರು ಸಮಾನವಾದ ಯೋಗ್ಯತೆಯ ಕಾರಣ ಇದನ್ನು ತಿರಸ್ಕರಿಸಬಹುದಿತ್ತು.

ಆದರೆ, ಡೀಕನ್ ಎಂಬ ಈ ಪದವು ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ದೇಹವೆಂಬ ಸಭೆಯ ಸೇವಕ ವರ್ಗದವರಿಗೆ ಅನ್ವಯಿಸಲ್ಪಟ್ಟಿದೆ ಮತ್ತು ಅದೇ ರೀತಿಯಲ್ಲಿ ಗೌರವಿಸಲ್ಪಟ್ಟಿದೆ. ಆದರೆ ಹಿರಿಯರ ಸ್ಥಾನಕ್ಕೆ ಅಷ್ಟಾಗಿ ಅರ್ಹರಾಗದವರಿಗಾಗಿ ಅಲ್ಲ. ಸಭೆಯ ವಿಶೇಷ ಸೇವೆಗೆ ಅವರ ಆಯ್ಕೆಯು ಉತ್ತಮ ಗುಣನಡತೆ, ಸತ್ಯನಿಷ್ಠೆ ಮತ್ತು ಕರ್ತನಿಗೆ ಮತ್ತು ಆತನ ಹಿಂಡಿಗೆ ಸೇವೆಮಾಡುವ ಹೆಬ್ಬಯಕೆ ಈ ಅರ್ಥವನ್ನು ನೀಡುತ್ತದೆ. ಹೀಗಾಗಿ ಆದಿ ಸಭೆಯಲ್ಲಿ ಬಡಜನರಿಗಾಗಿ ಆಹಾರ ಮುಂತಾದುವುಗಳು ಏರ್ಪಟ್ಟಾಗ ಅಪೋಸ್ತಲರು ಈ ಸಂಗತಿಗಳನ್ನು ಮೊದಲಿಗೆ ತಾವೇ ತೆಗೆದುಕೊಂಡರು; ಆದರೆ ಗುಣುಗುಟ್ಟವಿಕೆಯು ಪ್ರಾರಂಭಗೊಂಡಾಗ ಮತ್ತು ಕೆಲವರನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬ ಮಾತುಗಳು ಬಂದಾಗ ಈ ಸಂಗತಿಗಳನ್ನು ಅವರು ಸಭೆಯ ವಿಶ್ವಾಸಿಗಳ ಕಡೆಗೆ ತಿರುಗಿಸಿ "ನಾವು ದೇವರ ವಾಕ್ಯೋಪಧೇಶವನ್ನು ಬಿಟ್ಟು ಉಪಚಾರ ಮಾಡುತ್ತಿರುವುದು ತಕ್ಕದ್ದಲ್ಲವಲ್ಲಾ; ಆದುದರಿಂದ ಸಹೋದರರೇ, ಸಂಭಾವಿತರೂ ಪವಿತ್ರಾತ್ಮಭರಿತರೂ ಜ್ಞಾನ ಸಂಪನ್ನರೂ ಆಗಿರುವ ಏಳು ಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ; ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು. ನಾವಾದರೋ ಪ್ರಾರ್ಥನೆಯನ್ನೂ, ವಾಕ್ಯೋಪದೇಶವನ್ನೂ ಮಾಡುವುದರಲ್ಲಿ ನಿರತರಾಗಿರುವೆವು ಎಂದು ಹೇಳಿದರು" (ಅಪೋಸ್ತಲರ ಕೃತ್ಯಗಳು 6:2–4).

ಈ ಏಳು ಮಂದಿ ಸೇವಕರಲ್ಲಿ ಸ್ತೆಫನನು ಒಬ್ಬನಾಗಿದ್ದು ನಂತರದಲ್ಲಿ ಈತನು ಪ್ರಥಮ ಹುತಾತ್ಮನಾದುದನ್ನು, ಮರಣದ ಪರ್ಯಂತ ತನ್ನ ಒಡೆಯನ ಹೆಜ್ಜೆಜಾಡಿನಲ್ಲಿ ನಡೆದದ್ದನ್ನು ನಾವಿಲ್ಲಿ ಸ್ಮರಿಸಬಹುದು. ಸಭೆಯ ವತಿಯಿಂದ ಸ್ತೆಫನನು ಡೀಕನ್ ಆಗಿ ಆಯ್ಕೆಗೊಂಡದ್ದು ಯಾವ ರೀತಿಯಿಂದಲೂ ಆತನಿಗೆ ಅವಕಾಶ ಸಿಕ್ಕಿದ ರೀತಿಯಲ್ಲಿ ದೇವರ ವಾಕ್ಯವನ್ನು ಬೋಧಿಸಲು ಅಡ್ಡಿಪಡಿಸಲಿಲ್ಲ. ಈ ರೀತಿಯಲ್ಲಿ ಆದಿಸಭೆಯಲ್ಲಿದ್ದ ಸಮರ್ಪಕವಾದ ಸ್ವಾತಂತ್ರ್ಯವನ್ನು ನಾವು ನೋಡಬಹುದು. ಸಮಗ್ರ ಸಮೂಹವು ಸಭೆಯ ಯಾರಾದರೂ ಒಬ್ಬ ಸದಸ್ಯನ ಮೇಧಾಶಕ್ತಿಯನ್ನು ಗ್ರಹಿಸಿ ಆತನು ಅದನ್ನು ಸೇವೆಯಲ್ಲಿ ತೊಡಗಿಸುವಂತೆ ಕೋರಿಕೊಳ್ಳಬಹುದು; ಆದರೆ ಈ ಕೋರಿಕೆ ಮತ್ತು ಇದಕ್ಕೆ ಆತನ ಒಪ್ಪಿಗೆ ಇವುಗಳು ಯಾವರೀತಿಯ ಬಂಧನಕ್ಕೂ ಒಳಪಟ್ಟಿರುವುದಿಲ್ಲ – ಆತನು ತನ್ನ ತಲಾಂತನ್ನು ತನಗೆ ಅವಕಾಶ ದೊರೆತ ಬೇರೆ ಯಾವ ರೀತಿಯಲ್ಲಿಯಾದರೂ ಉಪಯೋಗಿಸಲು ಅಡಚಣೆಗಳಿದ್ದಿಲ್ಲ. ಡೀಕನನಾದ ಸ್ತೆಫನನು ತನ್ನ ಕಾರ್ಯದಲ್ಲಿ ಪ್ರಾಮಾಣಿಕನಾಗಿದ್ದು, ಸಮೂಹದ ಲೆಕ್ಕಾಚಾರಗಳನ್ನೆಲ್ಲಾ ಸಮರ್ಪಕವಾದ ರೀತಿಯಲ್ಲಿ ನಿಭಾಯಿಸಲು ಸಮರ್ಥನಾಗಿದ್ದನು. ಆತನು ತನ್ನಲ್ಲಿರುವ ಚೈತನ್ಯ ಮತ್ತು ತಲಾಂತುಗಳನ್ನು ಬೋಧನೆಯ ರೀತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಉಪಯೋಗಿಸುವಂತೆ ಕರ್ತನು ಆತನನ್ನು ಆಶೀರ್ವದಿಸಿ ಅವಕಾಶಗಳನ್ನು ದಯಪಾಲಿಸಿದನು. ಆತನ ಈ ವೃತ್ತಿಯಲ್ಲಿ ಸಭೆ ಆತನ ಸಾಮರ್ಥ್ಯವನ್ನು ಗ್ರಹಿಸುವ ಮೊದಲೇ ಕರ್ತನು ಆತನ ಹಿರಿತನವನ್ನು ಮಾನ್ಯ ಮಾಡಿದ್ದನು. ಆತನು ದೀರ್ಘಕಾಲ ಜೀವಿಸುತ್ತಿದ್ದರೆ ನಿಸ್ಸಂದೇಹವಾಗಿ ಆ ಕಾಲದ ಸಹೋದರರು ಆತನ ಹಿರಿತನದ, ಸತ್ಯವ್ಯಾಖ್ಯಾನದ ಅರ್ಹತೆಯನ್ನು ಇನ್ನೂ ಹೆಚ್ಚಾಗಿ ಗ್ರಹಿಸುತ್ತಿದ್ದರು. ಹೇಗೂ ನಾವಿಲ್ಲಿ ಒತ್ತಿಹೇಳುವ ಅಂಶವೇನೆಂದರೆ, ಪ್ರತಿಯೊಬ್ಬ ವ್ಯಕ್ತಿಗೂ ಆತನು ನೂತನ ಸೃಷ್ಟಿಯ ದೈವ ಸಭೆಯಿಂದ ನೇರವಾಗಿ ನೇಮಕಗೊಂಡಿರಲಿ, ಇಲ್ಲದಿರಲಿ, ಆದರೆ ಆತನಿಗೆ ಸುವಾರ್ತಾ ಸೇವಕನಾಗಿ ತನ್ನ ಮೇಧಾಶಕ್ತಿಯನ್ನು ಉಪಯೋಗಿಸಲು ಸಂಪೂರ್ಣ ಸ್ವಾತಂತ್ರ್ಯವಿತ್ತು. (ಸ್ತೆಫನನು ಒಂದುವೇಳೆ ಸಭೆಯಿಂದ ಆಯ್ಕೆಗೊಂಡಿರದಿದ್ದರೆ ಸಭೆಯಲ್ಲಿ ಬೋಧಿಸುವ ಅರ್ಹತೆ ಇಲ್ಲದವನಾಗಿರಬಹುದಿತ್ತು). ಪ್ರತಿಯೊಬ್ಬ ವ್ಯಕ್ತಿಯ ವಿವೇಚನಾಶಕ್ತಿ ಮತ್ತು ಮೇಧಾಶಕ್ತಿಗಳ ಈ ಸಂಪೂರ್ಣ ಸ್ವಾತಂತ್ರ್ಯವು ಮತ್ತು ಇದನ್ನು ಹತ್ತಿಕ್ಕಲು ಯಾವುದೇ ನಿರ್ಬಂಧವಾಗಲೀ ಅಧಿಕಾರವಾಗಲೀ ಇಲ್ಲದಿರುವುದು ಆದಿಸಭೆಯಲ್ಲಿ ಗುರುತಿಸಬಹುದಾದ ಒಂದು ವಿಶಿಷ್ಟ ಲಕ್ಷಣವಾಗಿದೆ. ಇದನ್ನು ನಾವು ಅದರ ಸ್ಫೂರ್ತಿ ಮತ್ತು ಕಾರ್ಯಕ್ಕನುಸಾರ ನಕಲು ಮಾಡಿಕೊಳ್ಳಬಹುದು. ಸಭೆಯಲ್ಲಿ ಕಲಿಸುವ ಅರ್ಹತೆ ಮತ್ತು ಸಾಮರ್ಥ್ಯವುಳ್ಳ ಹಿರಿಯರುಗಳ ಮತ್ತು ಬೋಧಿಸಬಲ್ಲ ಸುವಾರ್ತಾ ಸೇವಕರುಗಳ ಅಗತ್ಯವಿರುವಂತೆ ಅದಕ್ಕೆ ಬೇರೆ ರೀತಿಯಲ್ಲಿ ಅಂದರೆ ಖಜಾಂಚಿ, ಲೆಕ್ಕಿಗ ಮುಂತಾದ ಸೇವೆಮಾಡಬಲ್ಲ ಡೀಕನರುಗಳ ಅವಶ್ಯಕತೆ ಸಹಾ ಉಂಟು. ಇವರುಗಳು ಸಹಾ ದೇವರ ಹಾಗೂ ಸಭೆಯ ಸೇವಕರಾಗಿದ್ದು ಅದಕ್ಕೆ ಅನುಗುಣವಾಗಿ ಗೌರವಿಸಲ್ಪಡುತ್ತಾರೆ. ಹಿರಿಯರುಗಳು ಸಹಾ ಸೇವಕರಾಗಿದ್ದು ಅವರ ಸೇವೆಯು ದೇವರ ವಾಕ್ಯ ಮತ್ತು ಸಿದ್ಧಾಂತಗಳ ಕೂಲಿ ಆಳುಗಳೆಂಬ ಉನ್ನತ ಮಟ್ಟದಲ್ಲಿ ಮಾನ್ಯಗೊಳ್ಳುತ್ತದೆ.

## ಸಭೆಯಲ್ಲಿನ ಬೋಧಕರು

## Teachers in the Church

ನಾವೀಗ ತಾನೇ ಕಂಡುಕೊಂಡಂತೆ, ಸಭೆಯ ಹಿರಿಯರಿಗೆ ಶಿಕ್ಷಣ ನೀಡುವ ಸಾಮರ್ಥ್ಯವು ಅವರ ಸ್ಥಾನ ಮತ್ತು ಸೇವೆಗೆ ಕೇವಲ ಅವಶ್ಯವಾಗಿದೆ. ಸಂತ ಪೌಲನು ತನ್ನನ್ನು ಒಬ್ಬ ಅಪೊಸ್ತಲನು, ಹಿರಿಯನು ಮತ್ತು ಸೇವಕನು ಎಂದು ಮಾತ್ರವೇ ನೆನಸದೆ ತಾನೊಬ್ಬ ಶಿಕ್ಷಕನೂ ಹೌದೆಂದು ತಿಳುಕೊಂಡದ್ದನ್ನು ನಾವು ಸತ್ಯವೇದ ವಚನಗಳಿಂದ ಲೆಕ್ಕಾಚಾರ ಮಾಡಬಹುದು "ಇವುಗಳನ್ನು ಮಾನುಷ್ಯ ಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದುವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇನೆ" (1ಕೊರಿ: 2:13). ಆತನೊಬ್ಬ ದೇವರ ಸುವಾರ್ತೆಯು ಉಲ್ಲೇಖಿಸುವ ಮಹಾ ವಿಜ್ಞಾನದ ಉಪಾಧ್ಯಾಯನಾಗಿದ್ದಾನೆಯೇ ಹೊರತು ಯಾವ ಭಾಷೆಯ, ಗಣಿತದ, ಖಗೋಲಶಾಸ್ತ್ರದ ಅಥವಾ ಬೇರೆ ಯಾವುದೇ ವಿಜ್ಞಾನದ ಉಪಾಧ್ಯಾಯನಲ್ಲ. ಈ ಮೇಲೆ ಉಲ್ಲೇಖಿಸಿದ ವಚನವು ಈ ಅರ್ಥವನ್ನು ಸೂಚಿಸುತ್ತದೆ. ಕರ್ತನ ಜನರು ಇದನ್ನು ತಮ್ಮ ಮನಸ್ಸಿನಲ್ಲಿ ಬಿಗಿಯಾಗಿ ಇಟ್ಟುಕೊಳ್ಳತಕ್ಕದ್ದು. ಕೇವಲ ಉಪದೇಶಿಸುವವರು, ಬೋಧಿಸುವವರು ಮಾತ್ರವಲ್ಲ ಅದನ್ನು ಆಲಿಸುವವರು ಸಹಾ ಪ್ರಕಟಪಡಿಸುತ್ತಿರುವುದು ಮಾನುಷ್ಯ ಜ್ಞಾನವನ್ನಲ್ಲ, ದೈವ ಜ್ಞಾನವನ್ನು ಎಂದು ಕಂಡುಕೊಳ್ಳಬೇಕು. ಈ ರೀತಿಯಲ್ಲಿ ಅಪೊಸ್ತಲನು ತಿಮೋಥೆಯನ್ನು "ದೇವರ ವಾಕ್ಯವನ್ನು ಸಾರು "(2ತಿಮೋ.4:2) ಎಂತಲೂ "ಈ ಸಂಗತಿ ಗಳನ್ನು ಆಜ್ಞಾಪಿಸಬೇಕು ಮತ್ತು ಬೋಧಿಸಬೇಕು"(1ತಿಮೋ. 4:11) ಮತ್ತು "ಈ ಉಪದೇಶವನ್ನು ಮಾಡಿ ಅವರನ್ನು ಎಚ್ಚರಿಸು"(1ತಿಮೋ.6:2) ಎಂತಲೂ ಪ್ರಬೋಧಿಸುತ್ತಾನೆ. ಇನ್ನೂ ಮುಂದುವರೆದು ಅಪೊಸ್ತಲನು ಸುಳ್ಳು ಸಿದ್ಧಾಂತಗಳನ್ನು ಬೋಧಿಸುವವರನ್ನು, ವೇದಾಂತ ಅಥವಾ ವಿಜ್ಞಾನವೆಂದು ಸುಳ್ಳಾಗಿ ಹೇಳಿಕೊಂಡು ತಪ್ಪಾದ ಅಥವಾ ಪಾಷಂಡ ಬೋಧನೆಗಳನ್ನು ಮಾಡುವವರನ್ನು ಸಭೆಯ ಬೋಧಕರನ್ನಾಗಿ ಮಾನ್ಯ ಮಾಡಬಾರದೆಂದು ಸೂಚಿಸುತ್ತಾ – "ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದುದನ್ನು ನಾವೇ ಆಗಲೀ, ಪರಲೋಕದಿಂದ ಬಂದ ದೇವದೂತನೇ ಆಗಲೀ ನಿಮಗೆ ಸಾರಿದರೆ ಶಾಪಗ್ರಸ್ತನಾಗಲಿ"(ಗಲಾ. 1:8 ಮತ್ತು 1ತಿಮೋ. 6:3–5) ಎಂದಿದ್ದಾನೆ. ಅಪೊಸ್ತಲನು ಮಾಡುವ ಶಿಫಾರಸ್ಸು ಏನೆಂದರೆ "ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧಪಟ್ಟ ಪ್ರಾಪಂಚಿಕವಾದ ಹರಟೆ ಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವುದನ್ನೇ ಕಾಪಾಡು"(1ತಿಮೋ.6:20) ಎಂದು ಹೇಳುತ್ತಾ ಪರಲೋಕದಿಂದ ಇಳಿದುಬಂದ ಪವಿತ್ರಾತ್ಮನ ಮೂಲಕ ಸಾರಲ್ಪಟ್ಟ ಸುವಾರ್ತೆಗೆ ವಿರುದ್ಧವಾಗಿ ಬೋಧಿಸುವವರನ್ನು ಬೆಂಬಲಿಸಬಾರದೆಂದು ಎಲ್ಲ ಸಭೆಗಳಿಗೂ ಹಿರಿಯರಿಗೂ ಎಚ್ಚರಿಸುವವನಾಗಿದ್ದಾನೆ.

ಹೇಗೂ ಕೆಲವರು ಶಿಕ್ಷಣ ಸಮರ್ಥರಾಗಿದ್ದು ದೇವರ ಯೋಜನೆಗಳನ್ನು ಇತರರಿಗೆ ಖಾಸಗಿ ರೀತಿಯಲ್ಲಿ ಪ್ರಚುರ ಪಡಿಸುವವರಾಗಿದ್ದಾರೆ. ಅವರಿಗೆ ಸಾರ್ವಜನಿಕವಾದ ಮಾತುಗಾರಿಕೆ ಅಥವಾ ಪ್ರವಾದನೆಯು ಇರುವುದಿಲ್ಲ. ಕರ್ತನಿಗಾಗಿ ಖಾಸಗಿಯಾಗಿ ಮಾತನಾಡುವವರನ್ನು ಉಪೇಕ್ಷಿಸಬಾರದು. ಬದಲಾಗಿ ಕೇಳುವವರು ಇರುವಾಗ ಅವರಿಗೆ ಹೇಳುವಂತೆ ಮತ್ತು ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡು ಕರ್ತನ ಮಹಿಮೆಯುನ್ನು ಪ್ರಸಿದ್ಧಿಪಡಿಸುವಂತೆ ಅವರನ್ನು ಪ್ರೋತ್ಸಾಹಿಸಬೇಕು. ನಂತರ ಪುನಃ ನಾವು ಉಪದೇಶ ಮತ್ತು ಸಾರೋಣ ಇವುಗಳ ವ್ಯತ್ಯಾಸ ಕಾಣಬಹುದು (ಅ.ಕೃ 15:35). ದೇವರ ವಾಕ್ಯ ಸಾರೋಣವು ಸಾರ್ವಜನಿಕವಾಗಿ ಪ್ರವಚನ ಮಾಡುವುದು. ಉಪದೇಶವನ್ನು ಸಾಮಾನ್ಯವಾಗಿ ಹೆಚ್ಚಾದ ಖಾಸಗಿ ರೀತಿಯಲ್ಲಿ ಸತ್ಯವೇದಾಧ್ಯಯನ ಅಥವಾ ಖಾಸಗಿ ಸಂಭಾಷಣೆ ಇವುಗಳ ಮೂಲಕ ನೆರವೇರಿಸಬಹುದು. ಅತ್ಯಂತ ಸಮರ್ಥರಾದ ಬೋಧಕರುಗಳು, ಸಾರ್ವಜನಿಕ ಪ್ರವಚನಕಾರರು ಅಥವಾ ಪ್ರವಾದಿಗಳು ಒಮ್ಮೊಮ್ಮೆ ತಮ್ಮ ಸಾರ್ವಜನಿಕ ಪ್ರವಚನಗಳು ಸಣ್ಣ ಗುಂಪುಗಳೊಡನೆ ಮಾಡುವ ದೇವರ ವಾಕ್ಯದ ಆಳವಾದ ಸ್ವಂತ ವ್ಯಾಖಾನದಿಂದ ಹೆಚ್ಚಾಗಿ ಫಲಪ್ರಧವಾಗುತ್ತದೆಂದು ಕಂಡುಕೊಂಡಿದ್ದಾರೆ.

ಸತ್ಯಾನ್ವೇಷಣೆಗೋಸ್ಕರ ಮಾನವರ ಹೃದಯ ಹಾಗೂ ಮನಸ್ಸುಗಳನ್ನು ಕಲಕುವ ಶಕ್ತಿ ಇವುಗಳು ಸುವಾರ್ತಿಕರ ವರಗಳು. ಈ ವಿಶೇಷ ವರವನ್ನು ಆದಿಸಭೆಯವರು ಹೊಂದಿದ್ದಂತೆ ಇಂದು ಹೆಚ್ಚಿನವರು ಹೊಂದಿರುವುದಿಲ್ಲ. ಇನ್ನೂ ಹೆಚ್ಚಾಗಿ ಬದಲಾದ ಪರಿಸ್ಥಿತಿಗಳು ಹೆಚ್ಚು ಕಡಿಮೆ ಈ ಕಾರ್ಯದ ಗುಣಲಕ್ಷಣವನ್ನು ಬದಲಾಯಿಸಿವೆ. ಆದುದರಿಂದ ಇಂದು ಜನಸಾಮಾನ್ಯರ ವಿದ್ಯಾಭ್ಯಾಸದ ಫಲವಾಗಿ ಸುವಾರ್ತಾ ಕಾರ್ಯವು ಇಂದು ಮುದ್ರಿತ ಹಾಳೆಗಳ ಮೂಲಕ ಹೆಚ್ಚಾಗಿ ಮಾಡಬಹುದು. ಈಗಿನ ಕಾಲದಲ್ಲಿ ಅನೇಕರು ಕರಪತ್ರಗಳನ್ನು ಹಂಚುವುದರ ಮೂಲಕ, ಸತ್ಯವೇದ ಸಂಬಂಧಿತ ಪುಸ್ತಕಗಳ ಮತ್ತು SCRIPTURE STUDIES ಪ್ರತಿಗಳನ್ನು ಮಾರುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸತ್ಯ ಸಂಗತಿಯೇನೆಂದರೆ, ಈ ಸೌವಾರ್ತಿಕರು ತಮ್ಮನ್ನು ಇಂದಿನ ವಿಚಾರಗಳಿಗೆ ಅಳವಡಿಸಿಕೊಂಡಿದ್ದಾರೆಯೇ ಹೊರತು ಹಿಂದಿನ ವಿಚಾರಗಳಿಗಲ್ಲ. ಇದು ಈ ಕಾರ್ಯದ ಬಗ್ಗೆ ಚರ್ಚೆಯಾಗಿ ಉಳಿದಿಲ್ಲ. ಯಾಕೆಂದರೆ ಇಂದಿನವರು ಕಾಲ್ನಡಿಗೆ ಅಥವಾ ಒಂಟೆಗಳ ಮೇಲೆ ಪ್ರಯಾಣಮಾಡದೆ, ರೈಲುಗಳು ಮತ್ತು ವಿದ್ಯುತ್ ಚಾಲಿತ ವಾಹನಗಳನ್ನು ಬಳಸುವವರಾಗಿದ್ದಾರೆ. ಸುವಾರ್ತಾ ಸೇವೆಯೆಂದರೆ ಯುಗಗಳಿಂದ ಜಾರಿಯಲ್ಲಿರುವ ದೇವರ ಯೋಜನೆಗಳು, ದೇವರ ವಾಕ್ಯ ಇವುಗಳಲ್ಲಿ ಅಡಗಿರುವ ಸತ್ಯವನ್ನು, ಮಹಾ ಸಂತೋಷದ ಸುವಾರ್ತೆ ಇವುಗಳನ್ನು ತಿಳಿಸಿ ಹೇಳುವುದು. ನಮ್ಮ ನಿರ್ಣಯದ ಪ್ರಕಾರ ಇಂಥಹ ಫಲವನ್ನು ನೀಡುವ ಬೇರೆ ಸುವಾರ್ತಾ ಸೇವಾಕಾರ್ಯವು ಇಂದು ಕಂಡು ಬರುತ್ತಿಲ್ಲ. ಅನೇಕರಿಗೆ ಈ ಕಾರ್ಯದಲ್ಲಿ ನಿರತರಾಗುವ ಮೇಧಾಶಕ್ತಿ, ಅರ್ಹತೆಗಳಿವೆಯಾದರೂ ಅವರು ಈ ಕಾರ್ಯದ ಬೇರೆ ವಿಭಾಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಿದ್ಧರಿಲ್ಲ. ಅನೇಕ ಕೂಲಿಯಾಳುಗಳು ದ್ರಾಕ್ಷೆತೋಟಕ್ಕೆ ಇನ್ನೂ ಹೋಗಿರುವುದಿಲ್ಲ. ನಾವು ಅವರನ್ನು ಕಳುಹಿಸುವಂತೆ, ಅವರು ಈ ಸುವಾರ್ತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ತಮ್ಮ ಸೌಕರ್ಯಗಳ ಮತ್ತು ಅವಕಾಶಗಳ ಬಗ್ಗೆ ತಿಳಿದುಕೊಳ್ಳಲಿಕ್ಕಾಗುವಂತೆ ಅವರ ಪರವಾಗಿ ನಾವು ಸದಾ ಸುಗ್ಗಿಯ ಯಜಮಾನನನ್ನು ನಿತ್ಯವೂ ಪ್ರಾರ್ಥಿಸುತ್ತಾ ಇದ್ದೇವೆ.

ಸೌವಾರ್ತಿಕನಾದ ಫಿಲಿಪ್ಪನು ತಾನು ಮಾಡಬೇಕಾದುದನ್ನು ಸಮಾರ್ಯದವರಿಗೆ ಮಾಡಿದಾಗ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಲಾಯಿತು (ಅ.ಕೃ. 8:14 ನೋಡಿರಿ). ಆದುದರಿಂದ ನಮ್ಮ ಸತ್ಯವೇದ ಮಾರಾಟಗಾರರಾದ ಸುವಾರ್ತಿಕರು ತಮ್ಮನ್ನು ಆಲಿಸುವವರ ಶುದ್ಧ ಮನಸ್ಸನ್ನು ಕಲಕಿದ ನಂತರ ಅವರಿಗೆ ಸತ್ಯವೇದ ಅಧ್ಯಯನವನ್ನು ಉಪದೇಶಿಗಳ ಮೂಲಕ ಪರಿಚಯಿಸಿ ಅಲ್ಲಿಂದ ಅವರು ಕರ್ತನ ಮಾರ್ಗವನ್ನು ಕಂಡುಕೊಳ್ಳುವಂತೆ ಮಾಡಬೇಕು. ಪೇತ್ರ, ಪೌಲ, ಯಾಕೋಬ ಮತ್ತು ಯೋಹಾನರು ಕರ್ತನ ಸಂದೇಶಕರು ಮತ್ತು ಪ್ರತಿನಿಧಿಗಳಾಗಿ ನಂಬಿಗಸ್ತ ಮನೆವಾರ್ತೆಯವರಿಗೆ ಪತ್ರಿಕೆಗಳನ್ನು ಬರೆದರು. ಈ ರೀತಿಯಲ್ಲಿ ಅವರು ತಮ್ಮ ಮಂದೆಯನ್ನು ಪಾಲಿಸಿದರು, ಸಮಾಲೋಚನೆ ನೀಡಿದರು ಮತ್ತು ಪ್ರೋತ್ಸಾಹಿಸಿದರು. ಅದರಂತೆ ಈಗ ಸತ್ಯ ಸಾಹಿತ್ಯವು ಸ್ನೇಹಿತರನ್ನು ವೈಯುಕ್ತಿಕವಾಗಿ, ಸಮೂಹವಾಗಿ ನಿರಂತರವೂ ಸಂಧಿಸಿ ಕರ್ತನು ಮತ್ತು ಅಪೋಸ್ತಲರು ಉಪದೇಶಿಸಿದ ರೀತಿಯಲ್ಲಿ ಅವರು ತಮ್ಮ ವಿಶ್ವಾಸವನ್ನು ದೃಢೀಕರಿಸಿಕೊಳ್ಳುವಂತೆ ಮತ್ತು ತಮ್ಮ ಗುಣನಡತೆಗಳನ್ನು ಸ್ಪಷ್ಟೀಕರಣಗೊಳಿಸುವಂತೆ ಬಯಸುತ್ತದೆ.

## ಅನೇಕರು ಬೋಧಿಸಲು ಸಮರ್ಥರಾಗಬೇಕು

### Many Should be Able to Teach

"ಕಾಲವನ್ನು ನೋಡಿದರೆ(ನೀವು ಸತ್ಯದಲ್ಲಿಯೇ ಇದ್ದೀರಿ)ನೀವು ಇಷ್ಟರೊಳಗೆ ಬೋಧಕರಾಗಬೇಕಾಗಿದ್ದರೂ (ಕರ್ತನ ಬಗ್ಗೆ ಉತ್ಸಾಹದ ಕೊರತೆಯಿಂದಾಗಿ ಮತ್ತು ಪ್ರಾಪಂಚಿಕ ಉತ್ಸಾಹದ ನಿಮಿತ್ತ) ಒಬ್ಬನು ನಿಮಗೆ ದೈವೋಕ್ತಿಗಳ ಮೂಲ ಪಾಠಗಳನ್ನು ತಿರುಗಿ ಕಲಿಸಿ ಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ" (ಇಬ್ರಿಯ 5:12) ಎಂದು ಕೆಲವರಿಗೆ ಬರೆಯುತ್ತಾನೆ. ಇದು ಸಾಮಾನ್ಯ ಅರ್ಥದಲ್ಲಿ ಕಡೆ ಪಕ್ಷ ಸಮಗ್ರ ಸಭೆಯು, ಸಮಗ್ರ ಯಾಜಕವರ್ಗವು, ನೂತನ ಸೃಷ್ಟಿಯ ಸದಸ್ಯರು ತಮ್ಮ ತಂದೆಯ ಮಾತುಗಳ ಚಾತುರ್ಯವನ್ನು ಪಡೆದಿರಬೇಕು ಮತ್ತು ತಮ್ಮಲ್ಲಿರುವ ನಿರೀಕ್ಷೆಗೆ ಆಧಾರವನ್ನು ಕೇಳುವವರಿಗೆ ನಮ್ರತೆಯಿಂದ ಮತ್ತು ಗೌರವದಿಂದ ಉತ್ತರಿಸುವ ಮಟ್ಟಿಗಾದರೂ ಸಿದ್ಧರಿರಬೇಕು (1 ಪೇತ್ರ 3:15 ನೋಡಿರಿ). ಈ ಕಾರಣದಿಂದ ಬೋಧನೆಯು ದೇವರ ವಾಕ್ಯದ ಪ್ರಕಾರವಾಗಿ ಕೇವಲ ಯಾಜಕ ವರ್ಗದವರಿಗೇ ಮೀಸಲಲ್ಲ ಎಂದು ನೋಡುತ್ತೇವೆ. ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನೂ ರಾಜವಂಶ ಯಾಜಕತ್ವದ ಸದಸ್ಯನಾಗಿರುತ್ತಾನೆ ಮತ್ತು ಬೋಧಿಸಲು ಅಭಿಷಕ್ತನಾಗಿದ್ದಾನೆ ಹಾಗೂ ಸುವಾರ್ತೆಯನ್ನು ಕಿವಿಯುಳ್ಳವರು ಕೇಳುವಂತೆ ಪ್ರಾಮಾಣಿಕವಾಗಿ ಮತ್ತು ಸ್ಪಷ್ಟವಾಗಿ ಸಾರಲು ತನ್ನ ಯೋಗ್ಯತೆಗನುಸಾರವಾಗಿ ಸಮರ್ಥನಿದ್ದಾನೆ. ಆದರೆ ಇಲ್ಲಿ ಮತ್ತೊಬ್ಬ ಅಪೋಸ್ತಲನಿಂದ ವಿಶಿಷ್ಟವಾದ ಹೇಳಿಕೆಯೊಂದು ಬಂದಿದೆ.

## "ನನ್ನ ಸಹೋದರರೇ, ಬಹು ಮಂದಿ ಬೋಧಕರಾಗಬೇಡಿರಿ" (ಯಾಕೋಬ3:1)

## "Be not many of you Teachers, Brethern"

ಇದರ ಅರ್ಥವೇನು? ಅಪೊಸ್ತಲನು ಇದಕ್ಕೆ ಉತ್ತರಿಸುತ್ತಾ "ಬೋಧಕರಾದ ನಮಗೆ ಕಠಿನವಾದ ತೀರ್ಪು ಆಗುವುದೆಂದು ತಿಳಿದು..." ಎಂದು ಹೇಳಿ ಮೇಲಿನ ಮಾತುಗಳನ್ನು ಮುಂದುವರಿಸುತ್ತಾನೆ. ಕ್ರಿಸ್ತನ ದೇಹದಲ್ಲಿ ನಾವು ತೆಗೆದುಕೊಳ್ಳುವ ಪ್ರತಿಯೊಂದು ಉನ್ನತಿಯ ಹೆಜ್ಜೆಯಲ್ಲಿಯೂ ನಮಗೆ ಶೋಧನೆ ಹಾಗೂ ಜವಾಬ್ದಾರಿಗಳೆರಡೂ ಹೆಚ್ಚುತ್ತಾ ಹೋಗುತ್ತವೆ. ಇಲ್ಲಿ ಅಪೊಸ್ತಲನು ಯಾರೂ ಬೋಧಕರಾಗಬಾರದೆಂದು ಎಚ್ಚರಿಸುವುದಿಲ್ಲ, ಆದರೆ ಯಾರು ತಮ್ಮಲ್ಲಿ ಬೋಧಿಸುವ ಯಾವುದಾದರೂ ಮೇಧಾಶಕ್ತಿಯಿದೆಯೆಂದು ನಂಬುತ್ತಾರೋ ಅಂಥವರು ಎಷ್ಟು ವಿಸ್ತಾರವಾಗಿ ದೇವರ ವಕ್ತಾರರಾಗಿರುತ್ತಾರೋ ಅಷ್ಟರಮಟ್ಟಿಗೆ ಅವರ ಜವಾಬ್ದಾರಿ ಹೆಚ್ಚುತ್ತಾ ಹೋಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಆದುದರಿಂದ ದೇವರ ಗುಣಲಕ್ಷಣ ಮತ್ತು ಯೋಜನೆಗಳನ್ನು ತಪ್ಪಾಗಿ ತಿಳಿಸುವ ಯಾವುದೇ ಒಂದು ಮಾತನ್ನು ಅವರು ಆಡಕೂಡದು. ಹೀಗೆ ಮಾಡಿದಲ್ಲಿ ಅವರು ದೇವರಿಗೆ ಅಗೌರವವನ್ನೂ ಕೇಳುವವರಿಗೆ ಹಾನಿಯನ್ನೂ ಉಂಟು ಮಾಡುವವರಾಗಿದ್ದಾರೆ ಎಂದು ಹೇಳುವವನಾಗಿದ್ದಾನೆ.

ಸಭೆಯು ಮೇಲಣಿನಿಂದ ಬರುವ ಈ ಜ್ಞಾನವನ್ನು ಅಂಗೀಕರಿಸಿ ವಿಧೇಯರಾದ ಪಕ್ಷದಲ್ಲಿ ಈ ಸಂಕಲ್ಪ ಒಳ್ಳೆಯದೇ, ಈಗ ಮೊದಲಿಗಿಂತ ಬೋಧನೆಗಿಂತ ಕಡಿಮೆಯಾಗಲೂ ಬಹುದು. ಆದರೆ ಬೋಧಕರುಗಳ ಮತ್ತು ಕಲಿಯುವವರ ಮೇಲೆ ಆಗುವ ಪರಿಣಾಮವು ದೇವರ ಮತ್ತು ಸತ್ಯದ ಬಗ್ಗೆ ಹೆಚ್ಚಿನ ಪೂಜ್ಯ ಭಾವನೆಯನ್ನು ಹೆಚ್ಚಿಸುತ್ತದಲ್ಲದೆ ಗಲಿಬಿಲಿಯನ್ನು ಉಂಟುವಮಾಡುವ ತಪ್ಪುಗಳಿಂದ ಹೆಚ್ಚಿನ ವಿಮುಕ್ತಿ ಯನ್ನೊದಗಿಸುತ್ತದೆ. ಈ ದೆಸೆಯಲ್ಲಿ ದೇವರ ಯೋಜನೆಗಳಿಗೆ ಪೂರ್ಣವಾದ ರೀತಿಯಲ್ಲಿರದ ಕೆಲವು ಬೋಧಕರುಗಳು ಇದರ ಪರಿಣಾಮವಾಗಿ ದೇವರ ರಾಜ್ಯದಲ್ಲಿ ಪಾಲುದಾರ ರಾಗಿತ್ತಾರೆಯಾದರೂ ಅವರು ದೇವರ ರಾಜ್ಯದಲ್ಲಿ ದೇವರ ಸಂದೇಶಕ್ಕೆ ಮಾತ್ರವೇ ಹೆಚ್ಚಿನ ನಿಷ್ಠೆ ತೋರಿಸುವವರಿಗಿಂತ ಕೆಳಗಿನ ಸ್ಥಾನದಲ್ಲಿರುತ್ತಾರೆಂಬ ಅಭಿಪ್ರಾಯವನ್ನು ನಮ್ಮ ಒಡೆಯನ ಮಾತುಗಳು ನೀಡುತ್ತವೆ. ಆ ಮಾತುಗಳೆಂದರೆ "ಈ ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರನ್ನೂ ಹಾಗೆ ಮೀರುವುದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು" (ಮತ್ತಾಯ 5: 19).

## ಯಾವನಾದರೂ ನಿಮಗೆ ಉಪದೇಶ ಮಾಡುವ ಅವಶ್ಯಕತೆ ಇಲ್ಲ

## "Ye Need Not That Any Man Teach You"

**"ಆತನಿಂದ ನೀವು ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಗೊಂಡಿರುವುದರಿಂದ ಯಾವನಾದರೂ ನಿಮಗೆ ಉಪದೇಶ ಮಾಡುವ ಅವಶ್ಯಕತೆ ಇಲ್ಲ. ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದ್ದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲ. ಅದು ನಿಮಗೆ ಉಪದೇಶ ಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರ್ರಿ" "ನೀವು ಪವಿತ್ರನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು ಎಲ್ಲರೂ ತಿಳಿದವರಾಗಿದ್ದೀರಿ" ( 1 ಯೋಹಾನ 2:27,20)**

ಸಭೆಯು ಕಲಿಯುವುದನ್ನು ಪ್ರೋತ್ಸಾಹಿಸುವ, ಅದನ್ನು ಕೃಪೆ ಮತ್ತು ಜ್ಞಾನದಲ್ಲಿ ಬೆಳೆಸುವ, ಒಬ್ಬೊಬ್ಬರನ್ನೂ ಪವಿತ್ರ ನಂಬಿಕೆಯಲ್ಲಿ ಕಟ್ಟಿ ಬೆಳೆಸುವ ಅನೇಕ ದೇವರ ವಾಕ್ಯಗಳ ದೃಷ್ಟಿಯಲ್ಲಿ ಕರ್ತನು ಅಪೊಸ್ತಲರನ್ನು, ಪ್ರವಾದಿಗಳನ್ನು, ಸುವಾರ್ತಿಕರನ್ನು ಮತ್ತು ಬೋಧಕರುಗಳನ್ನು ಎಬ್ಬಿಸುವನೆಂದು ಹಾರೈಸುವಾಗ ಅಪೊಸ್ತಲ ಯೋಹಾನನ ಈ ಹೇಳಿಕೆಯು ಸರಿಯಾಗಿ ಅರ್ಥಮಾಡಿಕೊಳ್ಳುವವರೆಗೆ ಬಹು ವಿಚಿತ್ರ ವಾಗಿರುವುದಾಗಿ ಕಂಡು ಬರುತ್ತದೆ. ಇದು ಮುಗ್ಗರಿಸುವ ಕಲ್ಲು ಎಂದು ಕೆಲವರಿಗೆ ಕಂಡು ಬರಬಹುದಾದರೂ ಕರ್ತನು ತನ್ನ ಬಗ್ಗೆ ಸರಿಯಾದ ಮನೋವೃತ್ತಿಯನ್ನು ಹೊಂದಿರುವವರಿಗೆ ಎಂದಿಗೂ ಹಾನಿಯಾಗಗೊಡುವುದಿಲ್ಲವೆಂದು ಖಚಿತವಾಗಿ ಹೇಳಬಹುದಾಗಿದೆ. ಜೀವನದ ಅನುಭವಗಳಿಗೆ ಕಡಿಮೆಯಲ್ಲದ ಆಜ್ಞೆಯ ಮೇಲೆ ಆಜ್ಞೆ ಮತ್ತು ಸೂತ್ರದ ಮೇಲೆ ಸೂತ್ರಗಳುಳ್ಳ ದೇವರ ವಾಕ್ಯಕ್ಕೆ ವ್ಯತಿರಿಕ್ತವಾದ ಪ್ರಚಲಿತ ತಾತ್ಪರ್ಯವು ಭಾಷಾಂತರದ ಮೂಲಸ್ವರೂಪದಲ್ಲಿ ಅಥವಾ ಅದರಿಂದ ಉಂಟಾಗುವ ಕಲ್ಪನೆಗಳಲ್ಲಿ ಏನೋ ಗೊಂದಲವಿದೆಯೆಂದು ನಮ್ರತಾ ಹೃದಯದ ವ್ಯಕ್ತಿಗಳನ್ನು ಮನದಟ್ಟು ಮಾಡಲು ಸಾಕು. ಹಾನಿಗೊಂಡವರು ಸಾಮಾನ್ಯವಾಗಿ ಸ್ವಯಂ ಪ್ರಜ್ಞಾವಂತರು. ಅವರಲ್ಲಿರುವ ಸ್ವಪ್ರತಿಷ್ಠೆ ಅವರನ್ನು ದೇವರೇ ತಮ್ಮನ್ನು ನೂತನ ಸೃಷ್ಟಿಯ ಉಳಿದವರೆಲ್ಲರಿಗಿಂತ ಪ್ರತ್ಯೇಕವಾಗಿ ಆದರಿಸಬೇಕೆಂದು ನಡೆಸುತ್ತದೆ. ಈ ರೀತಿಯಲ್ಲಿ ದೇಹವು ಒಂದೇ, ಅದರ ವಿವಿಧ ಅಂಗಗಳು ಅದರಲ್ಲಿ ಅನ್ಯೋನ್ಯವಾಗಿ ಕೂಡಿಕೊಂಡಿವೆ ಮತ್ತು ಒದಗಿ ಬರುವ ಪೌಷ್ಟಿಕಾಂಶವು ದೇಹದ ಪ್ರತಿಯೊಂದು ಅಂಗಕ್ಕೂ ಸರಬರಾಜಾಗಿ ಅದನ್ನು ಬಲಪಡಿಸುತ್ತದೆ ಮತ್ತು ಅವುಗಳು ಒಂದೊಕ್ಕೊಂದು ಸಂಯೋಗದಲ್ಲಿರುತ್ತವೆ ಎಂಬ ದೇವರ ವಾಕ್ಯದ ಸಾಮಾನ್ಯ ಬೋಧನೆಗಳಿಗೆ ವ್ಯತಿರಿಕ್ತವಾಗುತ್ತದೆ. ಈ ರೀತಿಯಲ್ಲಿ ದೇವರು ತನ್ನ ಜನರು ಯಾವ ಒಡಕುಗಳೂ ಇಲ್ಲದೇ ಒಬ್ಬರ ಮೇಲೆ ಒಬ್ಬರು ಪರಸ್ಪರ ಹೊಂದಿಕೊಂಡಿರುವಂತೆ ಉದ್ದೇಶಿಸಿದನು. ಈ ಉದ್ದೇಶದಿಂದ ಆತನು ತನ್ನ ಜನರು ಸಭೆಯಾಗಿ ಕೂಡಿಬರಲು ನಿರ್ಲಕ್ಷ್ಯ ಮಾಡಬಾರದೆಂದು ಮತ್ತು ಆತನು ತನ್ನ ದೇಹವಾದ ಸಭೆಯನ್ನು ಎಲ್ಲಾ ಸ್ಥಳಗಳಲ್ಲಿ ಅದು ಎಷ್ಟೇ ಸಣ್ಣ ಗುಂಪಾಗಿರಲಿ ಸ್ಥಾಪಿಸಲು ಬಹಳ ಸಂತೋಷಿಸುತ್ತಾನೆಂದು ಅಪೊಸ್ತಲನ ಮೂಲಕವಾಗಿ "ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ" (ಮತ್ತಾಯ 18:20) ಎಂದಿದ್ದಾನೆ.

ಈ ವಾಕ್ಯಭಾಗವನ್ನು ಪರೀಕ್ಷಿಸುವಲ್ಲಿ ನಾವು ಅಪೊಸ್ತಲನು ತನ್ನ ಕಾಲದಲ್ಲಿ ಸತ್ಯ ಮತ್ತು ಕ್ರೈಸ್ತತ್ವದ ಹೆಸರಿನಲ್ಲಿ ಪ್ರಚಲಿತವಾಗಿದ್ದ ಘೋರವಾದ ತಪ್ಪೊಂದನ್ನು ಖಂಡಿಸುವುದನ್ನು ಕಾಣುತ್ತೇವೆ. ಕರ್ತನ ಶಿಷ್ಯತ್ವದ ಹೆಸರಿನಲ್ಲಿ ಇದು ಸಮಗ್ರ ಪ್ರಕಟನೆಯನ್ನು ನಿರರ್ಥಕಗೊಳಿಸುವುದಾಗಿತ್ತು. ಈ ದೋಷವುಳ್ಳ ಪದ್ಧತಿಯು ನಿಜವಾದ ಸಭೆಯ ಅಥವಾ ಅದರ ಸಿದ್ಧಾಂತಗಳ ಭಾಗವಲ್ಲವೆಂದೂ, ಆದರೆ ಅದಕ್ಕೆ ವ್ಯತಿರಿಕ್ತವಾಗಿ ಇದು ಆತನ ಹೆಸರಿನಲ್ಲಿ ಹೇಳಿಕೊಳ್ಳುವ ಅಂತಿಕ್ರಿಸ್ತ ಅಥವಾ ಕ್ರಿಸ್ತವಿರೋಧಿ

ಸಂಗತಿಯಾಗಿದೆ ಮತ್ತು ನಾವು ತಪ್ಪು ದೋಣಿಯಲ್ಲಿ ತೇಲುತ್ತಿದ್ದೇವೆಂದು ಆತನು ಪ್ರಕಟಿಸುತ್ತಾನೆ. "ಅವರು ನಮ್ಮನ್ನು ಬಿಟ್ಟು ಹೊರಟುಹೋದರು, ಆದರೆ ಅವರು ನಮ್ಮವರಾಗಿರಲಿಲ್ಲ. (ಅವರು ಎಂದಿಗೂ ನಿಜ ಕ್ರೈಸ್ತರಾಗಿರಲಿಲ್ಲ ಅಥವಾ ಅದರಿಂದ ಸ್ಥಗಿತಗೊಂಡಿದ್ದರು) ಅವರು ನಮ್ಮವರಾಗಿದ್ದರೆ ನಮ್ಮ ಜೊತೆಯಲ್ಲೇ ಇರುತ್ತಿದ್ದರು" (1 ಯೋಹಾನ 2:19). ಮೆಸ್ಸೀಯನ ಪ್ರವಾದನೆಗಳು ಕೇವಲ ಸಾಂಕೇತಿಕ, ಮಾನವ ಜಾತಿಯಲ್ಲಿ ಅವು ನೆರವೇರಲಿಲ್ಲ ಎಂಬ ಅವರ ಹೇಳಿಕೆಗಳು ಮತ್ತು ದೇವಕುಮಾರನು ಮಾಂಸಧಾರಿಯಾದನು, ದೀಕ್ಷಾಸ್ನಾನದಂದು ಪವಿತ್ರಾತ್ಮನಿಂದ ಅಭಿಷೇಕ ಹೊಂದಿದನು, ನಮ್ಮನ್ನು ಪಾಪದಿಂದ ವಿಮೋಚಿಸಿದನು ಎಂಬಿತ್ಯಾದಿ ಸುವಾರ್ತಾ ಹೇಳಿಕೆಗಳ ಸಂಪೂರ್ಣ ನಿರಾಕರಣೆ ಮುಂತಾದ ಅವರ ಅನೇಕ ದೋಷಗಳನ್ನು ಆತನು ಎತ್ತಿ ತೋರಿಸುತ್ತಾನೆ.

ಅಪೋಸ್ತಲರ ಅಲೋಚನೆ ಏನೆಂದರೆ, ಹೇಗೂ ಕ್ರೈಸ್ತರಾದವರೆಲ್ಲರೂ, ದೇವರ ಯೋಜನೆಗಳನ್ನು ಎಷ್ಟರಮಟ್ಟಿಗಾದರೂ ಅರಿತಿದ್ದರೂ ತಾವು ಮತ್ತು ಎಲ್ಲರೂ ಇದುವರೆಗೆ ಪಾಪಿಗಳಾಗಿದ್ದವರು ಮತ್ತು ಒಬ್ಬ ವಿಮೋಚಕನ ಅಗತ್ಯತೆ ಇದ್ದವರು ಎಂಬ ಸತ್ಯವನ್ನು ಮೊದಲಿಗೆ ತಮ್ಮ ಮುಂದೆ ಇರಿಸಿಕೊಳ್ಳತಕ್ಕದ್ದು. ಎರಡನೆಯ ಸತ್ಯ ಸಂಗತಿಯೆಂದರೆ ಒಬ್ಬ ವಿಮೋಚಕನಾಗಿ ಯೇಸು ತನ್ನ ಸ್ವಂತ ಪ್ರಾಣವನ್ನೇ ಅರ್ಪಿಸಿ ತಮ್ಮನ್ನು ರಕ್ಷಿಸಿದ್ದಾನೆ ಎಂಬುದು. ಈ ಪ್ರಾಥಮಿಕ ಸತ್ಯವನ್ನು ಬೋಧಿಸಲು ಅವರಿಗೆ ಯಾವ ವ್ಯಕ್ತಿಯ ಅವಶ್ಯಕತೆಯೂ ಇರದು. ದೇವರ ವಾಕ್ಯಗಳು ಕ್ರಿಸ್ತನು ತಮ್ಮ ಪಾಲಿಗೆ ಮೃತನಾದನು ಮತ್ತು ತಮಗೆ ನೀತಿ ನಿರ್ಣಯವನ್ನು ಉಂಟುಮಾಡುವ ಸಲುವಾಗಿ ಪುನಃ ಸತ್ತವರೊಳಗಿಂದ ಜೀವಿತನಾದನು ಮತ್ತು ಇದರ ಫಲವಾದ ಶುದ್ಧೀಕರಣ ಮತ್ತು ಮಹಿಮೆಯ ನಿರೀಕ್ಷೆಯು ಅವರ ಪರವಾಗಿ ಕ್ರಿಸ್ತನ ತ್ಯಾಗದ ಮೌಲ್ಯಗಳ ಮೇಲೆ ಆತುಕೊಂಡಿದೆ ಎಂಬಿತ್ಯಾದಿ ಕ್ರೈಸ್ತ ಧರ್ಮದ ಮೂಲ ಸತ್ಯದ ಬಗ್ಗೆ ಅವರಿಗೆ ಇನ್ನೂ ಅರಿವಿಲ್ಲದೆ ಹೋದಲ್ಲಿ ಅವರು ಕ್ರೈಸ್ತರೇ ಅಲ್ಲ. ಮಗನು ಪ್ರಕಟವಾಗುವ ಮುನ್ನ ಮಗನನ್ನು ನಂಬದೇ ತಂದೆಯನ್ನು ಮಾತ್ರ ನಂಬುವುದು ಸಾಧ್ಯವಿದ್ದಾಗ್ಯೂ, ಈಗ ಮಗನನ್ನು ನಿರಾಕರಿಸುವವನು ತಂದೆಯನ್ನು ಸಹಾ ನಿರಾಕರಿಸುವವನಾಗಿದ್ದಾನೆ. ದೇವರನ್ನು ಮತ್ತು ಆತನ ಯೋಜನೆಗಳನ್ನು ಒಪ್ಪಿಕೊಳ್ಳದೆ ಅವುಗಳ ಕೇಂದ್ರ ವ್ಯಕ್ತಿ ಮತ್ತು ನಿರ್ವಾಹಕನಾದ ದೇವರ ಮಗನನ್ನು ಯಾರೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಆದುದರಿಂದ, ನಾವಿಂದು ಪವಿತ್ರಾತ್ಮನಿಂದ ಉತ್ಪನ್ನಗೊಂಡ ಯಾರೇ ಆಗಲಿ ಮೊದಲಿಗೆ ದೇವರು ಪಡೆದ ಆತನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ನಂಬಿದವರಾಗಿರಬೇಕು ಎಂಬುದನ್ನು ಸ್ಪಷ್ಟವಾಗಿ ಕಾಣುವವರಾಗಿದ್ದೇವೆ. ದೇವರು ಪಡೆದ ಒಬ್ಬನೇ ಮಗನಾದ ಆತನು ದೇಹ ಧರಿಸಿಕೊಂಡು ಮನುಷ್ಯನಾದನು; ಆತನು ಪವಿತ್ರನಾಗಿದ್ದನು, ಸಾಧುಸ್ವಭಾವದವನೂ ಮತ್ತು ಪಾಪಿಗಳಿಂದ ಬೇರ್ಪಟ್ಟಿದ್ದನು. ಆತನು ತನ್ನನ್ನು ನಮಗಾಗಿ ಈಡುಬಲಿಯಾಗಿ ಅರ್ಪಿಸಿಕೊಂಡನು. ಆತನ ಈ ತ್ಯಾಗವು ದೇವರಿಂದ ಅಂಗೀಕೃತವಾಯಿತೆಂಬುದು ಆತನ ಪುನರುತ್ಥಾನದಲ್ಲಿ ಮಹಿಮಾ ರಾಜನಾಗಿ ಮತ್ತು ವಿಮೋಚಕನಾಗಿ ಸಾಕ್ಷಾತ್ಕಾರಗೊಂಡಿತು. ಈ ವಿಶ್ವಾಸವಿಲ್ಲದೆ ಯಾರೂ ಪವಿತ್ರಾತ್ಮನ ಅಭಿಷೇಕವನ್ನು ಸ್ವೀಕರಿಸಲು ಸಾಧ್ಯವಿಲ್ಲ. ಇದರ ಪರಿಣಾಮವಾಗಿ ಯಾರಿಗೆ ಅಭಿಷೇಕದ ಅವಶ್ಯಕತೆ ಇದೆಯೋ ಅವರು ಯೇಸು ದೇವರ ಮಗನು ಹೌದೋ ಅಲ್ಲವೋ, ಆತನು ವಿಮೋಚಕನೋ ಅಲ್ಲವೋ, ಸೂಕ್ತ ಸಮಯದಲ್ಲಿ ದೇವರ ಗ್ರಂಥದಲ್ಲಿರುವ ವಾಗ್ದಾನಗಳನ್ನು ಪೂರೈಸಬಲ್ಲ ಮೆಸ್ಸೀಯನು ಆತನು ಹೌದೋ ಅಲ್ಲವೋ ಎಂಬಿತ್ಯಾದಿಯಾಗಿ ಚರ್ಚಿಸುತ್ತಾ ತಮ್ಮ ಸಮಯವನ್ನು ನಿರರ್ಥಕಗೊಳಿಸಲಾಗದು. ಆದೇ ಅಭಿಷೇಕವನ್ನು ಹೊಂದಿದ ನಾವು ಅದು ನಮ್ಮಲ್ಲಿ ನೆಲೆಗೊಂಡಿರುವುದಾದರೆ ಅದು ಈ ಸಂಗತಿಗಳ ಸತ್ಯವನ್ನು ನಮಗೆ ದೃಢಪಡಿಸುತ್ತದೆ. ನಾವು ಆತನಲ್ಲಿ ನೆಲೆಗೊಂಡಿರಬೇಕೆಂದು ಬೋಧಿಸಿರುವುದಾದರೂ, ನಾವು ಆ ರೀತಿ ನೆಲೆಗೊಳ್ಳದೇ ಹೋದಲ್ಲಿ, ಅದು ಬಳ್ಳಿಯಿಂದ ಕಡಿಯಲ್ಪಟ್ಟ ರೆಂಬೆಯಂತೆ ಬಿದ್ದು ಹೋಗುವುದು ಖಚಿತ. ಆತನಲ್ಲಿ ನೆಲೆಗೊಂಡಿರುವವರು ಆತನ ಆತ್ಮನಲ್ಲಿಯೂ ನೆಲೆಗೊಳ್ಳುವುದು ಖಚಿತ ಮತ್ತು ಅವರು ಆತನನ್ನು ನಿರಾಕರಿಸಲು ಸಾಧ್ಯವಿಲ್ಲ.

"ನೀವು ಪವಿತ್ರನಾಗಿರುವಾತನಿಂದ ಅಭಿಷೇಕವನ್ನು ಹೊಂದಿದವರಾಗಿದ್ದು ಎಲ್ಲವನ್ನೂ ತಿಳಿದವರಾಗಿರುತ್ತೀರಿ" (1 ಯೋಹಾನ 2 :20). ಯೆಹೂದ್ಯ ಯುಗದಲ್ಲಿ ಪರಿಶುದ್ಧ ತೈಲವು ಪರಿಶುದ್ಧಾತ್ಮನ ಪ್ರತಿರೂಪವಾಗಿತ್ತು ಮತ್ತು ಇದನ್ನು ಮಹಾ ಯಾಜಕನ ನೆತ್ತಿಯ ಮೇಲೆ ಅಭಿಷೇಕಮಾಡಲಾಗುತ್ತಿತ್ತು. ಇದು ಆತನ ದೇಹದ ಮೇಲೆಲ್ಲಾ ಹರಿದು ಬರುತ್ತಿತ್ತು; ಆದುದರಿಂದ ಕ್ರಿಸ್ತನ ದೇಹವಾಗಿರುವವರು ಪವಿತ್ರಾತ್ಮನಿಂದ ಅಭಿಷೇಕ ಹೊಂದುತ್ತಾರೆ ಮತ್ತು ದೇವರಾತ್ಮನು ಎಲ್ಲೆಲ್ಲಿ ಇರುತ್ತಾನೋ ಅವರುಗಳು ತೈಲಗುಣವುಳ್ಳವರಾಗಿಯೂ, ಮೃದುವಾಗಿಯೂ ಮತ್ತು ನುಣುಪಾಗಿಯೂ ಇರುತ್ತಾರೆ. ಇದರ ಧೋರಣೆಯು ಎಲ್ಲರೊಡನೆಯೂ ಸಾಧ್ಯವಾದಮಟ್ಟಿಗೆ ಅಂದರೆ ಎಲ್ಲಿಯವರೆಗೆ ನೀತಿವಂತಿಕೆಯ ನಿಷ್ಠೆಯು ಅನುಮತಿಸುವದೋ ಅಲ್ಲಿಯವರೆಗೆ ಸಮಾಧಾನದಿಂದಿರುವುದು. ಇದು ತಿಕ್ಕಾಟಕ್ಕೆ, ಕೋಪಕ್ಕೆ, ಹಗೆತನಕ್ಕೆ, ದ್ವೇಷಕ್ಕೆ ಮತ್ತು ಕಚ್ಚಾಟಕ್ಕೆ ವಿರುದ್ಧವಾಗಿದೆ. ಇದರ ಪ್ರಭಾವಕ್ಕೆ ಒಳಗಾದವರು ದೇವರ ಬೋಧನೆಗಳನ್ನು ಸಂತೋಷದಿಂದ ಸ್ವೀಕರಿಸುತ್ತಾರೆ ಮತ್ತು ಆತನ ಯೋಜನೆಗಳ ಮತ್ತು ಪ್ರಕಟನೆಗಳ ಬಗ್ಗೆ ಜಗಳವಾಡುವಲ್ಲಿ ದೂರವಿರುತ್ತಾರೆ. ಅವುಗಳೊಂದಿಗೆ ಅವರು ಸಂಪೂರ್ಣ ಸಾಮರಸ್ಯಕ್ಕೆ ಒಳಗಾಗುತ್ತಾರೆ. ಅನುರೂಪವಾಗಿ ನುಣುಪಿನ ವಾಗ್ದಾನಗಳಾದ ತೈಲಲೇಪನ, ಮೃದುತ್ವ, ಶಾಂತಿ. ಸಂತೋಷ ಮತ್ತು ಪವಿತ್ರತೆಗಳನ್ನು ತಮ್ಮ ಮನಸ್ಸುಗಳಲ್ಲಿ ಹೊಂದಿಕೊಂಡಿರುತ್ತಾರೆ.

ವಾಕ್ಯದ ಈ ಅರ್ಥದಲ್ಲಿ ಯಾರ್‍ಯಾರು ದೇವರಾತ್ಮನನ್ನು ಪಡೆದುಕೊಳ್ಳುತ್ತಾರೋ, ಶಾಂತಿ, ಸಂತೋಷ ಮತ್ತು ಸಾಮರಸ್ಯಗಳು ತಮಗೆ ದೇವರ ಸಂಬಂಧದಲ್ಲಿ ದೊರೆತಿವೆ ಎಂದು ಭಾವಿಸಿಕೊಂಡು ಅವುಗಳನ್ನು ತಮ್ಮ ಹೃದಯದಲ್ಲಿ ಬರಮಾಡಿಕೊಳ್ಳುತ್ತಾರೋ ಅಂತವರಿಗೆ ಇವುಗಳು ಅವರು ಕ್ರಿಸ್ತನನ್ನು ತಮ್ಮ ಅಭಿಷಕ್ತನೆಂದು ನಂಬಿ ಅಂಗೀಕರಿಸಿದ ನಂತರವೇ ದೊರೆಯುತ್ತವೆ. ಈ ಅಭಿಷೇಕವು ಅವರಿಗೆ ಒಂದು ನಿದರ್ಶನ ಮಾತ್ರವಲ್ಲ, ಆದರೆ ಒಂದು ಗಣನೀಯ ಮಟ್ಟದಲ್ಲಿ ಕ್ರಿಸ್ತನ ದೇಹದ ಅಂಗಗಳಾಗಿರುವ ಇತರರಿಗೂ ನಿದರ್ಶನವಾಗಿದೆ. ಕೆಲವರು ಈ ಶಾಂತಿ, ಸಂತೋಷ ಇವುಗಳ

ಕೊರತೆಯುಳ್ಳವರಾಗಿದ್ದು ಹಗೆ ಹೊಟ್ಟೆಕಿಚ್ಚು, ಮತ್ತು ಜಗಳದ ಸ್ವಭಾವಗಳಿಂದ ತುಂಬಿದವರಾಗಿದ್ದು ನಿಶ್ಚಯವಾಗಿ ತೈಲಾಭಿಷೇಕದ ನಿದರ್ಶನವನ್ನು, ಅದಕ್ಕೆ ಹೊಂದಿಕೊಂಡಿರುವ ದೇವರಾತ್ಮನ ಮೃದುತ್ವವನ್ನು ಕಳಕೊಂಡವರಾಗಿದ್ದಾರೆ. ನಿಶ್ಚಯವಾಗಿ ನಾವೆಲ್ಲರೂ ಒಂದೇ ರೀತಿಯಾಗಿ ಇರುವವರಲ್ಲ ಮತ್ತು ಇತರರಂತೆ ಮೃದುತ್ವವು ಜೀವನದ ಹೊರಗಣ ಸಂಗತಿಗಳಲ್ಲಿ ಅಷ್ಟು ಬೇಗನೇ ಪ್ರಕಟಗೊಳ್ಳದೆ ಇರಬಹುದು; ಆದರೆ ಕ್ರಿಸ್ತೀಯ ಅನುಭವದ ಮೊದಲಲ್ಲಿಯೇ ಪವಿತ್ರಾತ್ಮನನ್ನು ಹೊಂದಿಕೊಂಡಿರುವ ಈ ಮೃದುತ್ವವನ್ನು ಹೃದಯದಲ್ಲಿ ಕಂಡುಕೊಳ್ಳಬೇಕು. ಇದು ನಾವು ಕ್ರಿಸ್ತನೊಂದಿಗಿದ್ದೇವೆ ಮತ್ತು ಆತನಿಂದ ಕಲಿತುಕೊಂಡವರಾಗಿದ್ದು ಪವಿತ್ರಾತ್ಮನನ್ನು ಹೊಂದಿಕೊಳ್ಳುತ್ತೇವೆ ಮತ್ತು ಇದಾದ ಕೂಡಲೇ ನಾವು ನಮ್ಮ ದಿನನಿತ್ಯದ ಜೀವನದಲ್ಲಿ ಇತರರಿಗೆ ಸಾಕ್ಷಿಗಳಾಗಲು ಪ್ರಾರಂಭಿಸಬೇಕು ಎಂಬುದಕ್ಕೆ ನಿದರ್ಶನವಾಗಿದೆ.

ಬೋಧಕರುಗಳ ಅಗತ್ಯತೆ ಮತ್ತು ಅವರ ಮೂಲಕ ಕರ್ತನ ಮನಸ್ಸನ್ನು ಅರ್ಥಮಾಡಿಕೊಳ್ಳುವ ಭಾವವನ್ನು ವಿರೋಧಿಸುವ ಯಾವುದೂ ದೈವಿಕ ಗ್ರಂಥಗಳಲ್ಲಿ ಅಥವಾ ದೇವರ ವಾಕ್ಯದಲ್ಲಿ ನಮಗೆ ಕಂಡುಬರುವುದಿಲ್ಲ. ದೇವರು ಬೋಧಕರುಗಳ ಮೇಲೆ ಅವಲಂಬಿಸಿದ್ದಾನೆ ಮತ್ತು ಆತನು ನೂತನ ಸೃಷ್ಟಿಗಳನ್ನು ಬೇರೆ ಯಾವ ರೀತಿಯಲ್ಲಿಯೂ ಅವರಿಗೆ ಆದೇಶಿಸಲು, ತಿಳುವಳಿಕೆ ನೀಡಲು ಮತ್ತು ಕಟ್ಟಿ ಬೆಳೆಸಲು ಸಾಧ್ಯವಿಲ್ಲವೆಂದು ತಿಳಿಯಬಾರದು; ಆದರೆ ಆತನ ವಾಕ್ಯವು ಪ್ರಕಟಿಸುವಂತೆ ಇದು ಆತನ ಬೋಧನಾ ಕತೃತ್ವ ಅಥವಾ ವಿಧಾನವಾಗಿದ್ದು ಇದರ ಮೂಲಕವಾಗಿ ಆತನು ತನ್ನ ದೇಹವೆಂಬ ಸಭೆಯನ್ನು ಅದರ ಪ್ರತಿಯೊಬ್ಬ ಸದಸ್ಯನೂ ಬೇರೆಯವರೊಂದಿಗೆ ಸಹಕರಿಸಿ ಸಹಾಯಮಾಡುವ ನಿಟ್ಟಿನಲ್ಲಿ ನಿಷ್ಕಳಂಕವಾಗಿ ಕಟ್ಟುವವನಾಗಿದ್ದಾನೆ.

ಈ ಬೋಧಕರುಗಳನ್ನು ದೋಷರಹಿತರು ಎಂದು ತಿಳಿಯಬಾರದೆಂಬ ಸತ್ಯವನ್ನು ನಾವೀಗಾಗಲೇ ಪರಿಗಣಿಸಿದ್ದೇವೆ. ಅವರ ಮಾತುಗಳನ್ನು ದೈವಿಕ ಮಟ್ಟಕ್ಕೆ ತಕ್ಕಂತೆ ಅಂದರೆ ಕರ್ತನ ಮಾತುಗಳೊಂದಿಗೆ ಮತ್ತು ಪವಿತ್ರಾತ್ಮನ ನಡೆಸುವಿಕೆಯಂತೆ ನಮ್ಮನ್ನು ಎಚ್ಚರಿಸಿದ ಅಪೊಸ್ತಲರ ಹಿಂದಿನ ಹಂಚಿಕೆಯಲ್ಲಿ ಪವಿತ್ರ ಪ್ರವಾದಿಗಳು ಪವಿತ್ರಾತ್ಮದ ಪ್ರೇರಣೆಯಿಂದ ಮಾತನಾಡಿದ ಮತ್ತು ಯುಗಾಂತ್ಯಕ್ಕೆ ಬಂದಿರುವ ನಮ್ಮನ್ನು ಎಚ್ಚರಿಸುವುದಕ್ಕೆ ಬರೆದಿರುವ ಮಾತುಗಳೊಂದಿಗೆ ಅಳೆಯಬೇಕು ಮತ್ತು ತೂಕಹಾಕಬೇಕು. ನಾವೀಗ ನಿಮ್ಮ ಗಮನವನ್ನು "ದೇವರ ವಾಕ್ಯದಲ್ಲಿ ಉಪದೇಶ ಹೊಂದುವವನು ಉಪದೇಶ ಮಾಡುವವನಿಗೆ ತನಗಿರುವ ಎಲ್ಲಾ ಒಳ್ಳೆಯವುಗಳಲ್ಲಿ ಪಾಲುಕೊಡಲಿ" (ಗಲಾ. 6:6) ಎಂಬ ಅಪೊಸ್ತಲನ ಈ ಮಾತುಗಳೆಡೆಗೆ ಅಳೆಯುತ್ತೇವೆ.

## "ಕಲಿಸುವವನೂ ಆತನೇ, ಬೋಧಿಸುವವನೂ ಆತನೇ"

## "Him that is Taught" and "Him that Teacheth"

ಈ ವೇದಗ್ರಂಥವು ಇತರೆ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ನಮಗೆ ಸೂಚಿಸುವುದೇನಂದರೆ, ದೇವರು ತನ್ನ ಜನರು ಒಬ್ಬರಿಂದೊಬ್ಬರು ಕಲಿಯುವಂತೆ ಏರ್ಪಡಿಸಿದ್ದಾನೆ. ಆತನ ಹಿಂಡಿನಲ್ಲಿರುವ ಅತಿ ನಮ್ರನು ಸಹಾ ತನ್ನಷ್ಟಕ್ಕೇ ಅಲೋಚಿಸಿಕೊಂಡು ವೈಯುಕ್ತಿಕ ವಿಶ್ವಾಸವನ್ನು ಮತ್ತು ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಬಹುದಾಗಿದೆ. ಅಯ್ಯೋ! ಈ ಮುಖ್ಯವಾದ ಸಂಗತಿಯನ್ನು ಕ್ರಿಸ್ತನ ಹೆಸರನ್ನು ಹೇಳಿಕೊಳ್ಳುವ ಅನೇಕರು ಉದಾಸೀನ ಮಾಡುವವರಾಗಿದ್ದಾರೆ. ವೇದ ಗ್ರಂಥವು ವಿದ್ಯಾರ್ಥಿಗಳನ್ನೂ, ಬೋಧಕರನ್ನು ಗ್ರಹಿಸುತ್ತದೆ; ಆದರೆ ವಿದ್ಯಾರ್ಥಿಗಳು ಸಂಪರ್ಕಿಸಲು. ಮತ್ತು ತಮಗೆ ಬೋಧಿಸುವ ವಿಷಯಗಳಿಗೆ ಸಂಬಂಧಪಟ್ಟಂತೆ ತಮ್ಮ ಗಮನಕ್ಕೆ ಬರುವ ಎಲ್ಲಾ ಸಂಗತಿಗಳನ್ನೂ ತಮ್ಮ ಶಿಕ್ಷಕರಿಗೆ ತಿಳಿಸಲು ಮುಕ್ತರಾಗಿರಬೇಕು. ಆದರೆ ಇದು ಶಿಕ್ಷಕರಾಗುವ ಇಚ್ಛೆಯಿಂದಿರದೆ ಹಿರಿಯ ಸಹೋದರ ವಿದ್ಯಾರ್ಥಿಗೆ ಒಬ್ಬ ಬುದ್ಧಿವಂತ ವಿದ್ಯಾರ್ಥಿಯಂತೆ ಇರಬೇಕು. ಅವರು ಯಂತ್ರದಂತಾಗಬಾರದು, ಅಥವಾ ಸಂಪರ್ಕ ಮಾಡಲು ಅಂಜಬಾರದು. ಅವರಿಗೆ ವೇದಭಾಗವು ತಪ್ಪಾಗಿ ಅನ್ವಯವಾಗಿದೆ ಎಂದು ಎನಿಸಿದಾಗ ಕ್ರಿಸ್ತನ ದೇಹವು ಶುದ್ಧವಾಗಿರುವಂತೆ ಅವರು ಪ್ರಶ್ನಿಸುವುದರ ಮೂಲಕ ತಮ್ಮ ಪಾಲಿನ ಕರ್ತವ್ಯವನ್ನು ಮಾಡಲೇಬೇಕು. ಅವರು ಆ ರೀತಿಯಲ್ಲಿ ವಿಮರ್ಶಕರಾಗಬಹುದು; ಅವರು ಈ ರೀತಿಯಲ್ಲಿ ಮಾಡಲು ನಿರುತ್ಸಾಹ ಹೊಂದುವ ಬದಲು ಅವರು ತಮ್ಮ ಬೋಧಕರುಗಳನ್ನು ಟೀಕಿಸಬಾರದು ಅಥವಾ ಆತನು ವಿವರಿಸಿ ವಿಷಯದ ಬಗ್ಗೆ ಪ್ರಶ್ನಿಸಬಾರದು ಎಂಬದಾಗಿ ಹೇಳುವ ಬದಲು ಅವನು ತನ್ನ ಟೀಕೆಯನ್ನು ವ್ಯಕ್ತಗೊಳಿಸಲು ಅಡ್ಡಿಪಡಿಸಬಾರದು.

ದೇವರು ಯಾವುದೇ ಅತಿಯಾದ ವಿಮರ್ಶಾತ್ಮಕತೆಯನ್ನು ಅಥವಾ ಕಾದಾಡುವ ಅಥವಾ ಅನವಶ್ಯಕವಾಗಿ ತಪ್ಪು ಕಂಡುಹಿಡಿಯುವಿಕೆಯನ್ನು ಪ್ರೋತ್ಸಾಹಿಸುತ್ತಾನೆಂದು ನಾವು ಹೇಗೂ ಭಾವಿಸಲಾಗದು. ಇಂತಹ ಹುಮ್ಮಸ್ಸು ಪವಿತ್ರಾತ್ಮನಿಗೆ ಸಂಪೂರ್ಣವಾಗಿ ವಿರುದ್ಧವಾದುದು. ಮಾತ್ರವಲ್ಲ ಇದು ಬಹಳ ಅಪಾಯಕಾರಿಯಾದುದು. ಯಾಕೆಂದರೆ ಈ ರೀತಿಯಾಗಿ ವಾದಿಸುವ ಹುಮ್ಮಸ್ಸುಳ್ಳ ಯಾರೇ ಆಗಲಿ ತಾವೇ ನಿಜವೆಂದು ನಂಬಿರದ ಕೆಲವೊಂದು ಪೂರ್ವ ಕಲ್ಪಿತ ಅಥವಾ ಊಹನಾ ಸಂಗತಿಗಳನ್ನು ಮುಂದಿಟ್ಟುಕೊಂಡು ಕೇವಲ ಎದುರಾಳಿಯನ್ನು ಗಲಿಬಿಲಿಗೊಳಿಸುವ ಸಲುವಾಗಿಯಷ್ಟೇ ವಾದಿಸುತ್ತಾರೆ. ಇಂತಹ ವಾದಗಳು ಮತ್ತು ಇಂತಹ ಕ್ರಮಗಳು ಇತರರಿಗೆ ಖಂಡಿತವಾಗಿಯೂ ಕೇಡನ್ನು ಉಂಟುಮಾಡುವುದು. ಸತ್ಯಕ್ಕೆ ತೋರುವ ನಿಷ್ಠೆಯು ಅದರಲ್ಲಿ ಪ್ರಗತಿ ಹೊಂದಿಕೊಳ್ಳುವುದು ಬಹು ಅಗತ್ಯ; ಒಬ್ಬನು ಸತ್ಯವೆಂದು ನಂಬಿರುವುದನ್ನು ವಿರೋಧಿಸುವುದು ಅಥವಾ ಒಬ್ಬನು ತಪ್ಪೆಂದು ಭಾವಿಸಿರುವುದನ್ನು ತಮಾಷೆಗಾಗಿಯೋ ಅಥವಾ ಇನ್ನಾವುದೋ ಕಾರಣಕ್ಕಾಗಿಯೋ ತಾತ್ಕಾಲಿಕವಾಗಿ ಎತ್ತಿಹಿಡಿಯುವುದು ಖಂಡಿತವಾಗಿಯೂ ದೇವರಿಗೆ ಅಪಮಾನ ಪಡಿಸುವಂಥಾದ್ದು ಮತ್ತು ಇದು ಕೇವಲ ಪ್ರತಿಕಾರವನ್ನು ಉಂಟುಮಾಡುತ್ತದೆ. ಅಯ್ಯೋ! ಎಷ್ಟೋ ಜನರು ತಾವು ನಿಜವೆಂದು ನಂಬಿರುವ ಸ್ಥಾನಕ್ಕೆ ವಿರೋಧವಾಗಿ ಏನನ್ನಾದರೂ ಹೇಳುವುದನ್ನು ಕೈಗೆತ್ತಿಕೊಂಡಿದ್ದು ತೊಡಕಿನಲ್ಲಿ ಸಿಕ್ಕಿಬಿದ್ದಿರುವುದಲ್ಲದೆ ಸಂಪೂರ್ಣವಾಗಿ ಮರಳುಗೊಂಡಿದ್ದಾರೆ ಮತ್ತು ಈ ಮಾರ್ಗದಲ್ಲಿ ಮುಂದುವರೆಯುತ್ತಾ ಅಂಧರಾಗಿದ್ದಾರೆ. ಕರ್ತನ ನಂತರ ಇಡೀ ಪ್ರಪಂಚದಲ್ಲಿ ಸತ್ಯವೇ ಬಹು ಅಮೂಲ್ಯವಾದುದು; ಅದರೊಂದಿಗೆ ಲಘುವಾಗಿ

ವರ್ತಿಸಕೂಡದು. ಈ ದಿಕ್ಕಿನಲ್ಲಿ ಯಾರ್ಯಾರು ನಿರ್ಲಕ್ಷವುಳ್ಳವರಾಗಿದ್ದಾರೋ ಅವರು ಸ್ವತಃ ಹಾನಿಗೊಳ್ಳುವರು (2 ಥೆಸ. 2: 10–11 ನೋಡಿರಿ).

"ಸಂಪರ್ಕಿಸು" ಎಂಬ ಪದವು ವಿಶಾಲವಾದುದು ಎನ್ನುವುದು ಸರಿಯಾಗಿಯೇ ಇದೆ, ಅದು ಆಲೋಚನೆಗಳ, ಮನೋಭಾವನೆಗಳ ನಿವೇದನೆ ಮಾತ್ರವಾಗಿರದೆ, ಯಾರು ಕಲಿಸಲ್ಪಡುತ್ತಾರೋ ಮತ್ತು ಆತ್ಮೀಕ ವರಗಳನ್ನು ಪಡಕೊಳ್ಳುತ್ತಾರೋ ಅವರು ಅದನ್ನು ಯಾವುದಾದರೂ ರೀತಿಯಲ್ಲಿ ಕಲಿಸುವವರಿಗೆ ನಿವೇದಿಸಿಕೊಳ್ಳುವುದು ಎಂದು ಸಹಾ ಅರ್ಥ ಮಾಡಿಕೊಳ್ಳಬಹುದಾಗಿದೆ. ಆ ಮೂಲಕ ದೇವರಿಗೆ, ಸಹೋದರರುಗಳಿಗೆ ತಮ್ಮ ಮೇಧಾಶಕ್ತಿಯ ಫಲಗಳನ್ನು ಮತ್ತು ಸತ್ಯವನ್ನು ನೀಡುವುದಾಗಿದೆ. ನೂತನ ಸೃಷ್ಟಿಯ ಪವಿತ್ರ ದೈವೇಚ್ಛೆಗೆ ಇದು ಬಹಳ ಅವಶ್ಯ. "ಪಡಕೊಳ್ಳುವುದಕ್ಕಿಂತ ಕೊಡುವುದು ಹೆಚ್ಚಿನ ಭಾಗ್ಯ" ಎಂಬ ಕರ್ತನ ನುಡಿಗಳನ್ನು ಕ್ರೈಸ್ತರು ತಮ್ಮ ಅನುಭವದ ಆದಿಯಲ್ಲಿಯೇ ಕಂಡುಕೊಂಡರು. ಈ ಕಾರಣದಿಂದ ಇಂತಹ ಹುಮ್ಮಸ್ಸುಳ್ಳವರು ತಮ್ಮ ಭೂಸಂಬಂಧವಾದ ವಿಚಾರಗಳನ್ನು ಸತ್ಯದ ಸೇವೆಗೆ ನೀಡಲು ಮುಂದಾದರು. ಅದಕ್ಕೆ ಸಮತಟ್ಟಾಗಿ ಅವರು ತಮ್ಮ ಒಳ್ಳೆಯ ಮತ್ತು ಪ್ರಾಮಾಣಿಕ ಹೃದಯಗಳಲ್ಲಿ ಆತ್ಮೀಕ ಆಶೀರ್ವಾದಗಳನ್ನು ಹೊಂದಿಕೊಂಡರು. ಯಾವ ರೀತಿಯಲ್ಲಿ ನೀಡಬೇಕು ಮತ್ತು ಇಲ್ಲಿ ಕಾರ್ಯಗತಗೊಳಿಸಬೇಕಾದ ಜಾಣ್ಮೆ ಮುಂತಾದುವುಗಳನ್ನು ನಂತರ ಬೇರೆ ಶಿರೋನಾಮದಡಿಯಲ್ಲಿ ಪರಿಗಣಿಸಲಾಗುವುದು.

## ಸಭೆಯಲ್ಲಿ ಸ್ತ್ರೀಯರ ಕಾರ್ಯವ್ಯಾಪ್ತಿ
## Woman's Province in the Church

ದೈವಿಕ ಕ್ರಮದಲ್ಲಿ ಪುರುಷ ಮತ್ತು ಸ್ತ್ರೀಯ ಸಾಮಾನ್ಯ ಸಂಬಂಧವನ್ನು ಪರಿಶೀಲಿಸಿದ ನಂತರವೇ ಕೆಲವು ಅಂಶಗಳಲ್ಲಿ ಈ ಪ್ರಸ್ತಾಪವನ್ನು ಉತ್ತಮವಾಗಿ ಪರಿಗಣಿಸಬಹುದು; ಆದರೆ ಒಂದು ಮುಖ್ಯವಾದ ಅರ್ಥದಲ್ಲಿ ಇದನ್ನು ಪ್ರಸ್ತುತಿಪಡಿಸಲು ಇದು ಸೂಕ್ತ ಸ್ಥಳವಾಗಿದೆ ನಂತರದಲ್ಲಿ ಹೊರಹೊಮ್ಮಲಿರುವ ಇತರ ಒಮ್ಮನಸ್ಸಿನ ಅಭಿಪ್ರಾಯಗಳು ಈಗ ಪ್ರಸ್ತುತಿಪಡಿಸಲಿರುವ ಸಂಗತಿಗಳನ್ನು ಸಮರ್ಥಿಸುವುದೆಂದು ನಾವು ನಂಬುತ್ತೇವೆ.

ನೂತನ ಸೃಷ್ಟಿಯಾದ ಸಭೆಯನ್ನು ಆರಿಸಿಕೊಳ್ಳುವಲ್ಲಿ ಕರ್ತನು ಲಿಂಗವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಎಂಬುದಕ್ಕಿಂತ ಸ್ಪಷ್ಟವಾದುದು ಮತ್ತೊಂದಿಲ್ಲ. ಸ್ತ್ರೀ ಮತ್ತು ಪುರುಷರಿಬ್ಬರೂ ಕ್ರಿಸ್ತನು ಶಿರಸ್ಸಾಗಿರುವ ಒಂದೇ ದೇಹಕ್ಕಾಗಿ ದೀಕ್ಷಾಸ್ನಾನ ಹೊಂದಿದವರು. ಆದುದರಿಂದ ಇವರಿಬ್ಬರೂ ಏಕಪ್ರಕಾರವಾಗಿ ಪ್ರಥಮ ಪುನರುತ್ಥಾನ, ಅದರ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳಲ್ಲಿ ಸಾಮಾನ್ಯ ಪರಿಸ್ಥಿತಿಯಲ್ಲಿ ಸಮಭಾಗಿಗಳಾಗಿದ್ದಾರೆ. ಸಾಮಾನ್ಯ ಪರಿಸ್ಥಿತಿಯಲ್ಲಿ "ನಾವು ಸಹಿಸಿಕೊಳ್ಳುವವರಾಗಿದ್ದರೆ ಆತನೊಂದಿಗೆ ರಾಜ್ಯಭಾರವನ್ನೂ ಮಾಡುವೆವು". ನಮ್ಮ ಕರ್ತನು ಮತ್ತು ಅಪೋಸ್ತಲರುಗಳು ಇಬ್ಬರ ಬಗ್ಗೆಯೂ ಗೌರವಯುತವಾಗಿ ಹಾರ್ದಿಕವಾದ ಹೇಳಿಕೆಗಳನ್ನಿತ್ತಿದ್ದಾರೆ. ಆದುದರಿಂದ, ಸ್ತ್ರೀಯರ ನಡತೆ ಮತ್ತು ಸುವಾರ್ತಾ ಸೇವೆಯ ಬಗ್ಗೆ ನೇಮಿಸಿರುವ ಯಾವುದೇ ಮಿತಿಯು ಇನ್ನೂ ಶರೀರಧಾರಿಯಾಗಿರುವ ಪ್ರಸ್ತುತ ಸಮಯಕ್ಕೆ ಸಂಬಂಧಿಸಿದ್ದೆಂದು ಅರ್ಥಮಾಡಿಕೊಳ್ಳಬೇಕು. ಅದನ್ನು ಪುರುಷರ ಬಗ್ಗೆ ದೇವರ ಹೆಚ್ಚಿನ ಅಭಿಮಾನ ಎನ್ನುವುದಕ್ಕಿಂತ ಬೇರೆಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಸ್ತ್ರೀ ಮತ್ತು ಪುರುಷರ ನಡುವಿನ ಭೇದಭಾವವು ಒಂದು ಮಾದರಿಯ ಗುರುತಿನ ನೆಲೆಯಲ್ಲಿ ತೋರಿಸಿಕೊಡಲು ನಾವು ಪ್ರಯಾಸಪಡುತ್ತೇವೆ. ಯಾಕೆಂದರೆ ಪುರುಷನು ಸಭೆಯ ಶಿರಸ್ಸಾಗಿರುವ ಯೇಸು ಕ್ರಿಸ್ತನಿಗೆ ಹೋಲಿಕೆಯಾಗಿದ್ದಾನೆ, ಆದರೆ ಸ್ತ್ರೀಯು ಸಭೆಗೆ ಹೋಲಿಕೆಯಾಗಿದ್ದಾಳೆ. ದೇವರು ನೇಮಿಸಿದ ಪ್ರಾಧಾನ್ಯತೆಯಲ್ಲಿ ಆಕೆಯು ಮದಲಗಿತ್ತಿಯಾಗಿದ್ದಾಳೆ.

ತನ್ನ ತಾಯಿಯ ಬಗ್ಗೆ, ತನಗೆ ಮಹತ್ವವಾದ ಸೇವೆ ಸಲ್ಲಿಸಿದ ಮಾರ್ಥ, ಮರಿಯ ಮತ್ತಿತರ ಗೌರವಾನ್ವಿತ ಸ್ತ್ರಿಯರ ಬಗ್ಗೆ ಯೇಸುವಿಗಿದ್ದ ಪ್ರೀತಿಯು "ಯೇಸುವಿಗೆ ಅವರಲ್ಲಿ ಪ್ರೀತಿಯಿತ್ತು" (ಯೋಹಾನ 11:5) ಎಂಬ ಯೋಹಾನನ ನೇರವಾದ ಹೇಳಿಕೆಯ ಒತ್ತಟ್ಟಿಗೆ ಒಂದು ಪ್ರತ್ಯೇಕ ನಿದರ್ಶನವಾಗಿ ದಾಖಲೆಯಾಗಿದೆ. ಹೀಗಿದ್ದರೂ ಆತನು ತನ್ನ ಹನ್ನೆರಡು ಮಂದಿ ಅಪೋಸ್ತಲರನ್ನು ನಂತರದಲ್ಲಿ ಎಪ್ಪತ್ತು ಮಂದಿ ಶಿಷ್ಯರನ್ನು ಆಯ್ದುಕೊಳ್ಳುವಾಗ ಆತನು ಸ್ತ್ರೀಯರಲ್ಲಿ ಒಬ್ಬರನ್ನೂ ಆಯ್ದುಕೊಳ್ಳಲಿಲ್ಲ. ಇದೊಂದು ಅಜಾಗರೂಕತೆ ಎಂದು ನಾವು ಭಾವಿಸಲಾಗದು – ಲೇವಿಯರ ಸ್ತ್ರೀ ಸದಸ್ಯರುಗಳನ್ನು ಸಾರ್ವಜನಿಕ ಸೇವೆಗೆ ಈ ಹಿಂದೆ ಹದಿನಾರು ಶತಮಾನಕ್ಕೂ ಹೆಚ್ಚುಕಾಲ ಪರಿಗಣಿಸದೇ ಹೋದದ್ದು ಸಹಾ ಅಜಾಗರೂಕತೆಯಾಗಿರಲಿಲ್ಲ. ನಮ್ಮ ಕರ್ತನ ಭಕ್ತೆಯರಾದ ಸ್ತ್ರೀಯರು ಸಾಕಷ್ಟು ವಿದ್ಯಾವಂತರಾಗಿರಲಿಲ್ಲವೆಂಬ ವಿವರಣೆಯನ್ನು ನಾವು ನೀಡುವಂತಿಲ್ಲ. ಯಾಕೆಂದರೆ ಆಯ್ದುಕೊಂಡವರು ಸಹಾ ಜ್ಞಾನವಂತರಾಗಲೀ, ವಿದ್ಯಾವಂತರಾಗಲೀ ಆಗಿರಲಿಲ್ಲ. ಆದುದರಿಂದ ಸಹೋದರುಗಳಲ್ಲಿ ಪುರುಷರನ್ನು ಮಾತ್ರವೇ ವಿಶೇಷ ಸಾರ್ವಜನಿಕ ಸೇವೆಗಾಗಿ, ಕರ್ತನ ರಾಯಭಾರಿಗಳನ್ನಾಗಿ ಆಯ್ದುಕೊಳ್ಳಲಾಯಿತು ಎಂಬ ತೀರ್ಮಾನಕ್ಕೆ ನಾವು ಬರಬಹುದಾಗಿದೆ. ದೇವರ ವ್ಯವಸ್ಥೆಯು ಎರಡೂ ಲಿಂಗದವರನ್ನು ತನ್ನ ಸಾಧನವಾನ್ನಾಗಿ ಉಪಯೋಗಿಸಿಕೊಳ್ಳಲು ಸದಾ ಸಿದ್ಧವಾಗಿರುವ ವಿರೋಧಿಯ ರೀತಿಗೆ ತದ್ವಿರುದ್ಧವಾಗಿದೆ. ವಿರೋಧಿಯು ಸ್ತ್ರೀಯನ್ನು ಸದಾ ತನ್ನ ಬಹು ಉಪಯುಕ್ತ ಪ್ರತಿನಿಧಿಯೆಂದು ಕಂಡುಕೊಂಡಿದ್ದಾನೆ.

ಪ್ರಥಮ ಸ್ತ್ರೀಯು ಸೈತಾನನ ಪ್ರಪ್ರಥಮ ರಾಯಭಾರಿಯಾಗಿದ್ದಳು. ಪ್ರಥಮ ಪುರುಷನನ್ನು ಪಾಪದ ಬಲೆಗೆ ಸಿಲುಕಿಸಲು ಆ ಮೂಲಕ ಇಡೀ ಮಾನವಕುಲದ ಮೇಲೆ ಪಾಪದ ಶಾಪವಾದ ಮರಣವು ಎರಗಿ ಬರಲು ಇದು ಯಶಸ್ವಿಯಾಯಿತು. ಹಿಂದಿನ ಕಾಲದ ಮಾಯಗಾತಿಯರು, ಆತ್ಮ ಮಾಧ್ಯಮಗಳು, ಮತ್ತು ಆಧುನಿಕ ಕಾಲದ "ಕ್ರೈಸ್ತ ವಿಜ್ಞಾನಿಗಳು" ಇವರೆಲ್ಲರೂ ದೇವರು ಪುರುಷನ ಮೂಲಕ ಪ್ರಚಾರ ಮಾಡುವ ರೀತಿಯಲ್ಲಿಯೇ ಸೈತಾನನು ಸ್ತ್ರೀಯರ ಮೂಲಕ ಪ್ರಚಾರ ಮಾಡುವುದಕ್ಕೆ ನಿದರ್ಶನಗಳಾಗಿವೆ. ಮೇಲಾಗಿ ದೈವಿಕ ಕಾರ್ಯಕ್ರಮವು ಸ್ತ್ರೀಯರನ್ನು ಧಾರ್ಮಿಕ ಸಂಗತಿಗಳಲ್ಲಿ ಪರಿಗಣಿಸುವ ಅಂದರೆ ಈ ಸ್ತ್ರೀಯರಿಗೆ ಮೇಲ್ಪಟ್ಟದ ಪರಿಶುದ್ಧತೆ, ಆಧ್ಯಾತ್ಮಿಕತೆ ಮತ್ತು ದೇವರೊಡನೆ ಸಾಂಗತ್ಯ ಇವುಗಳನ್ನು ಅಧಿಕೃತವಾಗಿ ನೀಡುವ ಎಲ್ಲಾ ಪುರುಷರ ಸ್ವಾಭಾವಿಕ ಧೋರಣೆಗಳಿಗೆ ಪ್ರತಿಕೂಲವಾಗಿವೆ. ಈ ಧೋರಣೆಯನ್ನು

ಇಂದಿನ ಮತ್ತು ಹಿಂದಿನ ದಾಖಲೆಗಳಲ್ಲಿ ಐಗುಪ್ತದ ದೇವತೆ ಐಸಿಸ್, ಅಸ್ಸೀರಿಯದ ದೇವತೆ ಅಷ್ಟರೋತ್ ಮತ್ತು ರೋಮನ್ ದೇವತೆಗಳಾದ ಡೈಯಾನ, ಜುನೋ, ವೀನಸ್, ಬೆಲ್ಲೋನ ಮತ್ತು ಮರಿಯೋಲೇಟ್ರಿ ಇವುಗಳಲ್ಲಿ ಶತಮಾನಗಳಿಂದ ನಿದರ್ಶನಗೊಳ್ಳುವುದನ್ನು ಗಮನಿಸಬಹುದು. ಇಂದು ಕ್ರಿಸ್ತನ ಹೆಸರನ್ನು ಹೇಳಿಕೊಳ್ಳುವವರಲ್ಲಿ ಮೂರನೆಯ ಎರಡು ಭಾಗದವರಲ್ಲಿ ಪುರುಷನನ್ನು ಸಭೆಯಲ್ಲಿ ದೇವರ ವಕ್ತಾರ ಮತ್ತು ಪ್ರತಿನಿಧಿಯಾಗಿರುವುದನ್ನು ತಾಳಿಕೊಳ್ಳದ ರೀತಿಯಲ್ಲಿ ಇದು ಹೆಚ್ಚಾಗಿದೆ.

ಇದರ ಸಾಂಕೇತಿಕ ಅರ್ಥದೊಂದಿಗೆ, ದೇವರ ವಾಕ್ಯವು ನಮಗೆ ಸ್ತ್ರೀ ಅಥವಾ ಪುಲ್ಲಿಂಗಗಳ ತಾರತಮ್ಯಕ್ಕೆ ಬೇರೆ ಯಾವುದಾದರೂ ಕಾರಣವಿದೆಯೋ, ಈ ಪ್ರಸ್ತಾಪದ ಬಗ್ಗೆ ನಮ್ಮ ತರ್ಕವು ಸರಿಯಾದುದು ಹೌದೋ ಅಲ್ಲವೋ ಎಂಬುದನ್ನು ತಿಳಿಸುವುದಿಲ್ಲ; ಹೀಗಿದ್ದರೂ ನಮ್ಮ ಅಭಿಪ್ರಾಯದಲ್ಲಿ ಅತ್ಯಂತ ಕುಲೀನ ಸ್ತ್ರೀಯರಲ್ಲಿ ಹೃದಯ ಮತ್ತು ಮನಸ್ಸಿಗೆ ಸಂಬಂಧಿಸಿದ ಕೆಲವೊಂದು ಗುಣಲಕ್ಷಣಗಳು ಬೆರೆತು ಅವರನ್ನು ಸಾರ್ವಜನಿಕ ಧಾರ್ಮಿಕ ಕಾರ್ಯಗಳಿಗೆ ಯುಕ್ತವಲ್ಲವೆನಿಸುತ್ತವೆ. ಉದಾಹರಣೆಗಾಗಿ, ಸ್ತ್ರೀಯರು ಸ್ವಾಭಾವಿಕವಾಗಿ ಅದೃಷ್ಟವಶಾತ್ ಮೆಚ್ಚಿಗೆಯನ್ನು ಬಯಸುವವರಾಗಿ ಒಪ್ಪಿಗೆ ಹಾಗೂ ಮಾನ್ಯತೆಯನ್ನು ಪಡೆದುಕೊಳ್ಳುವವರಾಗಿದ್ದಾರೆ. ಈ ಗುಣಸ್ವಭಾವವು ಮನೆಯಲ್ಲಿ ಅಮೂಲ್ಯವಾದ ಆಶೀರ್ವಾದವಾಗಿದೆ, ಇದು ಅನೇಕ ರುಚಿಕರ ಆಹಾರ ಪದಾರ್ಥವನ್ನು ತಯಾರಿಸುವಲ್ಲಿ ಮತ್ತು ಆಕರ್ಷಕ ಗೃಹ ಶೃಂಗಾರಗಳಿಗೆ ಎಡೆಮಾಡಿ ಕೊಡುವುದಾಗಿದ್ದು ಇದು ವಯಸ್ಸಾದ ಪರಿಚಾರಿಕೆ ಮತ್ತು ಅವಿವಾಹಿತ ಗಂಡಸರ ಕೋಣೆಗಳಿಗೂ ಇರುವ ವ್ಯತ್ಯಾಸವನ್ನು ತೋರುತ್ತದೆ. ನಿಜವಾದ ಪತ್ನಿಯು ತನ್ನ ಕುಟುಂಬವನ್ನು ತನ್ನ ಕೆಲಸದಿಂದ ಸಂತೃಪ್ತಿಗೊಳಿಸುವ ಪ್ರಯಾಸದಲ್ಲಿ ಸಂತೋಷಿಸುತ್ತಾಳೆ ಮತ್ತು ಅವರು ಅಡುಗೆ ಮುಂತಾದ ಆಕೆಯ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ಪ್ರಕಟಿಸುವಾಗ ಉಲ್ಲಾಸಗೊಳ್ಳುತ್ತಾಳೆ. ಆಕೆಗೆ ಸಲ್ಲತಕ್ಕ ಪ್ರಶಂಸನೆಯನ್ನು ಎಂದಿಗೂ ಅಲ್ಲಗಳೆಯಬಾರದು. ಇದನ್ನು ಆಕೆಯ ಸ್ವಭಾವವು ಬಯಸುತ್ತದೆ ಮತ್ತು ಇವುಗಳು ಆಕೆಯ ಆರೋಗ್ಯ ಮತ್ತು ಪ್ರಗತಿಗಳಿಗೆ ಕೇವಲ ಅವಶ್ಯವಾಗಿವೆ.

ಆದರೆ, ಸ್ತ್ರೀಯನ್ನು "ತೊಟ್ಟಿಲನ್ನು ತೂಗುವ ಕೈ ಪ್ರಪಂಚವನ್ನು ಆಳಬಲ್ಲದು"ಎಂದು ಕವಿಯು ವರ್ಣಿಸಿರುವ ವಿಶಾಲವೂ ಮುಖ್ಯವೂ ಆದ ಆಕೆಯೆ ಪರಧಿಯಿಂದ ಮೇಲೆತ್ತಿದರೆ, ಆಕೆಯು ಸಾರ್ವಜನಿಕರ ಮುಂದೆ ಓರ್ವ ಬೋಧಕಿ ಅಥವಾ ಉಪನ್ಯಾಸಕಿ ಅಥವಾ ಲೇಖಕಿಯಾಗಿ ಬಂದಲ್ಲಿ ಆಕೆ ಬಹು ಅಪಾಯಕಾರಿ ಸ್ಥಾನದಲ್ಲಿರುತ್ತಾಳೆ; ಯಾಕೆಂದರೆ, ಆಕೆಯನ್ನು ನಿಜವಾದ ಸ್ತ್ರೀಯನ್ನಾಗಿಯೂ ಸಹಜವಾದ ಪುರುಷರಿಗೆ ಆಕರ್ಷಕವನ್ನಾಗಿ ಮಾಡಿರುವ ಆಕೆಯ ಲಿಂಗದ ಹಲವೊಂದು ವಿಲಕ್ಷಣಗಳು (ಇವುಗಳಲ್ಲಿ ಒಂದನ್ನು ನಾವೀಗಾಗಲೇ ಹೇಳಿದ್ದೇವೆ) ಅಸ್ವಾಭಾವಿಕ ಪರಿಸ್ಥಿತಿಯಲ್ಲಿ ಆಕೆಯ ಸ್ತ್ರೀಯತ್ವವನ್ನು ನಾಶಗೊಳಿಸಿ ಆಕೆಯನ್ನು ಪುರುಷನಂತೆ ಮಾಡುವ ಸ್ಥಿತಿ ತಲೆದೋರುತ್ತದೆ. ಪ್ರಕೃತಿಯು ಶಾರೀರಿಕವಾದ ಬಾಹ್ಯ ಆಕಾರದಲ್ಲಿ ಮಾತ್ರವಲ್ಲದೆ, ಅದಕ್ಕೆ ಸರಿಸಮವಾಗಿ ಹೃದಯದ ಮತ್ತು ಬುದ್ಧಿಯ ಗುಣಲಕ್ಷಣಗಳಲ್ಲಿಯೂ ಲಿಂಗದ ಅಳತೆ ಮತ್ತು ಇತಿಮಿತಿಗಳನ್ನು ವ್ಯವಸ್ಥೆಗೊಳಿಸಿದೆ. ಒಂದಕ್ಕೊಂದು ಸಾದ್ಯಂತವಾಗಿ ಒಗ್ಗಿಕೊಂಡಿದ್ದು ಯಾವುದೇ ಮಧ್ಯಪ್ರವೇಶಿಸಿದರೆ ಅಥವಾ ಸ್ವಾಭಾವಿಕ ನಿಯಮ ತಾತ್ಸಾರವಾಗಿರುವುದಾದರೆ ತಾತ್ಕಾಲಿಕವಾಗಿ ಈ ಬದಲಾವಣೆಗೆ ತೋರಿಕೆಗಾಗಿ ಲಾಭದಾಯಕವೆಂದು ಕಂಡು ಬಂದರೂ ಅಂತಿಮವಾಗಿ ಹಾನಿಗೊಳಗಾಗುತ್ತದೆ.

ಪ್ರಕೃತಿಯು ಮುಕ್ತವಾಗಿ ಸ್ತ್ರೀಯರಿಗೆ ದಯಪಾಲಿಸಿರುವ ಅನುಮೋದನೆಯು ಸರಿಯಾದ ರೀತಿಯಲ್ಲಿ ಕಾರ್ಯಗತವಾಗಿದ್ದು, ಆಕೆಯ ಮನೆಗೆ, ಕುಟುಂಬಕ್ಕೆ ಎಷ್ಟೋ ಸಹಾಯಕಾರಿಯಾಗಿದ್ದು ಇದನ್ನು ಸಾರ್ವಜನಿಕವಾಗಿ ಕಾರ್ಯಗತಗೊಳಿಸಿದ್ದಲ್ಲಿ, ಸಭೆ ಅಥವಾ ಲೋಕದ ಅನುಮತಿ ಪಡಕೊಳ್ಳುವಲ್ಲಿ ನಿಶ್ಚಯವಾಗಿಯೂ ಆಕೆಗೆ ಪಾಶವಾಗುತ್ತದೆ. ಪ್ರಸಿದ್ಧಿಹೊಂದುವ, ಇತರರಿಗಿಂತ ಬುದ್ಧಿವಂತರಾಗಿ, ಸಮರ್ಥರಾಗಿ ಕಾಣಿಸಿಕೊಳ್ಳುವ ಬಯಕೆಯು ಅಪಾಯಕಾರಿ ಯಾಗಿದ್ದು ಸಾರ್ವಜನಿಕರ ಕಣ್ಣಲ್ಲಿ ಎಲ್ಲವೂ ಆಕ್ರಮಿಸಿ ನಿಸ್ಸಂದೇಹವಾಗಿ ಉಬ್ಬಿಕೊಂಡಿದ್ದ ಅನೇಕಪುರುಷರನ್ನು ಮುಗ್ಗರಿಸುವಂತೆ ಮಾಡಿಬಿಡುತ್ತದೆ. ಈರೀತಿಯಾಗಿ ವಿರೋಧಿಯ ಪಾಶಕ್ಕೆ ಬೀಳಬೇಕಾಗುತ್ತದೆ. ಆದರೆ ಸ್ತ್ರೀಯ ಸ್ತ್ರೀಯತ್ವವು ಪ್ರಸಿದ್ಧಿಗೊಳ್ಳುವುದರಲ್ಲಿ ಆಕೆಯನ್ನು ಮುಗ್ಗರಿಸಿಸುವುದಲ್ಲದೆ ಇತರರನ್ನು ಸಹಾ ಮುಗ್ಗರಿಸುವಂತೆ ಮಾಡುತ್ತದೆ. ಯಾಕೆಂದರೆ, ಈ ರೀತಿಯಾಗಿ ಜಾರಿಬೀಳುವವರಿಗೆ ವಿರೋಧಿಯು ಖಂಡಿತವಾಗಿಯೂ ಕೃತಕವಾದ ತೈಲವನ್ನು ಒದಗಿಸುತ್ತಾನೆ. ಇದರ ತಪ್ಪು ಬೆಳಕಿನಿಂದಾಗಿ ಅನೇಕರು ಕರ್ತನ ಮಾರ್ಗವನ್ನು ತಪ್ಪಬಹುದಾಗಿದೆ. ಆದುದರಿಂದ ಅಪೋಸ್ತಲನು "ಬೋಧಕರಾದ ನಮಗೆ ಕಠಿಣವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹು ಮಂದಿ ಬೋಧಕರಾಗಬೇಡಿರಿ" (ಯಾಕೋಬ3:1) ಎಂದು ಎಚ್ಚರಿಸುವವನಾಗಿದ್ದಾನೆ. ಇದು ಸಹೋದಯರಿಗೆ ಅನ್ವಯಿಸುವುದಾದಲ್ಲಿ ಇನ್ನೂ ಸಹಾ ಬಲಯುಕ್ತವಾಗಿದೆ. ಅವರಲ್ಲಿ ಯಾರೂ ಬೋಧಕರಾಗಿ ನೇಮಕಗೊಳ್ಳದಿರುವುದು ಅವರಿಗೆ ಅಪಾಯಕಾರಿಯಾಗಿದೆ ಮತ್ತು ಅಪೋಸ್ತಲನು "ಉಪದೇಶ ಮಾಡುವುದಕ್ಕಾಗಲೀ ಪುರುಷರ ಮೇಲೆ ಅಧಿಕಾರ ನಡೆಸುವುದಕ್ಕಾಗಲೀ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ; ಅವರು ಮೌನವಾಗಿರಬೇಕು" (1 ತಿಮೋ. 2:12) ಎಂದು ಬರೆಯುತ್ತಾನೆ.

ಹೇಗೂ ಈ ಖಡಾಖಂಡಿತ ಹಾಗೂ ಸ್ಪಷ್ಟವಾದ ಹೇಳಿಕೆಗಳಿಂದ ಅತಿ ಹಳೆಯದಾದ ಕಥೆಗಳನ್ನು ಹೇಳುವುದರ ಮೂಲಕ ನೂತನ ಸೃಷ್ಟಿಯ ಸಹೋದರಿಯರು ಎಂದಿಗೂ ಆಶೀರ್ವಾದದಲ್ಲಿ ಪಾಲುದಾರರಾಗುವುದಿಲ್ಲವೆಂದು ತಿಳಿಯಬಾರದು. ಇದೇ ಅಪೋಸ್ತಲನು ಆತನ ಕಾಲದ ಅನೇಕ ಗಣ್ಯ ಸ್ತ್ರೀಯರನ್ನು ಸೇವೆಯಲ್ಲಿ "ಸಹಾಯಕರು' ಎಂದಿದ್ದಾನೆ. ಉದಾಹರಣೆಗೆ ಪ್ರಿಸ್ಕಿಲ ಮತ್ತು ಆಕೆಯ ಪತಿಯನ್ನು "ಸಹಾಯಕರು' ಅಥವಾ "ಜೊತೆಸೇವಕರು' ಎಂಬುದಾಗಿ ಕರೆದಿದ್ದಾನೆ (ರೋಮಾ. 16:3). ಇವರುಗಳು ಕೇವಲ ಅಪೋಸ್ತಲರನ್ನು ತಮ್ಮ ಮನೆಯಲ್ಲಿ ಉಪಚರಿಸಿದವರು ಮಾತ್ರವಲ್ಲ ಅದಕ್ಕಿಂತ ಹೆಚ್ಚಿನವರಾಗಿದ್ದಾರೆಂದು ಇದು ಸೂಚಿಸುತ್ತದೆ. ಅವರುಗಳು ಆತನ ಸೇವೆಯಲ್ಲಿ ಆತನೊಡನಿದ್ದರು–ಗುಡಾರ ಮಾಡುವುದರಲ್ಲಿ ಮಾತ್ರವಲ್ಲ,

ಆದರೆ ವಿಶೇಷವಾಗಿ ಆತನ ಮುಖ್ಯ ಕೆಲಸವಾದ ಸುವಾರ್ತಾ ಸೇವೆಯಲ್ಲಿ. ನಂತರ 6ನೇ ವಚನದಲ್ಲಿ ಆತನು 'ಬಹು ಶ್ರಮೆಪಟ್ಟ ಮರಿಯಳಿಗೆ ವಂದನೆ' ಎಂದು ಬರೆಯುತ್ತಾನೆ. ಈಕೆಯು ಪ್ರತ್ಯಕ್ಷವಾಗಿ ಜೊತೆ ಸೇವಕಿಯಾಗಿರಲಿಲ್ಲ. ಆಕೆಯು ಮಾಡಿದ ಸೇವೆಯನ್ನು ಅಪೋಸ್ತಲನು ಇಲ್ಲಿ ಸ್ಮರಿಸಿಕೊಳ್ಳುತ್ತಾನೆ. ಇವುಗಳು ಬಟ್ಟೆ ಒಗೆಯುವುದು, ದುರಸ್ತಿ ಮುಂತಾದ ಖಾಸಗಿ ಸೇವೆಯಾಗಿತ್ತು. 9ನೇ ವಚನದಲ್ಲಿ ಪ್ರಿಸ್ಕಿಲ್ಲಳ ಸೇವೆಯನ್ನು ಇದಕ್ಕೆ ವ್ಯತಿರಿಕ್ತವಾಗಿ ಸುಸಂಸ್ಕೃತ ಎಂದಿದ್ದಾನೆ. ನಿಜವಾಗಿ ಅಕ್ವಿಲನ ಹೆಸರು ಆತನ ಪತ್ನಿಯ ನಂತರ ಕೊಡಲ್ಪಟ್ಟಿರುವುದು ಆಕೆಯು ಆ ಇಬ್ಬರಲ್ಲಿ ಜೊತೆ ಸೇವಕಳಾಗಿ ಆಕೆ ಹೆಚ್ಚು ದಕ್ಷಳಾಗಿ ಕಂಡುಬಂದದ್ದರಿಂದ ಸಂಮಜಸವಾಗಿದೆ. ತ್ರುಫೈನ ಮತ್ತು ತ್ರುಫೋಸ ಇವರುಗಳು ಬೇರೆ ಇಬ್ಬರು ಸಹೋದರಿಯರಾಗಿದ್ದು ಕರ್ತನ ಸೇವೆಯಲ್ಲಿ ಅವರ ಪ್ರಯಾಸವನ್ನು ಬಹು ಗೌರವಯುತವಾಗಿ ಹೇಳಲಾಗಿದೆ (12ನೇ ವಚನ).

ಸಹೋದರಿಯರು ಕರ್ತನ ಸೇವೆಯಲ್ಲಿ ಮಾಡಿದ ಪ್ರಯಾಸವನ್ನು ನಿರ್ಲಕ್ಷಿಸುವ ಬೇರೆ ಯಾವ ಅರ್ಥ ವಿವರಣೆಗಳೂ ಸ್ಪಷ್ಟವಾಗಿ ತಪ್ಪಾಗಿಸುತ್ತಿದೆ. ಇಬ್ಬರು, ಮೂವರು ಅಥವಾ ಹೆಚ್ಚಿನವರು ಆರಾಧನೆ ಮತ್ತು ಸ್ತೋತ್ರಾರ್ಪಣೆ ಇಲ್ಲವೆ ಪರಸ್ಪರ ಅತ್ಮೋನ್ನತಿಗಾಗಿ ಕೂಡಿಬರುವ ಸಭೆಗಳಲ್ಲಿ ಸಹೋದರಿಯರು ಅಧೀನ ಸ್ಥಾನವನ್ನು ತೆಗೆದುಕೊಳ್ಳಬಹುದು ಮತ್ತು ನಾಯಕನ ಅಥವಾ ಬೋಧಕನ ಸ್ಥಾನವನ್ನು ಪಡೆಯಲು ಪ್ರಯತ್ನಿಸಬಾರದು. ಹೀಗೆ ಮಾಡಿದಲ್ಲಿ ಅದು ಕರ್ತನು ಸ್ವಾಭಾವಿಕವಾಗಿ ಮತ್ತು ವಿಧಿಯುಕ್ತವಾಗಿ ಸೇವೆಯ ನಾಯಕತ್ವವನ್ನು ವಹಿಸಿದ ಪುರುಷರ ಅಧಿಕಾರವನ್ನು ಕಸಕೊಳ್ಳು ವುದಾಗುತ್ತದೆ. ನಿಸ್ಸಂಧೇಹವಾಗಿ ಉತ್ತಮ ಕಾರಣಗಳಿಗಾಗಿ ನಾವು ಅದನ್ನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು.

ಅಪೋಸ್ತಲನ ನಿರ್ಬಂಧಗಳು ನಿಶ್ಚಯವಾಗಿ 1 ಕೊರಿಂಥ 14ರಲ್ಲಿ ಹೇಳಿರುವ ಕೂಡಿಬರುವ ಕೂಟಗಳ ಬಗ್ಗೆ ಸಂಬಂಧಿಸಿವೆ. ಈ ಕೂಟಗಳು ಸಹೋದರಿಯರನ್ನೂ ಹೊಂದಿವೆ ಮತ್ತು ಅವರು ನಿಶ್ಚಯವಾಗಿ ಸಂಗೀತಗಳನ್ನು ಹಾಡುವುದು, ಯಾರಿಂದಾದರೂ ಮಾಡಬಹುದಾದ ಪ್ರಾರ್ಥನೆಗಳು ಇವೇ ಮುಂತಾದ ಎಲ್ಲಾ ಆಶೀರ್ವಾದಗಳಲ್ಲಿಯೂ ಪಾಲುದಾರ ರಾಗಿದ್ದಾರೆ. ಅಪೋಸ್ತಲನು ಇಲ್ಲಿ ಅಂತಹ ಕೂಟಗಳಲ್ಲಿ ಅವರುಗಳಿಗೆ ಹೆಚ್ಚು ಲಾಭದಾಯಕವಾಗಲು ಇರಬೇಕಾದ ಕ್ರಮದ ಅಗತ್ಯತೆಗಳನ್ನು ಪದೇ ಪದೇ ಹೇಳುವವನಾಗಿದ್ದಾನೆ. ಒಬ್ಬರಿಗಿಂತ ಹೆಚ್ಚಿನವರು ಒಂದೇ ಸಮಯಕ್ಕೆ ಮಾತನಾಡುವುದಾಗಲೀ, ಪ್ರವಾದನೆ ಹೇಳುವುದನ್ನಾಗಲೀ ಮಾಡಬಾರದು ಮತ್ತು ಉಳಿದವರು ಅದನ್ನು ಲಕ್ಷ್ಯವಿಟ್ಟು ಕೇಳತಕ್ಕದ್ದು ಮತ್ತು ಒಂದು ಕೂಟದಲ್ಲಿ ಎರಡು ಅಥವಾ ಮೂವರು ಪ್ರವಚಕರು ಇಲ್ಲವೆ ಪ್ರವಾದನೆ ಹೇಳುವವರು ಮಾತ್ರವೇ ಮಾತನಾಡಬೇಕು, ಹೀಗೆ ಮಾಡಿದಲ್ಲಿ ಒಂದೇ ಸಮಯದಲ್ಲಿ ಮನೋಭಾವನೆಗಳಿಗೆ ಹೆಚ್ಚಿನ ವೈವಿಧ್ಯತೆ ಗಳುಂಟಾಗುವುದಿಲ್ಲ ಎಂಬಿತ್ಯಾದಿಯಾಗಿ ಆತನು ಇಲ್ಲಿ ಒತ್ತಾಯಿಸುತ್ತಾನೆ. ಅದರಂತೆ ಅರ್ಥವನ್ನು ಹೇಳುವವರಿಲ್ಲದಿದ್ದರೆ ವಾಣಿಗಳನ್ನಾಡುವವರು ಸಭೆಯಲ್ಲಿ ಸುಮ್ಮಗಿರಲಿ ಎಂದೂ ಹೇಳುತ್ತಾನೆ.

ಸ್ತ್ರೀಯರು ಅಂತಹ ಕೂಟಗಳಲ್ಲಿ ಮಾತನಾಡಲೇಬಾರದು. ಅವರು ಸಭೆಯ ನಂತರ ಅಥವಾ ತಮ್ಮ ಮನೆಗಳಲ್ಲಿ ತಮ್ಮ ಸ್ವಂತ ಪತಿಯೊಂದಿಗೆ ಅಥವಾ ಹೆಚ್ಚು ಪರಿಚಯವಿರುವ ಯುಕ್ತವಾದ ಸ್ವಂತ ಜನರೊಂದಿಗೆ ಅವರು ಕೂಟದಿಂದ ಹಿಂತಿರುಗುವಾಗ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದು ಅಥವಾ ಅಂತಹ ಸಹೋದರರೊಡನೆ ತಮ್ಮ ಪ್ರಶ್ನೆಗಳನ್ನು ಕೇಳಬಹುದು. ಈ ವಾಕ್ಯಭಾಗದಲ್ಲಿ ಮನೆ ಎಂಬ ಪದವು ಕುಟುಂಬ ಅಥವಾ ಪರಿಚಯಸ್ತರು ಎಂಬುದನ್ನು ಸೂಚಿಸುತ್ತದೆ. ಹೀಗಿರುವುದರಿಂದ ಅವರುಗಳು ತಮ್ಮ ಪ್ರಶ್ನೆಗಳನ್ನು ತಮ್ಮ ಪರಿಚಯಸ್ತ ಪುರುಷರ ಮೂಲಕವೇ ಪರಿಹರಿಸಿಕೊಳ್ಳಬೇಕೆಂಬುದು ಇದರ ಭಾವನೆಯಾಗಿದೆ. ಅಪೋಸ್ತಲನು ಮುಂದುವರೆದು "ದೇವಜನರ ಎಲ್ಲಾ ಸಭೆಗಳ ಮರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು; ಮಾತಾಡುವುದಕ್ಕೆ ಅವರಿಗೆ ಅಪ್ಪಣೆ ಇಲ್ಲ; ಅವರು ಅಧೀನದಲ್ಲಿರಬೇಕು; ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದೆಯಲ್ಲಾ" (1ಕೊರಿ. 14:34–36)ಎಂದು ಬರೆಯುತ್ತಾನೆ.

ಸ್ಪಷ್ಟವಾಗಿ ಕೊರಿಂಥ ಸಭೆಯಲ್ಲಿ ಕೆಲವರು "ಸ್ತ್ರೀಯರ ಅಧಿಕಾರ" ದ ಬಗ್ಗೆ ಒಲವು ತೋರುತ್ತಾ ಸಭೆಯಲ್ಲಿ ಸ್ತ್ರೀಪುರುಷರ ಅಧಿಕಾರದ ಬಗ್ಗೆ ಭಿನ್ನತೆಯಿರಬಾರದೆಂದು ಹೇಳಿದರು. ಆದರೆ ಅಪೊಸ್ತಲನು ಈ ಅಲೋಚನೆಯ ಬಗ್ಗೆ ನಕಾರಾತ್ಮಕ ವಾಗಿದ್ದುದಲ್ಲದೆ ವ್ಯತಿರಿಕ್ತವಾಗಿ ಕರ್ತನ ಜನರು ಗ್ರಹಿಸದ ನೂತನ ಪದ್ಧತಿಯನ್ನು ಜಾರಿಗೊಳಿಸುವ ಅವರ ಉದ್ಧಟತನದ ಆಲೋಚನೆಯನ್ನು ಖಂಡಿಸುತ್ತಾ "ಏನು, ದೇವರ ವಾಕ್ಯವು (ಸಂದೇಶ) ನಿಮ್ಮಿಂದಲೇ ಹೊರಟಿತೋ? (ನಿಮ್ಮಿಂದಲೇ ಉತ್ಪನ್ನವಾಯಿತೋ?) ನಿಮಗೆ (ಬೇರೆಲ್ಲಿಂದಾದರೂ) ಮಾತ್ರವೇ ಬಲಬಂತೋ? ಯಾವನಾದರೂ ತನ್ನನ್ನು ಪ್ರವಾದಿಯೆಂದಾಗಲೀ, ದೇವರಾತ್ಮನಿಂದ ನಡಿಸಲ್ಪಡುವವ ನೆಂದಾಗಲೀ ಭಾವಿಸಿ ಕೊಂಡರೆ ನಾನು ನಿಮಗೆ ಬರೆದಿರುವ ಸಂಗತಿಗಳು ಕರ್ತನ ವಿಧಿಯೇ ಎಂದು ಚೆನ್ನಾಗಿ ತಿಳುಕೊಳ್ಳಲಿ" (1 ಕೊರಿ. 14:36–37) ಎಂದಿದ್ದಾನೆ.ಇವುಗಳು ನನ್ನ ಸ್ವಂತ ಅಭಿಪ್ರಾಯಗಳಾಗಲೀ, ಭ್ರಮೆಯಾಗಲೀ ಅಲ್ಲ. ಆದುದರಿಂದ ನಾವು ಕೊರಿಂಥದವರಿಗಿಂತ ಹೆಚ್ಚಾಗಿ ನಮ್ಮ ಸ್ವಂತ ಅನಿಸಿಕೆಗಳನ್ನು ಅಥವಾ ತೀರ್ಮಾನಗಳನ್ನು ಈ ವಿಷಯದಲ್ಲಿ ತೆಗೆದುಕೊಳ್ಳಬಾರದು. ಆದರೆ ನಾವು ಅಪೋಸ್ತಲನು ಹೇಳಿದ ಕರ್ತನ ವಿಧಿಗೆ ತಲೆಬಾಗಲೇಬೇಕು. ಯಾರಾದರೂ ಈ ವಿಷಯದಲ್ಲಿ ಅಪೋಸ್ತಲನ ಮಾರ್ಗದರ್ಶನಗಳ ಬಗ್ಗೆ ತಗಾದೆಮಾಡಿದರೆ ಅಂಥವನು ಏಕರೂಪನಾಗಿದ್ದು ಸಂಪೂರ್ಣವಾಗಿ ಆತನ ಅಪೋಸ್ತಲತನವನ್ನು ತಿರಸ್ಕರಿಸಲಿ.

ನಮ್ಮ ಕರ್ತನು ದಯಪಾಲಿಸುವ ಸಭೆಯ ವರಗಳ ಬಗ್ಗೆ ಮಾತನಾಡುವ ಸಂಬಂಧದಲ್ಲಿ ನಾವು ನಮ್ಮ ಗಮನವನ್ನು ಪಂಚಾಶತ್ತಮ ದಿನಕ್ಕೆ ಕೊಂಡೊಯ್ಯುವುದು ಸೂಕ್ತ. "ಆತನು ಕೆಲವರನ್ನು ಅಪೋಸ್ತಲರನ್ನಾಗಿಯೂ, ಕೆಲವರನ್ನು ಪ್ರವಾದಿಗಳನ್ನಾಗಿಯೂ, ಕೆಲವರನ್ನು ಸುವಾರ್ತಿಕರನ್ನಾಗಿಯೂ, ಕೆಲವರನ್ನು ಸಭಾಪಾಲಕರನ್ನಾಗಿಯೂ, ಉಪದೇಶಿಗಳ ನ್ನಾಗಿಯೂ ಅನುಗ್ರಹಿಸಿದನು. ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದಕ್ಕೋಸ್ಕರವೂ ಆತನು ಇವರನ್ನು

ಅನುಗ್ರಹಿಸಿದನು" (ಎಫೆಸ. 4:11 ಮತ್ತು 12) ಎಂದು ಆತನು ಬರೆಯುತ್ತಾನೆ. ಗ್ರೀಕ್ ಭಾಷೆಯಲ್ಲಿ ಈ ಲೇಖನವು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳನ್ನೊಳಗೊಂಡಿದೆ. ಈ ವಾಕ್ಯ ಭಾಗದಲ್ಲಿ ಕರ್ತನು ಎಷ್ಟೊಂದು ವಿಶಿಷ್ಟವಾಗಿ ಪವಿತ್ರಾತ್ಮನ ಮೂಲಕವಾಗಿ ಸಭೆಗೆ ನೀಡಿರುವ ಕರ್ತನ ಆಸಕ್ತ ಸೇವಕರಲ್ಲಿ ಸ್ತ್ರೀ ಪುರುಷರ ಮಧ್ಯದಲ್ಲಿರುವ ಭೇದದ ಗೆರೆಯನ್ನು ಎಳೆದಿದ್ದಾನೆ ಎಂದು ಇದರಿಂದ ಅದ್ಭುತವಾದ ರೀತಿಯಲ್ಲಿ ನಾವು ನಿರ್ಧರಿಸಬಹುದು. ಲಿಂಗವನ್ನು ಸೂಚಿಸುವಂತೆ ಗ್ರೀಕ್ ಭಾಷೆಯ ವಾಕ್ಯಭಾಗದಲ್ಲಿ ಸೂಚಿಸಿರುವ ಸತ್ಯಸಂಗತಿಗಳು ಯಾವುವು? ಅಪೋಸ್ತಲರು, ಪ್ರವಾದಿಗಳು, ಸೌವಾರ್ತಿಕರು ಮತ್ತು ಸಭಾಪಾಲಕರುಗಳು ಇವರುಗಳ ಮುಂದೆ tous (plural, Accus., masculine) ಎಂಬ ಶಬ್ಧವು ಕಂಡುಬರುತ್ತದೆ. ಉಪದೇಶಿಗಳ ಮುಂದೆ ಯಾವುದೇ ಅಂತಹ ಪ್ರಸ್ತಾಪವಿಲ್ಲ. ಇದು ಇಲ್ಲಿ "ಸಹಾಯಕರು" ಎಂದು ಅನ್ವಯಿಸುತ್ತದೆ. (1 ಕೊರಿ. 12:28 ನೋಡಿರಿ) ಅಥವಾ ಇದಲ್ಲದೆ ಇದು ಪುರುಷ ಅಪೋಸ್ತಲರು, ಪುರುಷ ವಚನಕಾರರು, ಪುರುಷ ಸೌವಾರ್ತಿಕರು ಮತ್ತು ಎಲ್ಲಾ ಉಪದೇಶಿಗಳನ್ನೂ ಒಳಗೊಂಡ ಒಂದು ವ್ಯಾಪಕ ಶಬ್ಧವಾಗಿದೆ.

ನಾವಿಲ್ಲಿ ಲಕ್ಷಿಸಬೇಕಾದುದೆಂದರೆ, ಒಬ್ಬ ಸಹೋದರಿಯು ಕರ್ತನ ಅಥವಾ ಅಪೋಸ್ತಲರ ವಾಕ್ಯಗಳ ಚರ್ಚೆಯಲ್ಲಿರುವ ಯಾವುದೇ ಪ್ರಸ್ತಾಪದ ಬಗ್ಗೆ ಆಕೆಯ ಸ್ವಂತ ದೃಷ್ಟಿಕೋನವನ್ನು ನೀಡದೆ ಒಂದು ಕೂಟದ ಗಮನದ ಕಡೆಗೆ ಸೆಳೆಯುವುದನ್ನು ಬೋಧನೆಯೆಂದು ಕರೆಯಲಾಗದು ಅಥವಾ ಯಾವುದೇ ಅರ್ಥದಲ್ಲಿ ಅದನ್ನು ಪುರುಷನ ಅಧಿಕಾರದ ಕಸಕೊಳ್ಳುವಿಕೆ ಎಂದು ಸಹಾ ಹೇಳುವಂತಿಲ್ಲ ಇದಕ್ಕೆ ವ್ಯತಿರಿಕ್ತವಾಗಿ ಕೇವಲ ಆಕೆಯು ಮಾನ್ಯ ಮಾಡಿದ ಮತ್ತು ಅಧಿಕಾರಯುಕ್ತ ಬೋಧಕರುಗಳ ಮಾತುಗಳನ್ನು ಗಮನಕ್ಕೆ ತರುತ್ತಿದ್ದಿರಬಹುದು. ಅದೇ ರೀತಿಯಲ್ಲಿ ಒಬ್ಬ ಸಹೋದರಿಯು ಈ ಪುಸ್ತಕವನ್ನಾಗಲೀ ಅಥವಾ ನಮ್ಮ ಇತರ ವೇದ ಗ್ರಂಥಗಳ ವಿವರಣೆಯುಳ್ಳ ಪ್ರಕಾಶನವನ್ನು ಉಲ್ಲೇಖಿಸುವುದಾಗಲೀ ಅಥವಾ ಅದನ್ನು ಬೇರೆಯವರಿಗೆ ಓದಿ ಹೇಳುವುದಾಗಲೀ ಆಕೆಯ ಪಾಲಿಗೆ ಬೋಧನೆ ಎನಿಸದೆ ಅದು ಉಲ್ಲೇಖಿಸಿದ ಗ್ರಂಥಕರ್ತನ ಬೋಧನೆಯಾಗುವುದು. ಈ ರೀತಿಯಲ್ಲಿ ಕರ್ತನ ವ್ಯವಸ್ಥೆಯು ಆತನ ಹಿಂಡನ್ನು ಕಾಪಾಡುವುದು ಮತ್ತು ಅದೇ ಸಮಯದಲ್ಲಿ ಆವರ ಎಲ್ಲಾ ಅಗತ್ಯತೆಗಳಿಗೆ ಹೇರಳವಾಗಿ ಒದಗಿಸಬಲ್ಲದು.

ಎಲ್ಲರೂ ದೇವರ ಕಟ್ಟಳೆಗಳಿಗೆ ವಿಧೇಯರಾಗಬಹುದಾದರೂ ಸತ್ಯವೇದದ ಉಪಯೋಗದಲ್ಲಿ ಸ್ತ್ರೀಯು ಸಭೆಯ ಸೂಚಕವಾಗಿದ್ದಾಳೆ, ಪುರುಷನು ಸಭೆಯ ಶಿರಸ್ಸು ಅಥವಾ ಒಡೆಯನಾದ ಕರ್ತನಿಗೆ ಸೂಚಕವಾಗಿದ್ದಾನೆಂದು ತಿಳಿದುಕೊಳ್ಳದ ಹೊರತು ಯಾರೂ ಸಹಾ ಇವುಗಳನ್ನು ಖಚಿತವಾಗಿ ಗ್ರಹಿಸಲಾರರು. (ಎಫೆಸ. 5:23; 1 ಕೊರಿ. 11:3). ಸಭೆಯು ಕರ್ತನಿಗೆ ಬೋಧಿಸಲು ಪ್ರಯತ್ನ ಮಾಡಬಾರದು. ಅದರಂತೆ ಸಭೆಗೆ ಸಂಕೇತವಾಗಿರುವ ಸ್ತ್ರೀಯು ಸಹಾ ಕರ್ತನ ಸಂಕೇತವಾದ ಪುರುಷನ ಮೇಲೆ ಬೋಧಕನ ಪಾತ್ರವನ್ನು ನಿರ್ವಹಿಸಕೂಡದು. ಈ ಅಲೋಚನೆಗಳನ್ನು ತಮ್ಮ ಮನಸ್ಸುಗಳಲ್ಲಿ ಇಟ್ಟುಕೊಂಡು ಯಾವುದೇ ಸಹೋದರಿಯು ಸಹಾ ತಾತ್ಸಾರವನ್ನು ಅನುಭವಿಸುವುದಿಲ್ಲ ಮತ್ತು ಯಾವುದೇ ಸಹೋದರನು ದೇವರ ವಾಕ್ಯದ ನಿಯಮಗಳಿಂದ ಉಬ್ಬಿಕೊಳ್ಳುವುದಿಲ್ಲ. ಬದಲಾಗಿ ಎಲ್ಲರಲ್ಲಿಯೂ ಕರ್ತನೊಬ್ಬನೇ ಬೋಧಕನು ಎಂದು ತಿಳುವಳಿಕೆ ಉಂಟಾಗಿ ಯಾವ ಸಹೋದರನೂ ತನ್ನ ಬುದ್ಧಿವಂತಿಕೆಯನ್ನು ಪ್ರದರ್ಶಿಸುವ ಪ್ರಯತ್ನ ಮಾಡುವುದಿಲ್ಲ. ಬದಲಾಗಿ ತಮ್ಮ ಶಿರಸ್ಸಾದ ಕರ್ತನು ಸತ್ಯವೆಂದು ತಮಗೆ ತಿಳಿದ ಸಂಗತಿಗಳನ್ನು ಮಾತ್ರವೇ ಇತರರ ಮುಂದಿಡುತ್ತಾರೆ. ನಾವು ಈ ವಾಕ್ಯಗಳನ್ನು ( 1 ತಿಮೋ. 2:11,12) ಕರ್ತನಿಗೆ ಮತ್ತು ಆತನ ಸಭೆಗೆ ಅನ್ವಯಿಸೋಣ – ಸಭೆಯು ಮೌನವಾಗಿ ವಶವಾಗಿದ್ದು ಇದನ್ನು ಕಲಿತುಕೊಳ್ಳಲಿ: "ಉಪದೇಶ ಮಾಡುವುದಕ್ಕಾಗಲೀ ಕ್ರಿಸ್ತನ ಮೇಲೆ ಅಧಿಕಾರ ನಡೆಸುವುದಕ್ಕಾಗಲೀ ಸಭೆಗೆ ನಾನು ಅಪ್ಪಣೆ ಕೊಡುವುದಿಲ್ಲ, ಅವರು ಮೌನವಾಗಿರಬೇಕು"(1 ತಿಮೋ. 2:12)

## "ಆಕೆಯು ಮುಸುಕು ಹಾಕಿಕೊಳ್ಳಲಿ"
## "Let Her Be Covered"

ನಾವಿಗಾಗಲೇ ಸೂಚಿಸಿರುವಂತೆ* ಕ್ರಿಸ್ತನ ಪ್ರತಿರೂಪವಾಗಿರುವ ಮಹಾ ಯಾಜಕನು ಮಾತ್ರವೇ ತನ್ನ ಯಾಜಕ ಉಡುಪನ್ನು ಧರಿಸಿಕೊಂಡಿರುವಾಗ ತಲೆಗೆ ಮುಸುಕು ಹಾಕಿಕೊಳ್ಳದೇ ಹೋದನು. ಸಭೆಯ ಪ್ರತಿರೂಪವಾಗಿರುವ ಉಳಿದ ಎಲ್ಲಾ ಅಧೀನಯಾಜಕರುಗಳು ರಾಜವಂಶಯಾಜಕತ್ವದವರಾಗಿದ್ದರೂ ಮುಂಡಾಸಗಳನ್ನು(Bonnet) ಧರಿಸುತ್ತಿದ್ದರು. ಈ ನಮೂನೆಯ ಬೋಧನೆಯು ನಾವೀಗ ತಾನೇ ಕಂಡುಕೊಂಡ ಬೋಧನೆಯಂತೆಯೇ ಇತ್ತು. ನೂತನ ಸಭೆಯ ಕೂಟಗಳು ಕೂಡಿಬರುವಾಗ ಪ್ರತಿಸಂಕೇತವಾದ ಮಹಾಯಾಜಕನ ಸಹೋದರರ ಮೂಲಕ ಪ್ರತಿನಿಧಿಸುತ್ತಾನೆ. ಆದರೆ ಸಭೆ ಅಥವಾ ರಾಜವಂಶ ಯಾಜಕತ್ವವು ಸಹೋದರಿಯರ ಮೂಲಕ ಪ್ರತಿನಿಧಿಸಲ್ಪಡುತ್ತದೆ. ಇವರನ್ನು ಮುಸುಕು ಹಾಕಿಕೊಂಡಿರಬೇಕೆಂದು ಅಪೋಸ್ತಲನು ಹೇಳುವುದರಲ್ಲಿ ಸಭೆಯ ಕರ್ತನಿಗೆ ಅಧೀನವಾಗಿರಬೇಕೆಂಬ ಪಾಠವು ಇಲ್ಲಿ ಕಂಡುಬರುತ್ತದೆ. ಇದನ್ನು ಅಪೋಸ್ತಲನು 1ಕೊರಿ.11:3–7 ಮತ್ತು 10–15ರಲ್ಲಿ ವಿವರವಾಗಿ ತಿಳಿಸುತ್ತಾನೆ. (*Tabrancle Shadows ಪುಟ 36 ನೋಡಿರಿ)

ಅಪೋಸ್ತಲನು ಹೇಳುವಂತೆ ಸ್ತ್ರೀಯರಿಗೆ ತಲೆ ಮುಚ್ಚಿಕೊಳ್ಳುವಂತೆ ಪ್ರಾಕೃತಿಕವಾಗಿ ನೀಳವಾದ ಕೇಶವು ಕೊಡಲ್ಪಟ್ಟಿರುವುದರಿಂದ ಇದಕ್ಕಿಂತ ಹೆಚ್ಚಿನ ಅಗತ್ಯವಿಲ್ಲವೆಂದು ಕೆಲವರು ಊಹಿಸುತ್ತಾರೆ. ಆದರೆ ಆರನೆಯ ವಚನವು ಇದಕ್ಕೆ ವ್ಯತಿರಿಕ್ತವಾಗಿದೆ. ಇಲ್ಲಿ ಆತನು ಪ್ರಕೃತಿಗೆ ಅನುಸಾರವಾಗಿ ಸ್ತ್ರೀಯರು ತಮ್ಮ ತಲೆ ಕೂದಲನ್ನು ಬೆಳೆಯಲು ಬಿಡಬೇಕಲ್ಲದೆ ಅದರೊಂದಿಗೆ ಮುಸುಕನ್ನು ಸಹಾ ಹಾಕಿಕೊಳ್ಳಬೇಕೆಂದು ಹೇಳುತ್ತಾನೆ. 10ನೇ ವಚನದಲ್ಲಿ ಆತನು "ಸ್ತ್ರೀಯು ಪುರುಷನ ಅಧಿಕಾರ ಸೂಚಿಸುವ ಮುಸುಕನ್ನು ತಲೆಯ ಮೇಲೆ ಹಾಕಿಕೊಂಡಿರಬೇಕು" ಎಂದಿದ್ದಾನೆ. ಪುರುಷನಿಗೆ ಅಥವಾ ಆತನ ಅಧಿಕಾರಕ್ಕೆ ಅಧೀನವಾಗಿರುವುದಕ್ಕೆ ಇದೊಂದು ಸಂಕೇತವಾಗಿದೆಯಲ್ಲದೆ ಸಭೆಯು ಸಮಗ್ರವಾಗಿ ಕ್ರಿಸ್ತನ

ನಿಯಮಕ್ಕೆ ಒಳಗಾಗಿದೆ ಎಂದು ಇದು ಸಾಂಕೇತಿಕವಾಗಿ ಬೋಧಿಸುತ್ತದೆ. ನಾಲ್ಕನೆಯ ವಚನದ ಹೇಳಿಕೆಯು ಸ್ತ್ರೀಯರು ಸಭೆಯಲ್ಲಿ ಮೌನದಿಂದಿರಬೇಕು ಎಂಬ ಅಗತ್ಯತೆಗೆ ಒಂದು ತಿಕ್ಕಾಟವಾಗಿದೆ ಎಂದು ಮೊದಲಿಗೆ ಕಂಡುಬರುತ್ತದೆ. ನಮ್ಮ ಅಲೋಚನೆ ಏನೆಂದರೆ, ಸಭೆಯ ಸಾಮಾನ್ಯ ಆರಾಧನೆಗಳಲ್ಲಿ ಸ್ತ್ರೀಯರು ಸಾರ್ವಜನಿಕ ಪಾತ್ರವನ್ನು ನಿರ್ವಹಿಸ ಕೂಡದು, ಆದರೂ ಸಾಮಾಜಿಕ ಪ್ರಾರ್ಥನಾ ಹಾಗೂ ಸಾಕ್ಷಿ ನೀಡುವ ಸಭೆಗಳಲ್ಲಿ ಸಿದ್ಧಾಂತಗಳ ಬೋಧನೆಯಿಲ್ಲದಂತೆ ಸಹೋದರಿಯರು ತಮ್ಮ ತಲೆಗೆ ಮುಸುಕು ಹಾಕಿಕೊಂಡು ಭಾಗವಹಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ.

ಸಹೋದರಿಯರು ಶಾಶ್ವತವಾಗಿ ತಮ್ಮ ತಲೆಗೆ ಮುಸುಕು ಹಾಕಿಕೊಂಡಿರಬೇಕೆಂಬ ಪ್ರಸ್ತಾಪಕ್ಕೆ ಅನುಸಾರವಾಗಿ ಅಪೋಸ್ತಲನು ಒತ್ತಾಯಪಡಿಸಿದರೂ ಇದೊಂದು ದೈವಿಕ ಆಜ್ಞೆ ಎಂಬುದಾಗಿ ಆತನು ಹೇಳುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಆತನು "ಒಬ್ಬನು (ಈ ವಿಷಯವಾಗಿ) ವಾಗ್ವಾದ ಪ್ರಿಯನಾಗಿ ಕಾಣಿಸಿಕೊಂಡರೆ ಇಂತಹ ಪದ್ದತಿ ನಮ್ಮಲ್ಲಿಲ್ಲ (ಸಭೆಯ ಸಕಾರಾತ್ಮಕ ನಿಯಮಗಳಲ್ಲಿಲ್ಲ) ಮತ್ತು ದೇವರ ಸಭೆಗಳಲ್ಲಿಯೂ ಇಲ್ಲ ಎಂದು ತಿಳಿದುಕೊಳ್ಳಲಿ" (ವ 16) ಎಂದು ಸೇರಿಸಿದ್ದಾನೆ ಇದೊಂದು ಮಹತ್ವದ ಸಂಗತಿ ಎಂದು ಪರಿಗಣಿಸಬಾರದು; ಆದರೂ ದೇವರ ಚಿತ್ತವನ್ನು ನೆರವೇರಿಸ ಬಯಸುವ ಎಲ್ಲರೂ ಈ ವಿಷಯದಲ್ಲಿಯೂ ಮತ್ತು ಇತರ ವಿಷಯಗಳಲ್ಲಿಯೂ ಅವುಗಳ ಸಾಂಕೇತಿಕ ಯುಕ್ತತೆಯನ್ನು ಗ್ರಹಿಸುವ ಸಮಯದಿಂದ ನಿರ್ಧಿಷ್ಟವಾಗಿರಬೇಕು. "ದೇವದೂತರುಗಳ ನಿಮಿತ್ತ' ಎಂಬ ಮಾತುಗಳು ಬಹುಶಃ ಆಯ್ದುಕೊಂಡ ಹಿರಿಯರನ್ನು ಸೂಚಿಸುತ್ತದೆ, ಅವರು ವಿಶೇಷವಾಗಿ ಸಭೆಯ ಶಿರಸ್ಸಾಗಿರುವ ಕರ್ತನನ್ನು ಪ್ರತಿನಿಧಿಸುತ್ತಾರೆ – ಪ್ರಕಟನೆ 2:1 ನೋಡಿರಿ.

ಇದನ್ನು ಕ್ರೊಢೀಕರಿಸುತ್ತಾ ನಾವು ಸಲಹೆಮಾಡುವುದೇನೆಂದರೆ, ಅಪೋಸ್ತಲರ ಸ್ಫೂರ್ತಿದಾಯಕ ಮಾತುಗಳಿಗೆ ಸಭೆಯ ವ್ಯವಹಾರಗಳಲ್ಲಿ ಸಹೋದರಿಯರ ಅವಕಾಶಗಳಿಗೆ ಮನ್ನಣೆ ಕೊಟ್ಟು ಸಾಧ್ಯವಾದಷ್ಟು ಉದಾರವಾದ ಅರ್ಥವಿವರಣೆಯನ್ನು ನೀಡಬೇಕು. ನಮ್ಮ ತೀರ್ಮಾನವನ್ನು ನಾವು ಈ ಕೆಳಕಂಡಂತೆ ನಿಮ್ಮ ಮುಂದೆ ಇಡುವವರಾಗಿದ್ದೇವೆ :–

(1) ಸಭಾ ಹಿರಿಯರ ಮತ್ತು ಡೀಕನರುಗಳ ಆಯ್ಕೆಯಲ್ಲಿ ಸಹೋದರಿಯರಿಗೆ ಸಹೋದರಷ್ಟೇ ಸ್ವಾತಂತ್ರ್ಯವಿರಬೇಕು.

(2) ಸಹೋದರಿಯರು ಸಭೆಯಲ್ಲಿ ಹಿರಿಯರಾಗಿ ಅಥವಾ ಬೋಧಕರಾಗಿ ಸೇವೆ ಸಲ್ಲಿಸುವಂತಿಲ್ಲ. ಯಾಕೆಂದರೆ "ನಾನು ಸ್ತ್ರಿಯರಿಗೆ ಸಭೆಯಲ್ಲಿ ಉಪದೇಶ ಮಾಡುವುದಕ್ಕೆ ಅಪ್ಪಣೆಕೊಡುವುದಿಲ್ಲ" ಎಂದು ಅಪೋಸ್ತಲನು ಸ್ಪಷ್ಟವಾಗಿ ಹೇಳಿದ್ದಾನೆ (1 ತಿಮೋ. 2:12 ). ಹೇಗೂ ಇದು ಉಪದೇಶ ಅಥವಾ ಶಿಕ್ಷಣವಲ್ಲದ ಪ್ರಾರ್ಥನಾ ಅಥವಾ ಸಾಕ್ಷಿ ಹಾಗೂ ಬೇರೋಯದವರ (Berean Studies) ಅಧ್ಯಯನ ಮುಂತಾದ ಕೂಟಗಳಲ್ಲಿ ಸಹೋದರಿಯರು ಭಾಗವಹಿಸಲು ಅಡ್ಡಿಪಡಿಸುವುದೆಂದು ಅರ್ಥಮಾಡಬಾರದು. ಯಾಕೆಂದರೆ, ಅಪೋಸ್ತಲನು ಹೇಳುವಂತೆ, ಸ್ತ್ರೀಯು ಪ್ರಾರ್ಥನೆ ಅಥವಾ ಪ್ರವಾದನೆಯ (ಮಾತನಾಡುವ) ಸಮಯದಲ್ಲಿ ಮುಸುಕು ಹಾಕಿಕೊಳ್ಳುವಾಗ ಆ ಸ್ತ್ರೀಯು, ಸಹೋದರರು ವಿಶೇಷವಾಗಿ ಮಹಾ ಬೋಧಕನಾದ ಸ್ವಾಮಿಯನ್ನು ಪ್ರತಿನಿಧಿಸುತ್ತಾರೆಂದು ಒಪ್ಪಿಕೊಂಡ ಹಾಗಾಗುತ್ತದೆ (1ಕೊರಿಂಥ. 11:5,7,10). ಇಂತಹ ಭಾಗವಹಿಸುವಿಕೆಯನ್ನು ಬೋಧನೆಯೆಂದು ಪರಿಗಣಿಸಲಾಗದು ಯಾಕೆಂದರೆ ಭಾಗವಹಿಸುವ ಸಹೋದರರು ಬೋಧಕರಾಗಿರುವುದಿಲ್ಲ. "ಎಲ್ಲರೂ ಬೋಧಕರೋ?" ಇಲ್ಲ. ಕೆಲವರನ್ನು ಬೋಧಕರನ್ನಾಗಿಯೂ, ಕೆಲವರನ್ನು ಉಪದೇಶಿಗಳನ್ನಾಗಿಯೂ ವಿಶೇಷವಾದ ರೀತಿಯಲ್ಲಿ ಸದಾ ಪುರುಷರಲ್ಲಿಯೇ ಆಯ್ಕೆ ಮಾಡಲಾಗುವುದು ಎಂದು ಅಪೋಸ್ತಲನು ಹೇಳುತ್ತಾನೆ. (ಎಫೆಸ 4:11, 2 ತಿಮೋಥೆ 2:24; 1 ಕೊರಿಂಥ 12:28, 29 ಇವುಗಳನ್ನು ನೋಡಿರಿ). ■

* * * * * *